ಸಂಪುಟ: 05 ಸಂಚಿಕೆ: 224 ಪುಟಗಳು: 08 ಬುಧವಾರ 29 ಅಕ್ಟೋಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


**ಮುಂಜಾನೆ ಮಾತು**

ಹಣವಿಲ್ಲದ ಪುರುಷನನ್ನು ವೇಶ್ಯೆ ತೊರೆಯುತ್ತಾಳೆ. ಸೋತ ರಾಜನನ್ನು ಪ್ರಜೆಗಳು ತೊರೆಯುತ್ತಾರೆ. ಹಣ್ಣು ಬಿಡದ ಮರವನ್ನು ಪಕ್ಷಿಗಳು ತೊರೆಯುತ್ತವೆ. ಪ್ರಪಂಚದಲ್ಲಿ ಎಲ್ಲರೂ ಲಾಭವನ್ನೇ ನೋಡುತ್ತಾರೆ


ಉದಯ ವಾಹಿನಿ
ವರದಿಗಾರರು ಬೇಕಾಗಿದ್ದಾರೆ
ಎಂಎ., ಜರ್ನಲಿಸಂ ಮಾಡಿರುವಂತಹ ಉತ್ಸಾಹಿ ಯುವಕ ಯುವತಿಯರು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕೆಲಸ ಮಾಡುವಂತಹ
ರಾಜ್ಯದಾದ್ಯಂತ ವರದಿಗಾರರು ಬೇಕಾಗಿದ್ದಾರೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9448225696
+91 8035841833
#: 1230 'JAYAMAHAL 13th cross, 2nd phase, Girinagar, Bangalore-560085. (Near to Bangalore one park, opposite mandya medical)
udayavahininews@gmail.com

# ಹೈಕೋರ್ಟ್ ನೋಟಿಸ್ ಜಾರಿ ಸರ್ಕಾರಕ್ಕೆ ಛೀಮಾರಿ

## ಆರ್‌ಎಸ್‌ಎಸ್ ಪಥಸಂಚಲನ ನಿರಾತಂಕ




## ಆರ್‌ಎಸ್‌ಎಸ್ ವಿಚಾರದಲ್ಲಿ ಧಾರವಾಡ ಪೀಠ ಪ್ರಮುಖ ನಿರ್ಧಾರ



## ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧದ ಆದೇಶ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ





ಆರ್‌ಎಸ್‌ಎಸ್ ಮತ್ತು ಸರ್ಕಾರದ ನಡುವಣ ಸಂಘರ್ಷ ಸಂಬಂಧ ಹೈಕೋರ್ಟ್ ಮಹತ್ವದ ಮಧ್ಯಂತರ ಆದೇಶ ನೀಡಿದೆ. ಸರ್ಕಾರದ ಆದೇಶ ಹೈಕೋರ್ಟ್ ಪೀಠ ತಡೆಯಾಜ್ಞೆ ನೀಡಿದೆ. ಇದು ಸರ್ಕಾರಕ್ಕೆ ಹಿನ್ನಡೆ ಅಲ್ಲ. ನಾವು ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸುತ್ತೇವೆ. ಈ ಸಂಬಂಧ ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಲು ಸರ್ಕಾರ ನಿರ್ಧರಿಸಿದೆ. ಸಿಎಂ ಸಿದ್ದರಾಮಯ್ಯ ಕೂಡ ಮೇಲ್ಮನವಿ ಸಲ್ಲಿಸಲು ಸ್ಪಂದಿಸಿದ್ದಾರೆ.

-ಡಾ ಜಿ ಪರಮೇಶ್ವರ್
ಗೃಹ ಸಚಿವ

ಸಾರ್ವಜನಿಕ ಅಥವಾ ಸರ್ಕಾರಿ ಸ್ಥಳಗಳಲ್ಲಿ ಖಾಸಗಿ ಸಂಸ್ಥೆಗಳ ಚಟುವಟಿಕೆಗಳನ್ನು ನಿಯಂತ್ರಿಸುವ ರಾಜ್ಯ ಸರ್ಕಾರದ ಆದೇಶಕ್ಕೆ ಕರ್ನಾಟಕ ಹೈಕೋರ್ಟ್ ನೀಡಿರುವ ತಡೆಯಾಜ್ಞೆ ವಿರುದ್ಧ ಮೇಲ್ಮನವಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ. ಆದೇಶಕ್ಕೆ ಕರ್ನಾಟಕ ಹೈಕೋರ್ಟ್ ಮಂಗಳವಾರ ತಡೆ ನೀಡಿದ್ದು,ಸರ್ಕಾರಕ್ಕೆ ಹಿನ್ನಡೆಯಾಗಿದೆ. ವಿಭಾಗೀಯ ಪೀಠದ ಮುಂದೆ ಮೇಲ್ಮನವಿ ಸಲ್ಲಿಸುವಂತೆ ನಾನು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಆದೇಶದ ವಿರುದ್ಧ ನಾವು ಮೇಲ್ಮನವಿ ಸಲ್ಲಿಸುತ್ತೇವೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

## ಸಾರ್ವಜನಿಕ ಸ್ಥಳದಲ್ಲಿ ಖಾಸಗಿ ಸಂಸ್ಥೆಗಳ ಚಟುವಟಿಕೆಗೆ ಅನುಮತಿ ಕಡ್ಡಾಯ ಆದೇಶಕ್ಕೆ ಹೈಕೋರ್ಟ್ ತಡೆ

### ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ

ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸುವ ಭಾಗವಾಗಿ ಸರ್ಕಾರಿ ಸ್ಥಳಗಳಲ್ಲಿ ಅನುಮತಿಯಿಲ್ಲದೇ ಮೆರವಣಿಗೆ, ಸಭೆ ನಡೆಸುವ ಸಂಬಂಧ ಹತ್ತು ಜನಕ್ಕಿಂತ ಹೆಚ್ಚು ಮಂದಿ ಸೇರಿದರೆ ಅಕ್ರಮ ಕೂಟ ಎಂದು ಆದೇಶಿತ್ತು. ಈ ಮೂಲಕ ಸರ್ಕಾರವು ಪೊಲೀಸ್ ಕಾಯಿದೆಯಡಿ ಅಧಿಕಾರ ಚಲಾಯಿಸಿತ್ತು. ಈ ಹಿನ್ನೆಲೆ ರಾಜ್ಯ ಸರ್ಕಾರ, ಗೃಹ ಇಲಾಖೆ ಮತ್ತು ಹುಬ್ಬಳ್ಳಿ ಆಯುಕ್ತರಿಗೆ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.



• ಉದಯವಾಹಿನಿ, ಬೆಂಗಳೂರು

ರಸ್ತೆ, ಉದ್ಯಾನ, ಆಟದ ಮೈದಾನ ಸೇರಿ ಸಾರ್ವಜನಿಕ ಸ್ಥಳಗಳಲ್ಲಿ ೩೦10ಕ್ಕೂ ಅಧಿಕ ಮಂದಿ ಗುಂಪು ಸೇರಿದರೆ ಅದನ್ನು 'ಅಕ್ರಮ ಕೂಟ'ವೆಂದು ಪರಿಗಣಿಸುವ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ.

ರಾಜ್ಯ ಸರ್ಕಾರ 2025ರ ಅಕ್ಟೋಬರ್ 18ರಂದು ಹೊರಡಿಸಿದ್ದ ಆದೇಶ ರದ್ದು ಕೋರಿ ಹುಬ್ಬಳ್ಳಿಯ ಪುನಶ್ಚೇತನ ಸೇವಾ ಟ್ರಸ್ಟ್, ವಿ-ಕೇರ್ ಫೌಂಡೇಷನ್ ಸೇರಿ ನಾಲ್ವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಧಾರವಾಡ ಪೀಠ ಈ ಆದೇಶ ನೀಡಿದೆ. ಅಲ್ಲದೆ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆಯ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರಧಾನ ಕಾರ್ಯದರ್ಶಿ, ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಧಾರವಾಡ ನಗರ ಪೊಲೀಸ್ ಆಯುಕ್ತರು, ಧಾರವಾಡ ಉಪ ಆಯುಕ್ತರು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಕಾರ್ಯದರ್ಶಿ ಹಾಗೂ ಹುಬ್ಬಳ್ಳಿ-ಧಾರವಾಡ ಪಾಲಿಕೆ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಿದ ಪೀಠ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ನವೆಂಬರ್ 17ಕ್ಕೆ ಮುಂದೂಡಿತು. ಸಾರ್ವಜನಿಕ ಸ್ಥಳಗಳಲ್ಲಿ ಹತ್ತಕ್ಕೂ ಅಧಿಕ ಮಂದಿ ಗುಂಪು ಸೇರುವುದನ್ನು ನಿರ್ಬಂಧಿಸಿ ಸರ್ಕಾರ ಹೊರಡಿಸಿರುವ ಆದೇಶವು ಮೇಲ್ನೋಟಕ್ಕೆ ಸಂವಿಧಾನದ ಪರಿಚ್ಛೇದ 19(1)(ಎ) (ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ) ಹಾಗೂ 19(1)(ಬಿ) (ಶಸ್ತ್ರಾಸ್ತ್ರರಹಿತವಾಗಿ, ಶಾಂತಿಯುತವಾಗಿ ಒಟ್ಟುಗೂಡುವ) ಅಡಿಯಲ್ಲಿ ಸಾರ್ವಜನಿಕರಿಗೆ ದೊರೆತಿರುವ ಹಕ್ಕುಗಳನ್ನು ಕಸಿದುಕೊಳ್ಳುವಂತಿದೆ ಎಂದು ಪೀಠ ಹೇಳಿದೆ. ಒಂದು ವೇಳೆ ಸರ್ಕಾರದ ಆದೇಶವನ್ನು ಹೀಗೇ ಬಿಟ್ಟರೆ, ಸಾರ್ವಜನಿಕರ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡಂತಾಗಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಜಾರಿ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಅಲ್ಲದೆ, ಸರ್ಕಾರದ ಆದೇಶವು ಸಂವಿಧಾನದ ಪರಿಚ್ಛೇದ 13(2) (ಸಂವಿಧಾನದಲ್ಲಿ ಖಾತ್ರಿಪಡಿಸಿದ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಅಥವಾ ಸಂಕ್ಷೇಪಿಸುವ ಯಾವುದೇ ಕಾನೂನನ್ನು ರಾಜ್ಯ ರಚಿಸಬಾರದು) ಅನ್ನು ಉಲ್ಲಂಘಿಸುವ ಹಿನ್ನೆಲೆಯಲ್ಲಿ, ಅಕ್ಟೋಬರ್ 18ರ ಸರ್ಕಾರದ ಆದೇಶ ಹಾಗೂ ಆ ನಂತರದ ಎಲ್ಲಾ ಆದೇಶಗಳಿಗೆ ಮುಂದಿನ ವಿಚಾರಣೆಯವರೆಗೆ ತಡೆಯಾಜ್ಞೆ ನೀಡಲಾಗಿದೆ ಎಂದು ಹೈಕೋರ್ಟ್ ಆದೇಶದಲ್ಲಿ ಪೀಠ ವಿವರಿಸಿದೆ.

### ಕಾಂಗ್ರೆಸ್‌ಗೆ ಎಚ್ಚರಿಕೆಯ ಪಾಠ: ಬಿಜೆಪಿ

ಸಾರ್ವಜನಿಕ ಸ್ಥಳಗಳಲ್ಲಿ ಸಂಘ ಸಂಸ್ಥೆಗಳ ಚಟುವಟಿಕೆಗಳನ್ನು ನಿರ್ಬಂಧಿಸುವ ಆದೇಶವನ್ನು ರದ್ದು ಮಾಡಿದ ಹೈಕೋರ್ಟ್ ತೀರ್ಪನ್ನು ಬಿಜೆಪಿ ಸ್ವಾಗತಿಸಿದ್ದು, ಇದು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯ ಸಂದೇಶ ಎಂದು ಹೇಳಿದೆ. ಈ ಬಗ್ಗೆ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಬಿಜೆಪಿ ನಾಯಕ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಕಾಂಗ್ರೆಸ್ ಸರ್ಕಾರಕ್ಕೆ ಇದು ಎಚ್ಚರಿಕೆಯ ಪಾಠ. ಸಂವಿಧಾನದ ಮೂಲ ಆಶಯಗಳನ್ನು ಗೌರವಿಸುವುದನ್ನು ಸರ್ಕಾರ ಪಾಲಿಸಲಿ. ಸರ್ಕಾರಿ ಆವರಣದಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಖಾಸಗಿ ಸಂಸ್ಥೆಗಳು ಪೂರ್ವಾನುಮತಿ ಪಡೆಯುವುದನ್ನು ಕಡ್ಡಾಯಗೊಳಿಸುವ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್‌ನ ಧಾರವಾಡ ಪೀಠವು ತಡೆ ನೀಡಿದೆ ಎಂದು ಬರೆದುಕೊಂಡಿದ್ದಾರೆ.

### ಆರ್‌ಎಸ್‌ಎಸ್ ಬೆಂಬಲಿಗರಿಗೆ ಸಂತಸ

ಪುನಶ್ಚೇತನ ಸೇವಾ ಸಂಸ್ಥೆ ವಾದ ಎಂದರೆ, ಈ ಆದೇಶ ಸಂವಿಧಾನದ 19(1)(ಎ) (ಭಾಷಣ ಸ್ವಾತಂತ್ರ್ಯ) ಮತ್ತು 19(1)(ಸಿ) (ಸಂಘ ರಚನೆ) ಹಕ್ಕುಗಳನ್ನು ಉಲ್ಲಂಘಿಸುತ್ತದೆ. ಇದು ಆರ್ ಎಸ್‌ಎಸ್‌ನಂತಹ ಸಂಘಟನೆಗಳ ಚಟುವಟಿಕೆಗಳನ್ನು ಗುರಿಯಾಗಿಸಿ, ರಾಜಕೀಯ ದ್ವೇಷದಿಂದ ಬಂದಿದೆ ಎಂದು ಆರೋಪಿಸಿದ್ದಾರೆ. ಹೈಕೋರ್ಟ್ ತಡೆಯಾಜ್ಞೆಯಿಂದ ಆದೇಶದ ಜಾರಿ ನಿಲ್ಲಿಸಲ್ಪಟ್ಟಿದ್ದು, ಸಂಸ್ಥೆ ಸಂತೋಷಪಡುತ್ತಿದೆ. ಆರ್‌ಎಸ್‌ಎಸ್ ಬೆಂಬಲಿಗರೂ ಇದನ್ನು ಸ್ವಾಗತಿಸಿದ್ದಾರೆ. ರಾಜ್ಯ ಸರ್ಕಾರದ ಆದೇಶಕ್ಕೆ ನ್ಯಾ. ಎಂ. ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ ಮಧ್ಯಂತರ ತಡೆ ನೀಡಿ ಆದೇಶ ಹೊರಡಿಸಿದೆ. ರಾಜ್ಯ ಸರ್ಕಾರ, ಗೃಹ ಇಲಾಖೆ, ಹುಬ್ಬಳ್ಳಿ ಕಮಿಷನರ್ ಗೆ ಹೈಕೋರ್ಟ್ ನೋಟಿಸ್ ನೀಡಿದೆ, ಅ.18, 2025 ರ ರಾಜ್ಯ ಸರ್ಕಾರದ ಆದೇಶ ಪ್ರಶ್ನಿಸಿರುವ ಸಂಸ್ಥೆ, ಅನುಮತಿಯಿಲ್ಲದೇ 10 ಜನ ಜನ ಸೇರಿದರೆ ಅಪರಾಧವೆಂದು ಸರ್ಕಾರದ ಆದೇಶದಲ್ಲಿದೆ. ರಸ್ತೆ, ಪಾರ್ಕ್, ಮೈದಾನ, ಕೆರೆ ಇತ್ಯಾದಿಗಳ ಪ್ರವೇಶಕ್ಕೆ ನಿರ್ಬಂಧ ವಿಧಿಸಿದೆ. ಪೊಲೀಸ್ ಕಾಯ್ದೆಯಲ್ಲಿ ಇರುವ ಅಧಿಕಾರವನ್ನು ಸರ್ಕಾರ ಆದೇಶದ ಮೂಲಕ ಚಲಾಯಿಸಿದೆ. ಸಂವಿಧಾನದ ಆರ್ಟಿಕಲ್ 19 (1)ಎ, ಬಿ, ನೀಡಿರುವ ಹಕ್ಕನ್ನು ಸರ್ಕಾರ ಕಿತ್ತುಕೊಂಡಿದೆ ಎಂದು ಆರೋಪಿಸಿದೆ. ಇದಕ್ಕೆ ಸಂವಿಧಾನ ನೀಡಿರುವ ಹಕ್ಕನ್ನು ಸರ್ಕಾರಿ ಆದೇಶ ಕಿತ್ತುಕೊಳ್ಳಲಾಗದು ಎಂದು ಹೈಕೋರ್ಟ್ ಪೀಠ ಹೇಳಿದೆ.

## ವಿಧಾನ ಪರಿಷತ್: ಅಭ್ಯರ್ಥಿ ಹೆಸರು ಶೀಘ್ರ ಅಂತಿಮ: ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಪದವೀಧರ ಮತ್ತು ಶಿಕ್ಷಕರ ತಲಾ ಎರಡು ಕ್ಷೇತ್ರಗಳಿಂದ ವಿಧಾನ ಪರಿಷತ್‌ಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಗೆ ಮುಂದಿನ 8-10 ದಿನಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು. ಕೆಪಿಸಿಸಿ ಕಚೇರಿಯ ಭಾರತ ಜೋಡೊ ಸಭಾಂಗಣದಲ್ಲಿ ಪಶ್ಚಿಮ ಮತ್ತು ಆಗ್ನೇಯ ಪದವೀಧರ ಕ್ಷೇತ್ರ ಹಾಗೂ ಈಶಾನ್ಯ ಮತ್ತು ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಬಳಿಕ ಅವರು ಈ ವಿಷಯ ತಿಳಿಸಿದರು. 'ಈ ಚುನಾವಣೆಗೆ ಪಕ್ಷದ ಕಾರ್ಯಕರ್ತರನ್ನು ಸನ್ನದ್ಧಗೊಳಿಸಲು ಸಭೆ ನಡೆಸಿದ್ದೇವೆ. ಕಾರ್ಯಕರ್ತರು ಹಾಗೂ ಟಿಕೆಟ್ ಆಕಾಂಕ್ಷಿಗಳ ಜೊತೆ ಚರ್ಚಿಸಿದ ನಂತರ ಹೈಕಮಾಂಡ್‌ಗೆ ಹೆಸರುಗಳನ್ನು ಶಿಫಾರಸು ಮಾಡಲಾಗುವುದು' ಎಂದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಸಚಿವರಾದ ಎನ್.ಎಸ್. ಬೋಸರಾಜು, ರಹೀಂ ಖಾನ್, ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಸಂಸದರಾದ ರಾಧಾಕೃಷ್ಣ ದೊಡ್ಡಮನಿ, ಜಿ. ಕುಮಾರ್ ನಾಯಕ್, ಸಾಗರ್ ಖಂಡ್ರೆ, ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಸೌಮ್ಯಾ ರೆಡ್ಡಿ, ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್ ಇದ್ದರು.

## ಕಸಾಪಗೆ ಆಡಳಿತಾಧಿಕಾರಿ ನೇಮಕ, ಕೆ. ಎಂ. ಗಾಯಿತ್ರಿ ಅಧಿಕಾರ ಸ್ವೀಕಾರ

• ಉದಯವಾಹಿನಿ, ಬೆಂಗಳೂರು

ಡಾ. ಮಹೇಶ್ ಜೋಶಿ ಅಧ್ಯಕ್ಷರಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಣ ಹಾಗೂ ಅಧಿಕಾರ ದುರ್ಬಳಕೆ ಆರೋಪ ಹಿನ್ನೆಲೆಯಲ್ಲಿ ಸರ್ಕಾರ ಆಡಳಿತಾಧಿಕಾರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ ಅವರನ್ನು ನೇಮಿಸಿದ್ದು, ಅವರಿಂದು ಕಸಾಪ ಕೇಂದ್ರ ಕಚೇರಿಗೆ ತೆರಳಿ ಅಧಿಕಾರ ಸ್ವೀಕರಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಣಕಾಸಿನ ಅವ್ಯವಹಾರ ಹಾಗೂ ಅಧಿಕಾರ ದುರ್ಬಳಕೆ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಸಹಕಾರ ಇಲಾಖೆ ಕಳೆದ ಜುಲೈನಲ್ಲಿ ವಿಚಾರಣಾಧಿಕಾರಿಯನ್ನು ನೇಮಕ ಮಾಡಿತ್ತು.ವಿಚಾರಣೆಗೆ ಸಂಬಂಧಿಸಿದಂತೆ ಕಸಾಪದವರು ನಿಗದಿತ ಕಾಲಾವಧಿಯಲ್ಲಿ ಹಾಜರಾಗದಿರುವುದು, ಅಗತ್ಯ ದಾಖಲಾತಿಗಳನ್ನು ಒದಗಿಸದಿರುವ ಕಾರಣ ನೀಡಿ, ಆಡಳಿತಾಧಿಕಾರಿ ನೇಮಿಸುವಂತೆ ಸಹಕಾರ ಇಲಾಖೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಈ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಸರ್ಕಾರ ನೇಮಕ ಮಾಡಿದೆ.

## ಯೋಗೀಶ ಕೊಲೆ ಪ್ರಕರಣ: ಸಿಬಿಐ ಅರ್ಜಿ ಪುರಸ್ಕರಿಸಿದ ಸುಪ್ರೀಂ

• ಉದಯವಾಹಿನಿ, ನವದೆಹಲಿ

ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಸಾಕ್ಷ್ಯ ನಾಶ ಮಾಡಿರುವ ಸಂಬಂಧ ಸಿಬಿಐ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ಪುರಸ್ಕರಿಸಿದೆ. ಇದರಿಂದಾಗಿ, ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಸಂಕಷ್ಟ ಎದುರಾಗಿದೆ. ಕೊಲೆ ಪ್ರಕರಣದಲ್ಲಿ ಸಾಕ್ಷ್ಯ ನಾಶ ಮಾಡಿದ ಬಗ್ಗೆ ಕುಲಕರ್ಣಿ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು. ಈ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಕೇಂದ್ರ ತನಿಖಾ ತಂಡವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

2016ರ ಜೂನ್ 15ರಂದು ಧಾರವಾಡದ ಸಪ್ತಾಪುರದಲ್ಲಿರುವ ಜಿಮ್ ಎದುರು ಯೋಗೀಶಗೌಡ ಕೊಲೆ ನಡೆದಿತ್ತು. 2019ರ ಸೆಪ್ಟೆಂಬರ್ 6ರಂದು ಬಿ.ಎಸ್. ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ಆದೇಶಿಸಿತ್ತು.

## ಸ್ಪೀಕರ್ ಯುಟಿ ಖಾದರ್ ಮೇಲಿನ ಆರೋಪದ ಬಗ್ಗೆ ನ್ಯಾಯಾಂಗ ತನಿಖೆಯಾಗಲಿ

• ಉದಯವಾಹಿನಿ ಬೆಂಗಳೂರು

ಸ್ಪೀಕರ್ ಯು.ಟಿ.ಖಾದರ್ ಅವರ ಅವಧಿಯಲ್ಲಿ ವಿವಾದ, ಗೊಂದಲ, ಭ್ರಷ್ಟಾಚಾರದ ಆರೋಪಗಳು ಕೇಳಿಬಂದಿವೆ ಎಂದು ಸಂಸದ ಮತ್ತು ರಾಜ್ಯ ವಿಧಾನಸಭೆಯ ಮಾಜಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಆರೋಪಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಪೀಕರ್ ಸ್ಥಾನದ ವಿರುದ್ಧ ಬಂದಿರುವ ಆರೋಪಗಳಿಂದ ಆ ಸ್ಥಾನವು ಮುಕ್ತವಾಗಬೇಕು. ಇದಕ್ಕಾಗಿ ಕಾರ್ಯನಿರತ ನ್ಯಾಯಮೂರ್ತಿಗಳಿಂದ ಆರೋಪಗಳ ಕುರಿತು ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಸ್ಪೀಕರ್ ಕಾರ್ಯಾಲಯದ ಟೆಂಡರ್ ಮಂಗಳೂರು ಮೂಲದವರಿಗೇ ಯಾಕೆ ಸಿಗುತ್ತಿದೆ ಎಂದು ಕೇಳಿದ ಅವರು, ಅದೂ ಯಾರಿಗೋ ಕೆಲವರಿಗೇ ಯಾಕೆ ಸಿಗುತ್ತಿದೆ ಎಂದು ಪ್ರಶ್ನೆ




ಮಾಡಿದರು. ವಿಧಾನಸಭಾಧ್ಯಕ್ಷರ ಸಚಿವಾಲಯದ ಅಧಿಕಾರಿಗಳ ಅಭಿಪ್ರಾಯ ಏನಿತ್ತು ನನಗೆ ಗೊತ್ತಿರುವ ಪ್ರಕಾರ ಹಣಕಾಸು ಇಲಾಖೆ ಖರೀದಿಗಳನ್ನು ತಿರಸ್ಕರಿಸಿದೆ. ಬಳಿಕ ಹಣಕಾಸು ಇಲಾಖೆ ಹೊಣೆ ಹೊತ್ತ ಮುಖ್ಯಮಂತ್ರಿಗಳೇ ಒಪ್ಪಿಗೆ ಕೊಡಿಸಿದ ಆರೋಪವಿದೆ.

### ಊಟ, ಉಪಹಾರ ಅಗತ್ಯವಿತ್ತೇ

ಸರಕಾರದ ವತಿಯಿಂದ ಊಟ, ಉಪಹಾರ ಕೊಡಲು ಸ್ಪೀಕರ್ ಆರಂಭಿಸಿದರು. ಇದು ಅಗತ್ಯವಿತ್ತೇ ಎಂದು ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕೇಳಿ, ಇಲ್ಲ ಎಂದು ಮೇಲ್ನೋಟಕ್ಕೆ ಕಾಣುತ್ತದೆ ಎಂದರು. ಹಾಸು ಹೊದಿಕೆ ಬದಲಿಸಿ, ಕಾರ್ಪೆಟ್ ಬದಲಿಸಿದ್ದಲ್ಲದೇ ಸುಣ್ಣ ಬಣ್ಣ ಹೊಡೆಸಿದರು. ಅವರು ಒಂದೊಂದು ಮುಟ್ಟಿದರೂ ಅದರೊಳಗೆ ಇನ್ನೇನೋ ಇದೆ ಎಂಬ ಅನುಮಾನಗಳು ವ್ಯಾಪಕವಾಗಿ ಬೆಳವಣಿಗೆ ಆಗಿದೆ ಎಂದು ವಿಶ್ಲೇಷಿಸಿದರು.

ಯು.ಟಿ.ಖಾದರರಿಗೆ ಸ್ವತಃ ಸಿಎಂ ಅವರೇ ಬೆಂಬಲ ಕೊಟ್ಟ ಆಕ್ಷೇಪವಿದೆ ಎಂದರು. ಖರೀದಿ ತುರ್ತಾಗಿ ಮಾಡಬೇಕಾದ ಕೆಲಸ ಏನಿತ್ತು ಎಂದು ಕೇಳಿದರು. ವಿಧಾನಸಭೆಯ ಪ್ರಧಾನ ಬಾಗಿಲಿಗೆ ರೋಸ್ ವುಡ್‌ನ ಮರದ ಕೆತ್ತನೆಯ ಚೌಕಟ್ಟನ್ನು ಮಾಡಿಸಿದಲ್ಲಿಂದ ಭ್ರಷ್ಟಾಚಾರದ ಆರೋಪಗಳು ಆರಂಭವಾಗಿತ್ತು. ಸಭಾಂಗಣಕ್ಕೆ ಹೊಸ ಟಿ.ವಿ.ಸೆಟ್ ಅನ್ನು ಅಳವಡಿಸಿದ್ದರು. ಎಐ ಮಾನಿಟರ್ ಸಿಸ್ಟಂ ಅನ್ನು ಹಾಕಲು ಸಾಕಷ್ಟು ಖರ್ಚು ವೆಚ್ಚಗಳಾಗಿವೆ. ಎಲ್ಲಾ ಶಾಸಕರಿಗೆ ಗಂಡಭೇರುಂಡ ಹೋಲಿಕೆಯ ಗಡಿಯಾರಗಳನ್ನು ಕೊಟ್ಟರು. ಮೊಗಸಾಲೆಯಲ್ಲಿ ಯಂತ್ರ ಅಳವಡಿಸಿ ಮಸಾಜ್ ಪಾರ್ಲರ್ ಮಾದರಿಯಲ್ಲಿ ಬದಲಾಯಿಸಿದ್ದಕ್ಕೆ ದೊಡ್ಡ ಪ್ರಮಾಣದ ವಿರೋಧ ವ್ಯಕ್ತವಾಗಿತ್ತು ಎಂದು ತಿಳಿಸಿದರು.

## 8500 ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ಭರ್ತಿಗೆ ಸಿದ್ದರಾಮಯ್ಯ ಅನುಮತಿ

### ■ ಪೊಲೀಸರ ಆರೋಗ್ಯ ತಪಾಸಣೆ ವೆಚ್ಚವನ್ನು 1500 ರೂ. ಹೆಚ್ಚಿಸಲಾಗಿದೆ ಎಂದ ಪರಮೇಶ್ವರ್

• ಉದಯವಾಹಿನಿ ಬೆಂಗಳೂರು

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ವಿಶೇಷವಾಗಿ ದೇಶದಲ್ಲಿ ಉತ್ತಮ ಪೊಲೀಸ್ ವ್ಯವಸ್ಥೆ. ಈ ಬಗ್ಗೆ ನನಗೆ ಹೆಮ್ಮೆ ಇದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ಹೇಳಿದರು. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ 'ಪೊಲೀಸ್ ಸಿಬ್ಬಂದಿಗಳ ಪೀಕ್ ಕ್ಯಾಪ್ ಪರಿಚಯ ಮತ್ತು ವಿತರಣೆ' ಹಾಗೂ 'ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ ಉದ್ಘಾಟನೆ' ಮತ್ತು 'ಸನ್ಮಿತ್ರ ಬಿಡುಗಡೆ' ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂಡಿಯಾ ಜಸ್ಟೀಸ್ ರಿಪೋರ್ಟ್ ಪ್ರಕಾರ ಪೊಲೀಸ್ ಯಾವ ರೀತಿ ನಡೆದುಕೊಳ್ಳುತ್ತಿದೆ. ನಾಗರಿಕರಿಗೆ ನ್ಯಾಯ ಸಿಗುವುದು ಸೇರಿದಂತೆ ಕೆಲವು ಮಾನದಂಡಗಳನ್ನು ಇಟ್ಟುಕೊಂಡು ಸಮೀಕ್ಷೆ ಮಾಡಿದ್ದಾರೆ. ಕರ್ನಾಟಕ ನಂಬರ್ ಒಂದನೇ ಸ್ಥಾನದಲ್ಲಿದೆ ಎಂದರು.

ಬ್ರಿಟೀಷರ ಕಾಲದಲ್ಲಿ ನಮ್ಮ ದೇಶದ ಪೊಲೀಸರಿಗೆ ಯಾವ ರೀತಿಯ ಸಮವಸ್ತ್ರ ಕೊಡುತ್ತಿದ್ದರು, ಯಾವ ರೀತಿಯಾಗಿ ನಡೆಸಿಕೊಳ್ಳುತ್ತಿದ್ದರು. ಸ್ವಾತಂತ್ರ್ಯ ಬಂದ ನಂತರ ಪೊಲೀಸ್ ಇಲಾಖೆಯಲ್ಲಿ ಬದಲಾವಣೆ ತಂದು, ನಡೆಸಿಕೊಂಡು ಬರಲಾಗಿದೆ.

ಬ್ರಿಟೀಷ್ ಕಾಲದಲ್ಲಿ ಸ್ಲೋಚ್ ಹ್ಯಾಟ್ ಹಾಕಿಕೊಳ್ಳುತ್ತಿದ್ದರು. 1953ರಲ್ಲಿ ಆರ್ಮ್ ಫೋರ್ಸ್‌ಗೆ ಹ್ಯಾಟ್ ಪರಿಚಯಿಸಲಾಯಿತು. ಸಾಮಾನ್ಯ ಪೊಲೀಸ್ ಸಿಬ್ಬಂದಿಗೆ ಟರ್ಬನ್ ಹಾಕುತ್ತಿದ್ದನ್ನು ಗಮನಿಸಿದ್ದೇವೆ.



1973ರಲ್ಲಿ ದೇವರಾಜು ಅರಸು ಸಿಎಂ ಆಗಿದ್ದಾಗ ನಮ್ಮ ಪೊಲೀಸ್ ಸಿಬ್ಬಂದಿಗೆ ಸ್ಲೋಚ್ ಹ್ಯಾಟ್ ಪರಿಚಯಿಸಿದರು. ಅಲ್ಲಿಂದ ಇಲ್ಲಿವರೆಗೆ ಯಾವುದೇ ಬದಲಾವಣೆ ಇಲ್ಲದೆ, ಕಷ್ಟನೋ, ಸುಖನೋ ನಮ್ಮ ಸಿಬ್ಬಂದಿಗಳು ಅನುಭವಿಸಿಕೊಂಡು ಬಂದಿದ್ದಾರೆ.

ಕ್ಯಾಪ್ ಬದಲಾವಣೆ ಮಾಡುವಂತೆ ಅನೇಕ ಬಾರಿ ಬೇಡಿಕೆಗಳು ಬಂದಿವೆ. ಮಳೆ ಬಂದಾಗ ಹೆಚ್ಚು ತೂಕ ಅಗುತ್ತದೆ. ನೋಡುವುದಕ್ಕು ಅಷ್ಟು ಸುಂದರವಾಗಿ ಕಾಣುವುದಿಲ್ಲ ಎಂಬ ಅಭಿಪ್ರಾಯಗಳು ಬಂದವು. 2015ರಲ್ಲಿ ನಾನು ಗೃಹ ಸಚಿವನಾಗಿದ್ದಾಗಲೂ ಬದಲಾವಣೆಯ ಪ್ರಸ್ತಾವನೆ ಬಂದಿತ್ತು. ಅನೇಕ ಕಾರಣಗಳಿಂದ ಸಾಧ್ಯವಾಗಲಿಲ್ಲ.

ಈ ಬಾರಿ ಪ್ರಸ್ತಾವನೆ ಬಂದಾಗ ಚರ್ಚೆ ಮಾಡಿದಾಗ, ಇಲಾಖೆಯ ಹಿರಿಯ ಅಧಿಕಾರಿಗಳು, ಬೇರೆ ರಾಜ್ಯಗಳಲ್ಲಿ ಯಾವ ರೀತಿಯ ಕ್ಯಾಪ್ ಧರಿಸುತ್ತಾರೆ ಎಂಬ ಮಾಹಿತಿ ತರಿಸಿಕೊಂಡು ಕ್ಯಾಪ್‌ಗಳನ್ನು ಪ್ರದರ್ಶನ ಮಾಡಿದರು. ಸಿಎಂ ಅವರು ನೀಲಿ ಬಣ್ಣದ ಕ್ಯಾಪ್ ಆಯ್ಕೆ ಮಾಡಿದರು. ಇಲಾಖೆಯ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಪೊಲೀಸ್ ಇಲಾಖೆಗೆ ಇಂದು ಐತಿಹಾಸಿಕ ದಿನ.

ಕ್ಯಾಪ್ ಧರಿಸಿದ ತಕ್ಷಣ ಎಷ್ಟು ಸ್ಮಾರ್ಟ್ ಆಗಿ ಕಾಣಿಸುತ್ತಿದ್ದಾರೆ. ಒಂದು ರೀತಿಯಲ್ಲಿ ಆತ್ಮಸ್ಥೈರ್ಯ ಬಂದಿದೆ. ನಾವು ಕೂಡ ಅಧಿಕಾರಿಗಳಿಗೂ, ನಮಗು ಯಾವುದೇ ವ್ಯತ್ಯಾಸವಿಲ್ಲ ಎಂಬ ಆತ್ಮಸ್ಥೈರ್ಯ ನಿಮ್ಮಲ್ಲಿ ಮೂಡಿದೆ. ಇಡೀ ದೇಶದಲ್ಲಿ ಬೇರೆ ರಾಜ್ಯಗಳಲ್ಲಿನ ಕಾನೂನು ಸುವ್ಯವಸ್ಥೆ ಗಮನಿಸಿದರೆ, ಕರ್ನಾಟಕದಲ್ಲಿ ಹೆಚ್ಚಿನ ಶಾಂತಿಯಿಂದ ಇದೆ. ಕಳೆದ ಎರಡು ವರ್ಷಗಳಿಂದ ಯಾವುದೇ ರೀತಿಯ ಕೋಮು ಗಲಭೆಗಳು, ಅಹಿತಕರ ಘಟನೆಗಳನ್ನು ನಡೆಸಲು ಆಸ್ಪದ ನೀಡಿಲ್ಲ. ಕಾನೂನು ಸುವ್ಯವಸ್ಥೆ ಹಾಳು ಮಾಡಲು ಬಿಟ್ಟಿಲ್ಲ. ಅದಕ್ಕೆ ಮುಖ್ಯ ಕಾರಣ ಇಲಾಖೆಯ ಸಿಬ್ಬಂದಿಗಳು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲಾಖೆಗೆ ಸಂಬಂಧಿಸಿದ ಅನೇಕ ಪ್ರಸ್ತಾವನೆಗಳಿಗೆ ಅನುಮೋದನೆ ಮಾಡಿಕೊಟ್ಟಿದ್ದಾರೆ. ಇನ್ಸ್‌ಪೆಕ್ಟರ್ ಹುದ್ದೆಯಿಂದ ಎಸ್‌ಪಿ ಹುದ್ದೆಯವರೆಗಿನ ಅಧಿಕಾರಿಗಳನ್ನು ಎರಡು ವರ್ಷದವರೆಗೆ ವರ್ಗಾವಣೆ ಮಾಡದಂತೆ ಕಾನೂನು ತಂದಿದ್ದೇವೆ. ಕನಿಷ್ಟ ಎರಡು ವರ್ಷ ಒಂದೇ ಸ್ಥಳದಲ್ಲಿ ಕೆಲಸ ಮಾಡಲು ಅವಕಾಶ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ ಎಂಬ ನಿಟ್ಟಿನಲ್ಲಿ ಕಾನೂನಾತ್ಮಕವಾಗಿ ಬದಲಾವಣೆ ತಂದಿದ್ದೇವೆ. ಬಹಳ ಜನ ಇದನ್ನು ಪ್ರಶಂಸೆ ಮಾಡಿದ್ದಾರೆ. ಕೆಳ ಹಂತದ ಸಿಬ್ಬಂದಿಗಳಿಗೆ ಎಸ್‌ಪಿ ಹಂತದಲ್ಲಿ ವರ್ಗಾವಣೆ ಮಾಡಲು ಅವಕಾಶ ಮಾಡ ಕೊಟ್ಟಿದ್ದೇವೆ ಎಂದರು.

### ಕಾನೂನು ಸುವ್ಯವಸ್ಥೆ ಹಾಳು ಮಾಡಿಲ್ಲ

### ಪೊಲೀಸ್ ಸಿಬ್ಬಂದಿಗಳ ಪರವಾದ ವಾತಾವರಣ

ಇಲಾಖೆಯಲ್ಲಿ ರಜೆ ತೆಗೆದುಕೊಳ್ಳುವುದೇ ದೊಡ್ಡ ಸಮಸ್ಯೆಯಾಗಿತ್ತು. ಇದನ್ನು ಸರಳಗೊಳಿಸಲಾಗಿದೆ. ಪೊಲೀಸ್ ಸಿಬ್ಬಂದಿಗಳ ಪರವಾದ ವಾತಾವರಣವನ್ನು ಅಧಿಕಾರಿಗಳು ಸೃಷ್ಟಿ ಮಾಡಿದ್ದಾರೆ ಎಂದರು. ರಾಜ್ಯ ಸರ್ಕಾರ ಪೊಲೀಸ್ ಇಲಾಖೆಗೆ ಒಳ್ಳೆಯ ವಾತಾವರಣ ಮಾಡಿಕೊಟ್ಟಿದೆ. ರಾಜ್ಯದ ಜನತೆಯ ಆಪೇಕ್ಷೆಯಂತೆ ಕೆಲಸ ಮಾಡಬೇಕಿದೆ. ಕರ್ನಾಟಕವನ್ನು ಶಾಂತಿಯ ತೋಟವನ್ನಾಗಿ ಮಾಡಬೇಕು ಎಂಬ ಬದ್ಧತೆ ನಮಗೆ ಇದೆ. ಆ ದೃಷ್ಟಿಯಲ್ಲಿ ತಾವೆಲ್ಲ ಕೆಲಸ ಮಾಡುತ್ತೀರಿ ಎಂದು ಭರವಸೆ ವ್ಯಕ್ತಪಡಿಸಿದರು.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,082/Gram24ct ₹11,075/Gram22ct | ಬೆಳ್ಳಿ: ₹152.00/Gram

# ನಮ್ಮ ಮೆಟ್ರೋದಲ್ಲಿ ಬರಲಿದೆ ಸೈಬರ್ ಸುರಕ್ಷತಾ ಕೇಂದ್ರ

## ಮೆಟ್ರೋ ಸಂಭಾವ್ಯ ಸೈಬರ್ ದಾಳಿ ತಡೆಯಲು, ಸಿಸಿಟಿವಿ ಮೇಲ್ವಿಚಾರಣೆಗಾಗಿ ಅತ್ಯಾಧುನಿಕ ಭದ್ರತಾ ಕಾರ್ಯಾಚರಣೆ

• ಉದಯವಾಹಿನಿ, ಬೆಂಗಳೂರು

ಸಂಭಾವ್ಯ ಸೈಬರ್ ದಾಳಿ ತಡೆಯಲು, ಸಿಸಿಟಿವಿ ಕ್ಯಾಮೆರಾಗಳ ಮೇಲ್ವಿಚಾರಣೆಯನ್ನು ಒಂದೇ ಸೂರಿನಡಿ ನಡೆಸುವ ಉದ್ದೇಶದಿಂದ ಬೆಂಗಳೂರು ಮೆಟ್ರೋ ರೈಲು ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಅತ್ಯಾಧುನಿಕ ಭದ್ರತಾ ಕಾರ್ಯಾಚರಣೆ ಕೇಂದ್ರ (ಎಸ್‌ಒಸಿ) ನಿರ್ಮಾಣಕ್ಕೆ ಮುಂದಾಗಿದೆ.

ಬಿಎಂಆರ್‌ಸಿಎಲ್, ಮೆಟ್ರೋದ ಸುರಕ್ಷತಾ ಕಾರ್ಯಾಚರಣೆ ದೃಢಪಡಿಸುವ ಉದ್ದೇಶದಿಂದ ಬೆಯಪ್ಪನಹಳ್ಳಿ ಡಿಪೋದಲ್ಲಿ ಈ ಕೇಂದ್ರ ತೆರೆಯುತ್ತಿದೆ. ಮುಂಬರುವ ದಿನಗಳಲ್ಲಿ ಎದುರಾಗುವ ಸೈಬರ್ ದಾಳಿ ತಡೆಯುವುದು ಹಾಗೂ ಮೆಟ್ರೋದ ಒಳಗೆ ಮತ್ತು ನಿಲ್ದಾಣಗಳಲ್ಲಿನ ಸಿಸಿ ಕ್ಯಾಮೆರಾ ಮೇಲ್ವಿಚಾರಣೆಗೆ ಈ ಭದ್ರತಾ ಕಾರ್ಯಾಚರಣೆ ಕೇಂದ್ರ 'ಕಮಾಂಡ್ ಸೆಂಟರ್' ಆಗಿ ಕಾರ್ಯನಿರ್ವಹಿಸಲಿದೆ.

ಎಸ್‌ಒಸಿ ನಿರ್ಮಾಣಕ್ಕೆ ಈಗಾಗಲೇ ಬಿಎಂಆರ್‌ಸಿಎಲ್ ಟೆಂಡರ್ ಕರೆದಿದ್ದು, ಮುಂದಿನ ಕೆಲವೇ ತಿಂಗಳಲ್ಲಿ ಅನುಷ್ಠಾನ ಮಾಡಲಾಗುತ್ತದೆ. ಈ ಮೂಲಕ ಭದ್ರತಾ ಕಾರ್ಯಾಚರಣೆ ಕೇಂದ್ರ ಆರಂಭಿಸಿದ ದೇಶದ ಮೊದಲ ಮೆಟ್ರೋ ಸಂಸ್ಥೆ ಎನ್ನುವ ಹೆಗ್ಗಳಿಕೆಗೂ ಪಾತ್ರವಾಗಲಿದೆ.


ಉದಯವಾಹಿನಿ ಚಿತ್ರ

**ವೈಯಕ್ತಿಕ ಸೈಬರ್ ಅಪರಾಧಗಳು**

ಬೆಂಗಳೂರು ಮೆಟ್ರೋ 66 ನಿಲ್ದಾಣಗಳನ್ನು ಹೊಂದಿದ್ದು, ಪ್ರತಿ ನಿಲ್ದಾಣದಲ್ಲೂ ಸುಮಾರು 200 ಕ್ಯಾಮೆರಾಗಳಿವೆ. ಒಟ್ಟು ಸುಮಾರು 13,200 ಕ್ಯಾಮೆರಾಗಳಿವೆ. ಬೋಗಿಗಳಲ್ಲಿ 1,368 ಕ್ಯಾಮೆರಾಗಳಿವೆ.

ಆರು ಬೋಗಿಗಳ ರೈಲುಗಳಲ್ಲಿ ಪ್ರತಿ ಕೋಚ್‌ನಲ್ಲಿ ನಾಲ್ಕು ಕ್ಯಾಮೆರಾಗಳಿವೆ. ಸುಮಾರು 1,200 ಕಂಪ್ಯೂಟರ್‌ಗಳು ಸಹ ಇವೆ. ನಮ್ಮ ಮೆಟ್ರೋದ ಸಂಪೂರ್ಣ ಐಟಿ ವ್ಯವಸ್ಥೆಯನ್ನು ಸುರಕ್ಷಿತವಾಗಿಡಲು, ತಂತ್ರಜ್ಞಾನದ ಲೋಪವನ್ನು ಪತ್ತೆ ಹಚ್ಚಲು ಈ ಕೇಂದ್ರ ನೆರವಾಗಲಿದೆ. ರೈಲಿನ ಒಳಗೆ ಮತ್ತು ಹೊರಗಡೆ ಅಳವಡಿಸಿದ ಎಲ್ಲಾ ಸಿಸಿ ಕ್ಯಾಮೆರಾಗಳ ಮೇಲ್ವಿಚಾರಣೆ ನಡೆಸಲಾಗುತ್ತದೆ. ಈ ಮೂಲಕ ಮೆಟ್ರೋದ ಒಳಗೆ ನಡೆಯುವ ಅಹಿತಕರ ಘಟನೆಗಳು ಮತ್ತು ನಿಲ್ದಾಣದಲ್ಲಿ ಭದ್ರತೆ ಮೇಲೆ ನಿರಂತರ ಕಣ್ಗಾವಲಿಡಲಿದೆ. ಈ ಕೇಂದ್ರದಲ್ಲಿ ನುರಿತ ಸೈಬರ್ ಭದ್ರತಾ ಸಿಬ್ಬಂದಿ ದಿನದ 24 ಗಂಟೆ ಮೇಲ್ವಿಚಾರಣೆ ನಡೆಸಲಿದ್ದಾರೆ.

**ಸಂಭವನೀಯ ಸೈಬರ್ ಅಪರಾಧದ ವಿಧಗಳು**

**ವ್ಯವಸ್ಥೆಯ ಮೇಲೆ ದಾಳಿ:** ಮೆಟ್ರೋ ರೈಲುಗಳ ಸಂಚಾರ, ಟಿಕೆಟ್ ವ್ಯವಸ್ಥೆಗಳು ಮತ್ತು ಇತರ ಪ್ರಮುಖ ಕಾರ್ಯಾಚರಣೆಗಳನ್ನು ನಿಯಂತ್ರಿಸುವ ಕಂಪ್ಯೂಟರ್ ವ್ಯವಸ್ಥೆಗಳನ್ನು ಹ್ಯಾಕ್ ಮಾಡುವುದು.

**ವೈಯಕ್ತಿಕ ಸೈಬರ್ ಅಪರಾಧಗಳು:** ಪ್ರಯಾಣಿಕರ ಮೇಲೆ ವೈಯಕ್ತಿಕವಾಗಿ ನಡೆಸುವ ಅಪರಾಧಗಳು, ಉದಾಹರಣೆಗೆ ಫೋಟೋಗಳನ್ನು ಒಪ್ಪಿಗೆಯಿಲ್ಲದೆ ಹಂಚಿಕೊಳ್ಳುವುದು, ವೈಯಕ್ತಿಕ ಮಾಹಿತಿ ಕದಿಯುವುದು ಇತ್ಯಾದಿ.

ಈ ನಡುವೆ, ಯುಐಟಿಪಿ ಇಂಡಿಯಾ ಅರ್ಬನ್ ರೈಲ್ ಕಾನ್ಫರೆನ್ಸ್- 2025ನಲ್ಲಿ ಈ ಬಗ್ಗೆ ಚರ್ಚೆ ನಡೆದಿತ್ತು. ದೇಶದ ಮೆಟ್ರೋ ರೈಲು ವ್ಯವಸ್ಥೆಗಳಲ್ಲಿ ಸೈಬರ್ ಸೆಕ್ಯೂರಿಟಿ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು,'' ಎಂಬ ಸಲಹೆ ಕೇಳಿ ಬಂದಿತ್ತು.

**ಸೈಬರ್ ದಾಳಿಯ ಎಚ್ಚರಿಕೆ**

2025ರ ಏ. 28ರಂದು ಸ್ಪೇನ್ ಮತ್ತು ಪೋರ್ಚುಗಲ್‌ನಲ್ಲಿ ಸಂಭವಿಸಿದ ವಿದ್ಯುತ್ ಕಡಿತದಿಂದಾಗಿ 1.50 ಲಕ್ಷಕ್ಕೂ ಹೆಚ್ಚು ಮೆಟ್ರೋ ಪ್ರಯಾಣಿಕರು ಪರದಾಡಿದ್ದರು. ವಿದ್ಯುತ್ ಕಡಿತಕ್ಕೆ ತಾಂತ್ರಿಕ ದೋಷ ಕಾರಣವಾಗಿರಬಹುದು ಇಲ್ಲವೇ ಸೈಬರ್ ದಾಳಿಯೂ ಕಾರಣವಾಗಿರಬಹುದು ಎಂದು ತಜ್ಞರು ಎಚ್ಚರಿಸಿದ್ದರು.

**ಸಂಭವನೀಯ ಪರಿಣಾಮಗಳು**

- **ಸಂಚಾರ ಅಡಚಣೆ:** ರೈಲು ಸಂಚಾರ ನಿಲುಗಡೆ, ದೊಡ್ಡ ಪ್ರಮಾಣದ ಪ್ರಯಾಣಿಕರಿಗೆ ತೊಂದರೆ ಉಂಟಾಗಬಹುದು.
- **ಆರ್ಥಿಕ ನಷ್ಟ:** ಟಿಕೆಟ್ ವ್ಯವಸ್ಥೆ ಹ್ಯಾಕ್ ಆದರೆ ಆರ್ಥಿಕ ನಷ್ಟ ಉಂಟಾಗಬಹುದು.

## ಭಜನೆ, ಪ್ರವಚನ ಮತ್ತು ಹರಿಕಥೆ

• ಉದಯವಾಹಿನಿ, ಬೆಂಗಳೂರು



ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಹೊಸಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಅಕ್ಟೋಬರ್ 28 ರಿಂದ 30ರ ವರೆಗೆ ಪ್ರತಿದಿನ ಸಂಜೆ 6 ರಿಂದ 7ರ ವರೆಗೆ ಶ್ರೀಮತಿ ಮಂಗಳಾ ಭಾಸ್ಕರ್ ಮತ್ತು ಸಂಗಡಿಗರಿಂದ ಭಜನೆ, 7 ರಿಂದ 8ರ ವರೆಗೆ ಶ್ರೀ ಎನ್.ಪಿ. ಮೋಹನಕುಮಾರ್ ಭಟ್ಟರ್ ಅರ್ಚಕರು ಇವರಿಂದ ಧಾರ್ಮಿಕ ಪ್ರವಚನ. ಅಕ್ಟೋಬರ್ 31, ಶುಕ್ರವಾರ ಸಂಜೆ 6-30ಕ್ಕೆ ಡಾ|| ಎಂ. ಬಿ. ರಾಜಶೇಖರ ಶಾಸ್ತ್ರಿಗಳು, ತುಮಕೂರು ಇವರಿಂದ ಹರಿಕಥೆ ಏರ್ಪಡಿಸಿದೆ ಎಂದು ಟಿ ಟಿ ಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ತಿಳಿಸಿದ್ದಾರೆ (ಸರ್ವರಿಗೂ ಸುಸ್ವಾಗತ)

## ಬಿಟಿಎಂ ಬಡಾವಣೆಯಲ್ಲಿ ಆಸ್ತಿ ವಶ

• ಉದಯವಾಹಿನಿ, ಬೆಂಗಳೂರು

ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮುಂದುವರಿಸಿದ್ದು, ನಡೆದ ಕಾರ್ಯಾಚರಣೆಯಲ್ಲಿ ಬಿಟಿಎಂ 1ನೇ ಹಂತದಲ್ಲಿ ರೂ.12.25 ಕೋಟಿ ಆಸ್ತಿಯನ್ನು ವಶಪಡಿಸಿಕೊಂಡಿದೆ.ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ತಾವರೆಕೆರೆ ಗ್ರಾಮದ ಸರ್ವೆ ನಂ. 50ರಲ್ಲಿ 6,629 ಚದರ ಅಡಿ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಶೆಡ್ ಹಾಗೂ ಕಾಂಪೌಂಡ್ ಅನ್ನು ತೆರವುಗೊಳಿಸಿ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ವಶಪಡಿಸಿಕೊಂಡು, ಸುತ್ತಲೂ ಬೇಲಿ ಹಾಕಿದೆ. ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಕಾರ್ಯಪಾಲಕ ಇಂಜಿನಿಯರ್‌ಗಳು, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು ಹಾಗೂ ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಯಿತು.

## ಕೆರೆಗಳ ಅಭಿವೃದ್ಧಿಗೆ ಆದ್ಯತೆ, ಒತ್ತುವರಿಗೆ ಕ್ರಮ: ಶಾಸಕ ಎಸ್. ಮುನಿರಾಜು

• ಉದಯವಾಹಿನಿ, ಪೀಣ್ಯ ದಾಸರಹಳ್ಳಿ

ಕ್ಷೇತ್ರದ ಕೆರೆಗಳ ಅಭಿವೃದ್ಧಿಗಾಗಿ ಆದ್ಯತೆ ನೀಡುತ್ತಿದ್ದು, ಕೆರೆಯ ಒತ್ತುವರಿಯನ್ನು ತಡೆಯಲು ತಂತಿಬೇಲಿ ಹಾಕಲಾಗುತ್ತಿದೆ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.ಕ್ಷೇತ್ರದ ನೆಲಗದರನಹಳ್ಳಿ, ಶಿವಪುರ ಮತ್ತು ಅಬ್ಬಿಗೆರೆ ಕೆರೆಗಳ ಸುತ್ತ ತಂತಿ ಬೇಲಿ ಅಳವಡಿಕೆ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. 'ಈಗಾಗಲೇ ಆಗಿರುವ ಕೆರೆಯ ಒತ್ತುವರಿಯನ್ನು ಅಳತೆ ಮಾಡಿಸಿ ಸೂಕ್ತ ಕಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮುಂದೆ ಕೆರೆಯ ಜಾಗ ಒತ್ತುವರಿಯಾಗದಂತೆ ಸುತ್ತಲೂ ತಂತಿಬೇಲಿ ಅಳವಡಿಸಿ, ಭದ್ರತೆ ಒದಗಿಸಲಾಗುತ್ತಿದೆ. ಸಾರ್ವಜನಿಕರ ಹಿತ ದೃಷ್ಟಿಯಿಂದ ಕೆರೆಯ ಸುತ್ತಲೂ ವಾಯುವಿಹಾರಕ್ಕೆ ಸೂಕ್ತ ನಡಿಗೆ ಪಥ ನಿರ್ಮಿಸಲಾಗುತ್ತಿದೆ' ಎಂದು ತಿಳಿಸಿದರು.

ಕಮ್ಮಗೊಂಡನಹಳ್ಳಿಯ ಕೆರೆ ಅಭಿವೃದ್ಧಿಯನ್ನು ಅಧಿಕಾರಿಗಳೊಂದಿಗೆ ಮುನಿರಾಜು ಪರಿಶೀಲಿಸಿದರು. ಇಂಜಿನಿಯರ್‌ಗಳಾದ ವೆಂಕಟೇಶ್, ಶಿಲ್ಪ, ಪ್ರವೀಣ್, ನರಸಿಂಹಮೂರ್ತಿ, ಸ್ಥಳೀಯ ಮುಖಂಡರಾದ ನಿಸರ್ಗ ಕೆಂಪರಾಜು, ಮೇದರಹಳ್ಳಿ ಸೋಮಶೇಖರ್, ರಮೇಶ್ ಯಾದವ್, ಜಬ್ಬಾರ್, ಲಾರಿ ಮಂಜಣ್ಣ, ಶಬರಿ ಮಂಜುನಾಥ್ ಉಪಸ್ಥಿತರಿದ್ದರು.

## ವಿರೋಧಿಗಳನ್ನು ಬೆದರಿಸುತ್ತಿದ್ದ ಆರೋಪಿ ಬಂಧನ:4 ಜೀವಂತ ಗುಂಡು, ಪಿಸ್ತೂಲ್ ಜಪ್ತಿ

• ಉದಯವಾಹಿನಿ, ಬೆಂಗಳೂರು

ಪಿಸ್ತೂಲ್ ಹಾಗೂ ಜೀವಂತ ಗುಂಡುಗಳನ್ನು ಇಟ್ಟುಕೊಂಡು ತನ್ನ ವಿರೋಧಿಗಳನ್ನು ಬೆದರಿಸುತ್ತಿದ್ದ ಆರೋಪಿಯನ್ನು ಸಿಸಿಬಿಯ ಸಂಘಟಿತ ಅಪರಾಧ ದಳದ (ಪೂರ್ವ) ಸಿಬ್ಬಂದಿ ಬಂಧಿಸಿದ್ದಾರೆ.ರೋಷನ್ ಅಹಮದ್ ಅಲಿಯಾಸ್ ಬಾಬನ್ ಬಂಧಿತ.

ಆರೋಪಿಯಿಂದ ಪಿಸ್ತೂಲ್ ಹಾಗೂ ನಾಲ್ಕು ಜೀವಂತ ಗುಂಡು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.ಆರೋಪಿ ಪಿಸ್ತೂಲ್ ಇಟ್ಟುಕೊಂಡು ದುಷ್ಕೃತ್ಯ ಎಸಗಲು ಸಂಚು ರೂಪಿಸಿದ್ದ ಬಗ್ಗೆ ಪೊಲೀಸ್ ಬಾತ್ಮೀದಾರರಿಂದ ಖಚಿತ ಮಾಹಿತಿ ಬಂದಿತ್ತು. ಆ ಮಾಹಿತಿ ಆಧರಿಸಿ ಸುದ್ದಗುಂಟೆಪಾಳ್ಯದ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿಯಿರುವ ಖಾಲಿ ಜಾಗದಲ್ಲಿ ಆರೋಪಿ ಇರುವುದು ಗೊತ್ತಾಗಿತ್ತು. ಆ ಸಂದರ್ಭದಲ್ಲಿ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದುಕೊಂಡು ಆರೋಪಿಯನ್ನು ಬಂಧಿಸಲಾಯಿತು ಎಂದು ಅವರು ಹೇಳಿದರು.

## 30 ಲಕ್ಷ ಮೌಲ್ಯದ ಐಫೋನ್ ದೋಚಿದ್ದ ಗ್ಯಾಂಗ್ ಅರೆಸ್ಟ್

• ಉದಯವಾಹಿನಿ, ಬೆಂಗಳೂರು

ಪ್ರೇಯಸಿಗಾಗಿ ಕಳ್ಳತನಕ್ಕಿಳಿದು 30 ಲಕ್ಷ ರೂ. ಮೌಲ್ಯದ ಐಫೋನ್ ದೋಚಿದ್ದ ಗ್ಯಾಂಗ್‌ನ್ನು ಪೊಲೀಸರು ಬಂಧಿಸಿರುವ ಘಟನೆ ಬೆಂಗಳೂರಿನ ವರ್ತೂರಿನಲ್ಲಿ ನಡೆದಿದೆ. ಬಂಧಿತರನ್ನು ದಿವಾಸ್ ಕಮಿ, ಆರೋಹನ್ ತಾಪಾ ಮತ್ತು ಅಸ್ಮಿತಾ ಎಂದು ಗುರುತಿಸಲಾಗಿದ್ದು, ಬಂಧಿತರಿಂದ 30 ಲಕ್ಷ ರೂ. ಮೌಲ್ಯದ ಐಫೋನ್ 17ನ ಮೊಬೈಲ್‌ಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಪ್ರೇಯಸಿ ಅಸ್ಮಿತಾ ಗಂಡನನ್ನ ಬಿಟ್ಟು ಪ್ರಿಯತಮ ದಿವಾಸ್ ಜೊತೆ ಬೆಂಗಳೂರಿನ ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದ ಆರು ತಿಂಗಳಿಂದ ವಾಸವಾಗಿದ್ದರು. ಕಡಿಮೆ ಸಮಯದಲ್ಲಿ ದುಪ್ಪಟ್ಟು ಹಣ ಸಂಗ್ರಹಿಸಬೇಕೆಂಬ ಆಸೆಯಿಂದ ಕಳ್ಳತನಕ್ಕಿಳಿಯುವ ಪ್ಲ್ಯಾನ್ ಮಾಡಿದ್ದರು. ಪ್ರಿಯತಮ ದಿವಾಸ್ ತನ್ನ ಸ್ನೇಹಿತ ಆರೋಹನ್ ತಾಪಾ ಜೊತೆ ಸೇರಿಕೊಂಡು ದೊಡ್ಡ ದೊಡ್ಡ ಮೊಬೈಲ್ ಶೋರೂಂಗಳಿಗೆ ಕನ್ನ ಹಾಕಲು ಯೋಜಿಸುತ್ತಾರೆ. 24 ಗಂಟೆಯೊಳಗೆ ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಒಂದೇ ಕಂಪನಿಯ ಎರಡು ಶೋರೂಂಗೆ ಕನ್ನ ಹಾಕಿದ್ದರು. ಶೋರೂಂ ಡೋರ್ ಒಡೆದು ಒಳನುಗ್ಗಿ ದುಬಾರಿ ಮೊಬೈಲ್‌ಗಳನ್ನು ದೋಚಿ, ಎಮರ್ಜೆನ್ಸಿ ಎಕ್ಸಿಟ್ ಮೂಲಕ ಹೊರಹೋಗುತ್ತಿದ್ದರು. ಬಳಿಕ ಕದ್ದ ಮೊಬೈಲ್‌ಗಳನ್ನು ಪ್ರೇಯಸಿ ಅಸ್ಮಿತಾ ಮಾರಾಟ ಮಾಡುತ್ತಿದ್ದಳು.

## ಸುಲಭವಾಗಿ ನೋಡಲಾಗುವಂತಹ ಸ್ಥಳಗಳಲ್ಲಿ ಮೀಟರ್ ಅಳವಡಿಸಿ

• ಉದಯವಾಹಿನಿ, ಬೆಂಗಳೂರು

ಹಸ್ತಚಾಲಿತ ಮೀಟರ್ ಓದುವ ಸಾಧನಗಳಿಂದ ಆಪ್ಟಿಕಲ್ ಪೋರ್ಟ್ ಪ್ರೋಬ್ ಸಾಧನಗಳಿಗೆ ಬದಲಾಯಿಸುವುದರೊಂದಿಗೆ ಇಂಧನ ಇಲಾಖೆಯು ಗ್ರಾಹಕರಿಗೆ ಸುಲಭವಾಗಿ ಲಭ್ಯವಾಗುವ ಸ್ಥಳಗಳಲ್ಲಿ ಮೀಟರ್‌ಗಳು 5 ಅಡಿ ಎತ್ತರದಲ್ಲಿ ಸ್ಥಾಪಿಸಲು ಸೂಚಿಸಿದೆ.

ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಹೊಸ ಸಾಧನ ಪರಿಚಯಿಸಲಾಗಿದೆ ಎಂದು ಇಂಧನ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇವುಗಳನ್ನು ಕೇಬಲ್ ಬಳಸಿ ಸ್ಪಾಟ್ ಬಿಲ್ಲಿಂಗ್ ಮೀಟರ್‌ಗಳಿಗೆ ಸಂಪರ್ಕಿಸಲಾಗುತ್ತದೆ.

ನಂತರ ಮೀಟರ್ ರೀಡರ್ ಮೀಟರ್‌ನ ಆರ್ ಆರ್ ಸಂಖ್ಯೆಯನ್ನು ನಮೂದಿಸುತ್ತಾರೆ. ವಿದ್ಯುತ್ ಬಳಕೆಯ ಎಲ್ಲಾ ವಿವರಗಳು ಸ್ವಯಂಚಾಲಿತವಾಗಿ ಉತ್ಪತ್ತಿಯಾಗುತ್ತವೆ. ಹೊಸ ಮೀಟರ್ ಪರಿಚಯಿಸಿದ ನಂತರ ಅನೇಕ ಗ್ರಾಹಕರು ತಮ್ಮ ಮೀಟರ್‌ಗಳು ಎತ್ತರದಲ್ಲಿ ಅಥವಾ ಪ್ರವೇಶಿಸುವಿಕೆ ಕಷ್ಟಕರವಾದ ಸ್ಥಳಗಳಲ್ಲಿ ಮತ್ತು ಕೇಬಲ್‌ಗಳನ್ನು ರೀಡರ್‌ಗೆ ಸಂಪರ್ಕಿಸಲು ಸಾಧ್ಯವಾಗದ ಸ್ಥಳಗಳಲ್ಲಿ ಅಥವಾ ಮೀಟರ್‌ಗಳು ತುಂಬಾ ದೂರದಲ್ಲಿವೆ ಎಂದು ದೂರುಗಳನ್ನು ಹೇಳಿದ್ದರು. ಆದ್ದರಿಂದ ನಿಖರವಾದ ನಿರ್ದಿಷ್ಟ ಎತ್ತರ ಮತ್ತು ಸ್ಥಳಗಳನ್ನು ವಿವರಿಸಲಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.


ಉದಯವಾಹಿನಿ ಚಿತ್ರ

ಹಳೆಯ ಕೈಯಲ್ಲಿ ಹಿಡಿಯುವ ಮೀಟರ್ ರೀಡಿಂಗ್ ಸಾಧನಗಳೊಂದಿಗೆ, ಸಿಬ್ಬಂದಿ 10 ಮೀಟರ್ ಓದಲು ಅರ್ಧ ಗಂಟೆ ಕಳೆಯುತ್ತಿದ್ದರು, ಈಗ ಅದೇ ಸಂಖ್ಯೆಯನ್ನು 10 ನಿಮಿಷಗಳಲ್ಲಿ ಓದಬಹುದು ಮತ್ತು ಬಿಲ್‌ಗಳನ್ನು ನೀಡಬಹುದು.

**ಗ್ರಾಹಕರು ಮೀಟರ್ ಸ್ಥಳವನ್ನು ಬದಲಾಯಿಸುವ ವೆಚ್ಚವನ್ನು ಭರಿಸಬೇಕಾಗುತ್ತದೆ, ಇಲಾಖೆಯು ಸ್ಥಳವನ್ನು ಆಯ್ಕೆ ಮಾಡುವಲ್ಲಿ ಮತ್ತು ಅನುಸ್ಥಾಪನೆಯ ಸಮಯದಲ್ಲಿ ಯಾವುದೇ ದೋಷಗಳಿಲ್ಲ ಎಂದು ಖಚಿತ ಪಡಿಸಿಕೊಳ್ಳಲು ಮಾತ್ರ ಸಹಾಯ ಮಾಡುತ್ತದೆ. ಹೊಸ ಮೀಟರ್ ವ್ಯವಸ್ಥೆಯಿಂದ ಬಿಲ್‌ಗಳಲ್ಲಿ ಯಾವುದೇ ದೋಷಗಳು ಬರುವುದಿಲ್ಲ. ಹಸ್ತಚಾಲಿತ ಮೀಟರ್‌ಗಳನ್ನು ಡಿಜಿಟಲ್ ಮೀಟರ್ ಗಳಿಗೆ ಬದಲಾಯಿಸುವ ಕೆಲಸವೂ ನಡೆಯುತ್ತಿದೆ. ಸಂಖ್ಯೆ ಕಡಿಮೆ, ಆದರೆ ಅವು ಕಾರ್ಯನಿರ್ವಹಿಸುತ್ತಲೇ ಇರುತ್ತವೆ ಎಂದು ಅಧಿಕಾರಿಗಳು ಹೇಳುತ್ತಾರೆ.**

## ಬೆಂಗಳೂರು ಟನಲ್ ರಸ್ತೆ ವಿವಾದ; ಡಿಕೆಶಿ ಭೇಟಿಯಾದ ತೇಜಸ್ವಿ ಸೂರ್ಯ

• ಉದಯವಾಹಿನಿ, ಬೆಂಗಳೂರು

ಟನಲ್ ರಸ್ತೆ ವಿವಾದಕ್ಕೆ ಸಂಬಂಧಿಸಿದಂತೆ ಡಿಸಿಎಂ ಭೇಟಿಯಾಗಿ ಸಂಸದ ತೇಜಸ್ವಿ ಸೂರ್ಯ ಚರ್ಚೆ ನಡೆಸಿದ್ದಾರೆ. ಡಿಕೆಶಿ ಅವರ ಸದಾಶಿವನಗರ ನಿವಾಸಕ್ಕೆ ಬೆಳಗ್ಗೆ ಭೇಟಿ ನೀಡಿದ ತೇಜಸ್ವಿ ಸೂರ್ಯ 1 ಗಂಟೆಗೂ ಹೆಚ್ಚು ಸಮಯ ಚರ್ಚೆ ಮಾಡಿದ್ದಾರೆ.

ಬಳಿಕ ಸುದ್ದಿಗಾರರೊಂದಿಗೆ ಸಂಸದ ಮಾತನಾಡಿ, ಡಿಸಿಎಂ ಡಿಕೆಶಿ ಅವರ ಜೊತೆ 1 ಗಂಟೆಗೂ ಹೆಚ್ಚು ಕಾಲ ಚರ್ಚೆ ಆಯ್ತು. ಬೆಂಗಳೂರು ಟ್ರಾಫಿಕ್ ಸಮಸ್ಯೆ ಪರಿಹಾರದ ಬಗ್ಗೆ ಸುದೀರ್ಘ ಚರ್ಚೆ ಆಯ್ತು. ಬಹಳ ಶಾಂತವಾಗಿ ನಾನು ಕೊಟ್ಟ ಪ್ರೆಸೆಂಟೇಷನನ್ನ ಕೇಳಿದ್ರು. ಬೆಂಗಳೂರಿಗೆ ಮೆಟ್ರೋ ಬರೋದರಲ್ಲಿ ಅವರ ಪಾತ್ರ ಏನು ಎಂಬುದನ್ನ ಡಿ.ಕೆ.ಶಿವಕುಮಾರ್ ಅವರು ನನಗೆ ತಿಳಿಸಿದರು.

ಎಸ್.ಎಂ.ಕೃಷ್ಣ ಅವಧಿಯಲ್ಲಿ ಅನಂತ್ ಕುಮಾರ್ ಅವರು ಬೇರೆ ದೇಶದ ವ್ಯವಸ್ಥೆ ಎಲ್ಲಾ ನೋಡಿ ಹೇಗೆ ವರದಿ ಕೊಟ್ರು ಅಂತ ಹೇಳಿದರು ಎಂದರು. ಟನಲ್ ರಸ್ತೆ ಕೇವಲ 30-35 ಕಿ.ಮೀ.ಗೆ 47 ಸಾವಿರ ಕೋಟಿ ಖರ್ಚು ಮಾಡುವ ಬದಲು ಬಸ್ಸು ಬೇರೆ ಬೇರೆ ಇನ್ಫ್ರಾಸ್ಟ್ರಕ್ಚರ್ ಅಭಿವೃದ್ಧಿಗೆ ಬಳಸಬಹುದು. ಇವತ್ತು ಟನಲ್ ರೋಡ್‌ನ ಎಲ್ಲಾ ಸಮಸ್ಯೆ ಬಗ್ಗೆ ನಾನು ತಿಳಿಸಿದ್ದೇನೆ. ಎಲ್ಲವನ್ನೂ ಅವರು ಕೇಳಿದ್ದಾರೆ.



## 5 ವರ್ಷಕ್ಕೆ ಸಿದ್ದರಾಮಯ್ಯರೇ ಸಿಎಂ ಅಂತ ಆಯ್ಕೆ ಮಾಡಿದ್ದೇವೆ: ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು



ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆ ವಿಚಾರ ಜೋರಾಗಿದೆ. ಇದರ ಮಧ್ಯೆ ಗೃಹ ಸಚಿವ ಪರಮೇಶ್ವರ್ ಸ್ಫೋಟಕ ಹೇಳಿಕೆ ಕೊಟ್ಟಿದ್ದಾರೆ. ನಾವು ಸಿಎಲ್‌ಪಿ ಸಭೆಯಲ್ಲಿ ಎಲ್ಲಾ ಶಾಸಕರು ಸೇರಿಕೊಂಡು ಸಿದ್ದರಾಮಯ್ಯ ಅವರನ್ನ 5 ವರ್ಷದ ಅವಧಿಗೆ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದೇವೆ. ಶಾಸಕಾಂಗ ಪಕ್ಷದ ಸಭೆಯಲ್ಲಿ ಸಿಎಂ ಆಯ್ಕೆ ಮಾಡುವಾಗ ನಾವು ಯಾವುದೇ ಅವಧಿ ನಿಗದಿ ಮಾಡಿ ಆಯ್ಕೆ ಮಾಡಿಲ್ಲ. ನಮ್ಮ ದೃಷ್ಟಿಯಲ್ಲಿ ಸಿದ್ದರಾಮಯ್ಯ ಐದು ವರ್ಷ ಸಿಎಂ ಅಂತ ಮಾಡಿದ್ದೇವೆ ಎಂದು ತಿಳಿಸಿದ್ದಾರೆ. ಹಾಗೇನಾದ್ರೂ ಅಧಿಕಾರ ಹಂಚಿಕೆ ಆಗಿದ್ರೆ ಈ ಬಗ್ಗೆ ಹೈಕಮಾಂಡ್ ಸೇರಿ ಬೇರ್‍ಯಾರು ಹೇಳಿಲ್ಲ. ಆಯ್ಕೆ ಮಾಡುವಾಗಲೂ ಎರಡೂವರೆ ವರ್ಷಕ್ಕೆ ಸಿಎಂ ಅಂತ ಹೇಳಿಲ್ಲ ಎಂದು ಬೆಂಗಳೂರಿನಲ್ಲಿ ಸಚಿವ ಪರಮೇಶ್ವರ್ ಹೇಳಿದ್ದಾರೆ. ನಾಯಕತ್ವ ಬದಲಾವಣೆ ಬಗ್ಗೆ ತೆರೆ ಎಳೆಯಬೇಕೆಂದು ಕಾಂಗ್ರೆಸ್ ಹೈಕಮಾಂಡ್‌ಗೆ ಒತ್ತಾಯಿಸುತ್ತೇನೆ ಎಂದಿದ್ದಾರೆ.

## ಬ್ರೆಜಿಲ್ ಮಾಡೆಲ್‌ಗೆ ಲೈಂಗಿಕ ಕಿರುಕುಳ; ಡೆಲಿವರಿ ಏಜೆಂಟ್ ಬಂಧನ

• ಉದಯವಾಹಿನಿ, ಬೆಂಗಳೂರು

ಬ್ರೆಜಿಲ್‌ನ ಮಾಡೆಲ್ ಒಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಆರ್‌ಟಿ ನಗರ ಪೊಲೀಸರು ಪಾರ್ಟ್-ಟೈಮ್ ಡೆಲಿವರಿ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದ 22 ವರ್ಷದ ಡಿಪ್ಲೊಮಾ ವಿದ್ಯಾರ್ಥಿಯನ್ನು ಬಂಧಿಸಿದ್ದಾರೆ. ಅಕ್ಟೋಬರ್ 17 ರಂದು ನಡೆದ ಘಟನೆಯನ್ನು ಅಕ್ಟೋಬರ್ 25 ರಂದು ಪೊಲೀಸರಿಗೆ ವರದಿ ಮಾಡಲಾಗಿದೆ.

ಆರೋಪಿಯನ್ನು ಆರ್‌ಟಿ ನಗರ ಪ್ರದೇಶದಲ್ಲಿ ವಾಸಿಸುವ ಕುಮಾರ್ ರಾವ್ ಪವಾರ್ ಎಂದು ಗುರುತಿಸಲಾಗಿದೆ. 21 ವರ್ಷದ ಬಲಿಪಶು ನೀಡಿದ ಆರ್ಡರ್‌ಗಳ ಡಿಜಿಟಲ್ ವಿವರಗಳ ಆಧಾರದ ಮೇಲೆ, ನಾವು ಆತನನ್ನು ಪತ್ತೆಹಚ್ಚಿ ಬಂಧಿಸಿದ್ದೇವೆ. ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

**ಏನಿದು ಘಟನೆ?:** ಸಂತ್ರಸ್ತೆ ಉದ್ಯೋಗದಾತರು ಒದಗಿಸಿದ ಫ್ಲಾಟ್‌ನಲ್ಲಿ ಇತರ ಇಬ್ಬರು ವಿದೇಶಿ ಮಾಡೆಲ್‌ಗಳೊಂದಿಗೆ ವಾಸಿಸುತ್ತಿದ್ದಾಳೆ. ಫ್ಲಾಟ್ ಆರ್‌ಟಿ ನಗರದಲ್ಲಿದೆ. ಅವಳು ಆಯಪ್ ಮೂಲಕ ಆಹಾರವನ್ನು ಆರ್ಡರ್ ಮಾಡಿದ್ದಳು. ಆರ್ಡರ್ ಡೆಲಿವರಿ ಮಾಡಲು ಬಂದ ಆರೋಪಿಯು ಅವಳನ್ನು ಲೈಂಗಿಕವಾಗಿ ಅನುಚಿತವಾಗಿ ಸ್ಪರ್ಶಿಸಿದನೆಂದು ವರದಿಯಾಗಿದೆ. ಅಕ್ಟೋಬರ್ 17 ರಂದು ಮಧ್ಯಾಹ್ನ 3.20 ರ ಸುಮಾರಿಗೆ ಈ ಘಟನೆ ನಡೆದಿದೆ. ಗಾಬರಿಗೊಂಡ ಸಂತ್ರಸ್ತೆ ಆತನನ್ನು ಹೊರಗೆ ತಳ್ಳಿ ಬಾಗಿಲು ಹಾಕಿದಳು. ಸಂತ್ರಸ್ತೆ ಘಟನೆಯ ಬಗ್ಗೆ ತನ್ನ ಫ್ಲಾಟ್‌ಮೇಟ್‌ಗಳಿಗೆ ತಕ್ಷಣ ತಿಳಿಸಲಿಲ್ಲ, ನಂತರ ಧೈರ್ಯ ತಂದುಕೊಂಡ ನಂತರ ಅವರಿಗೆ ಮಾಹಿತಿ ನೀಡಿದ್ದಾಳೆ. ನಂತರ ಅವರು ಅದನ್ನು ತಮ್ಮ ಉದ್ಯೋಗದಾತರ ಗಮನಕ್ಕೆ ತಂದರು. ಪೊಲೀಸರನ್ನು ಸಂಪರ್ಕಿಸುವ ಮೊದಲು, ಸಿಸಿಟಿವಿ ರೆಕಾರ್ಡಿಂಗ್‌ಗಳನ್ನು ಪರಿಶೀಲಿಸಲಾಯಿತು, ದೃಢೀಕರಣದ ನಂತರವೇ ಪೊಲೀಸರನ್ನು ಸಂಪರ್ಕಿಸಲಾಯಿತು.

ಮಹಿಳೆ ಪ್ರತಿಷ್ಠಿತ ಜವಳಿ ಮತ್ತು ಉಡುಪು ಕಂಪನಿಯಲ್ಲಿ ಮಾಡೆಲ್ ಆಗಿ ಕೆಲಸ ಮಾಡುತ್ತಿದ್ದು, ಕಳೆದ ಎರಡು ತಿಂಗಳಿನಿಂದ ನಗರದಲ್ಲಿ ವಾಸಿಸುತ್ತಿದ್ದಾರೆ. ಸಂತ್ರಸ್ತೆಯ ಉದ್ಯೋಗದಾತರು ನೀಡಿದ ದೂರಿನ ಆಧಾರದ ಮೇಲೆ, ಅವರ ವಿರುದ್ಧ ಲೈಂಗಿಕ ಕಿರುಕುಳ (ಬಿಎನ್‌ಎಸ್ 75(1)) ಮತ್ತು ವಿವಸ್ತ್ರಗೊಳಿಸುವ ಉದ್ದೇಶದಿಂದ ಹಲ್ಲೆ ಅಥವಾ ಕ್ರಿಮಿನಲ್ ಬಲಪ್ರಯೋಗ (ಬಿಎನ್‌ಎಸ್ 76) ಪ್ರಕರಣ ದಾಖಲಿಸಲಾಗಿದೆ.

## ರಾಜ್ಯವನ್ನು ಆರ್ಥಿಕ ಸಂಕಷ್ಟಕ್ಕೆ ನೂಕುವ ಕೆಲಸ ಸಿಎಂ ಮಾಡುತ್ತಿದ್ದಾರೆ

• ಉದಯವಾಹಿನಿ, ಬೆಂಗಳೂರು


**ರಾಜ್ಯಾಧ್ಯಕ್ಷ ಶಾಸಕ ಬಿ.ವೈ ವಿಜಯೇಂದ್ರ ಹೇಳಿಕೆ**

ರಾಜ್ಯ ಹೈಕೋರ್ಟಿನ ತೀರ್ಪಿನಿಂದ ಸರ್ಕಾರಕ್ಕೆ ಹಿನ್ನಡೆ ಆಗಿದೆ. ಅವರ ಕುತಂತ್ರ, ಷಡ್ಯಂತ್ರಕ್ಕೆ ತಡೆ ಕೊಟ್ಟಂತಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ ವಿಜಯೇಂದ್ರ ತಿಳಿಸಿದ್ದಾರೆ. ಮಾಧ್ಯಮಗಳ ಜತೆ ಮಾತನಾಡಿದ ಅವರು, ಮತ್ತೊಂದು ಕಡೆ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ರಾಜ್ಯದಲ್ಲಿ ರೈತರಿಗೆ ಪರಿಹಾರ ಕೊಟ್ಟಿಲ್ಲ. ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಪರಿಹಾರ ಕೊಡಿ ಎಂದರೆ ಕೇಂದ್ರ ಸರ್ಕಾರದ ಕಡೆ ಬೆಟ್ಟು ಮಾಡಿ ಕೂತಿದ್ದಾರೆಯೇ ವಿನಾಃ ರಾಜ್ಯ ಸರ್ಕಾರದಿಂದ ಈ ನಾಡಿನ ರೈತರಿಗೆ ಪರಿಹಾರ, ಅನುಕೂಲ ಸಿಗುತ್ತಿಲ್ಲ ಎಂದು ಟೀಕಿಸಿದರು.

ರಾಜ್ಯ ಸರ್ಕಾರ, ಮುಖ್ಯಮಂತ್ರಿಗಳಿಗೆ ರೈತರ ಸಂಕಷ್ಟಕ್ಕೆ ಸ್ಪಂದಿಸಲು ಸಾಧ್ಯವಾಗದೇ ಇದ್ದರೆ, ಈ ಸರ್ಕಾರ ರೈತರ ಪಾಲಿಗೆ ಬದುಕಿದ್ದೂ ಸತ್ತಂತೆ ಎಂದು ಆರೋಪಿಸಿದ ಅವರು, ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ; ಶಾಸಕರು ಪರದಾಡುತ್ತಿದ್ದಾರೆ. ಆಡಳಿತ ಪಕ್ಷದ ಶಾಸಕರು, ಸಚಿವರು ನವೆಂಬರ್ ಕ್ರಾಂತಿಯ ಹೇಳಿಕೆ ಕೊಡುತ್ತಿದ್ದಾರೆ ಎಂದು ದೂರಿದರು.

ರೈತರ ಸಮಸ್ಯೆಗೆ ಪರಿಹಾರ ಕೊಡಿ ಎಂದರೆ ಇವತ್ತು ಸಿಎಂ ಬದಲಾವಣೆ ಚರ್ಚೆ ನಡೆದಿದೆ. ಕಾಂಗ್ರೆಸ್ ಸರ್ಕಾರದ ಕಚ್ಚಾಟದಿಂದ ರಾಜ್ಯದ ಜನತೆ ಸರ್ಕಾರದ ಮೇಲಿನ ವಿಶ್ವಾಸ ಕಳಕೊಂಡಿದ್ದಾರೆ. ನಾನೇ 5 ವರ್ಷ ಸಿಎಂ ಎಂದು ಮುಖ್ಯಮಂತ್ರಿಗಳು ಹೇಳುವ ಪರಿಸ್ಥಿತಿ ಬಂದು ತಲುಪಿದೆ ಎಂದರೆ, ಆಡಳಿತ ಪಕ್ಷದಲ್ಲಿ ಮುಖ್ಯಮಂತ್ರಿಗಳ ಬಗ್ಗೆ ವಿಶ್ವಾಸ ಹೊರಟುಹೋಗಿದೆ ಎಂದು ಹೇಳಿದರು.

ಇವರ ಒಳಜಗಳದಿಂದ ಕೆಪಿಸಿಸಿಗೆ ಬೀಗ ಹಾಕುವುದು ಇರಲಿ, ರಾಜ್ಯದ ಖಜಾನೆಗೆ ಬೀಗ ಹಾಕಿ ಕೂತಿದ್ದಾರೆ ಎಂದು ಹೇಳಿದ ಅವರು, ಸರ್ಕಾರಿ ನೌಕರರಿಗೆ ವೇತನ ಸಿಗುತ್ತಿಲ್ಲ. ರಾಜ್ಯವನ್ನು ಆರ್ಥಿಕ ಸಂಕಷ್ಟಕ್ಕೆ ನೂಕುವ ಕೆಲಸವನ್ನು ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ ವಿಜಯೇಂದ್ರ ಆರೋಪಿಸಿದರು.



**ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ ಎಂದು ಟೀಕಿಸಿದರು. ಹೇಳಿಕೆಗಳನ್ನು ನಿಲ್ಲಿಸದೇ ಹೋದರೆ ಇದರ ಪರಿಣಾಮ ಆಡಳಿತದ ಮೇಲೆ ಬೀಳಲಿದೆ ಎಂದು ಗೃಹ ಸಚಿವ ಪರಮೇಶ್ವರ್ ಒಪ್ಪಿಕೊಂಡಿದ್ದಾರೆ. ರಾಜ್ಯದ ಜನರಿಗೆ ಸಿಎಂ ಯಾರಾಗುತ್ತಾರೆ? ಬದಲಾಗುತ್ತಾರಾ ಎಂಬ ಬಗ್ಗೆ ಆಸಕ್ತಿ ಇಲ್ಲ. ಜನರು ಈ ಸರ್ಕಾರದ ಬಗ್ಗೆ ಸಂಪೂರ್ಣ ವಿಶ್ವಾಸ ಕಳಕೊಂಡಿದ್ದಾರೆ ಎಂದು ತಿಳಿಸಿದರು.**

## ಎಲ್ಲೆಂದರಲ್ಲಿ ಕಸ ಎಸೆಯುವ ಮುನ್ನ ಎಚ್ಚರ!

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಎಷ್ಟೇ ಎಚ್ಚರಿಕೆ ನೀಡಿದರೂ ಪದೇ ಪದೇ ತ್ಯಾಜ್ಯ ನಿರ್ವಹಣೆಯಲ್ಲಿನ ಉಲ್ಲಂಘನೆಗಳು ಮತ್ತು ಹೆಚ್ಚುತ್ತಿರುವ ಕಸದ ಕಪ್ಪು ಚುಕ್ಕೆಗಳಿಂದ ಬ್ಲಾಕ್ ಸ್ಪಾಟ್ ಬೇಸತ್ತ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಸಂಸ್ಥೆ ಕಸವನ್ನು ಅದರ ಉತ್ಪಾದಕರ ಮನೆಗಳಿಗೆ ಹಿಂತಿಗಿಸಲು ನಿರ್ಧರಿಸಿದೆ.

ತ್ಯಾಜ್ಯ ನಿರ್ವಹಣೆ ಕುರಿತು ಸಾಕಷ್ಟು ಜಾಗೃತಿ ಅಭಿಯಾನಗಳು, ಎಚ್ಚರಿಕೆ, ದಂಡ ಹೀಗೆ ಹಲವಾರು ಕ್ರಮಗಳನ್ನು ತೆಗೆದುಕೊಂಡಾದ ಮೇಲೂ ಬೆಂಗಳೂರಿನ ನಿವಾಸಿಗಳು ಅಕ್ರಮವಾಗಿ ಎಲ್ಲೆಂದರಲ್ಲಿ ಕಸ ಬಿಸಾಡುತ್ತಾ ಪರಿಸರ ನಾಶ ಮಾಡುತ್ತಿರುವುದರಿಂದ ಬೇಸತ್ತ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಸಂಸ್ಥೆ ರಸ್ತೆ ಬದಿ ಎಲ್ಲೆಂದರಲ್ಲಿ ಕಸ ಬಿಸಾಡುವವರಿಗೆ ಬುದ್ದಿ ಕಲಿಸಲು ಇರುವ ಕೊನೆಯ ಆಯ್ಕೆ ಎಂದು ಬಿಎಸ್‌ಡಬ್ಲ್ಯೂಎಂಎಲ್ ಸಿಇಒಸಿಇಒ ಕರೀ ಗೌಡ ಹೇಳಿದ್ದು,

ಕಸವನ್ನು ಎಸೆದವರ ಮನೆಗಳ ಮುಂದೆಯೇ ಆ ಕಸವನ್ನು ತೆಗೆದುಕೊಂಡು ಬಂದು ಬಿಸಾಡುವ ವಿನೂತನ ಪ್ರಯತ್ನ ಮಾಡಲು ಸಿದ್ದವಾಗಿದ್ದಾರೆ.


ಉದಯವಾಹಿನಿ ಚಿತ್ರ

**ಬಿಎಸ್‌ಡಬ್ಲ್ಯೂಎಂಎಲ್ ಸಿಇಒ ಕರೀ ಗೌಡ ಪದೇ ಪದೇ ಎಚ್ಚರಿಕೆ ನೀಡಿದ್ದರೂ, ಅನೇಕ ಜನರು ನಮ್ಮ ವಾಹನಗಳಿಗೆ ತ್ಯಾಜ್ಯವನ್ನು ಹಸ್ತಾಂತರಿಸುವ ಬದಲು ಎಲ್ಲೆಂದರಲ್ಲಿ ಕಸ ಹಾಕುತ್ತಲೇ ಇದ್ದಾರೆ. ಹಾಗಾಗಿ ಅಂತಹವರಿಗೆ ಬುದ್ದಿ ಕಲಿಸುವ ಮೂಲಕ ಅವರಿಗೆ ಜವಾಬ್ದಾರಿಯನ್ನು ಅರಿವು ಮಾಡಿಸುವ ಉದ್ದೇಶದಿಂದ ಇದು ಕೊನೆಯ ಆಯ್ಕೆಯಾಗಿದೆ ಎಂದು ಹೇಳಿದ್ದಾರೆ.**

# ಜಿಬಿಎ ಚುನಾವಣೆ: ವಾರ್ಡ್‌ವಾರು ಮತದಾರರ ಪಟ್ಟಿ ಸಿದ್ದಪಡಿಸಲು ಸೂಚನೆ

## ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿನ 5 ನಗರ ಪಾಲಿಕೆಗಳ ವಾರ್ಡ್‌ಗಳ ಮತದಾರರ ಪಟ್ಟಿ ಪರಿಷ್ಕರಣೆ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ 5 ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ವಾರ್ಡ್‌ವಾರು ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ರಾಜ್ಯ ಚುನಾವಣಾ ಆಯೋಗವು ಸೂಚಿಸಿದೆ.

5 ನಗರ ಪಾಲಿಕೆಗಳ ವ್ಯಾಪ್ತಿಯ 368 ವಾರ್ಡ್‌ಗಳಿಗೆ ಸಂಬಂಧಿಸಿದಂತೆ ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸಲು ಮತದಾರರ ನೋಂದಣಿ ಅಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳನ್ನು ನೇಮಕ ಮಾಡಬೇಕು. ಅವರು ಚಾಲ್ತಿಯಲ್ಲಿರುವ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿ ಆಧರಿಸಿ ವಾರ್ಡ್‌ಗಳ ಮತದಾರರ ಪಟ್ಟಿ ತಯಾರಿಸಬೇಕು ಎಂದು ನಿರ್ದೇಶನ ನೀಡಿದೆ.



ಪ್ರತಿ ಮತಗಟ್ಟೆಯಲ್ಲಿ ಮತದಾರರ ಸಂಖ್ಯೆ ಗರಿಷ್ಠ 1500 ಮೀರದಂತೆ ಎಚ್ಚರ ವಹಿಸಬೇಕು. ಪ್ರತಿ ವಾರ್ಡ್‌ನ ಮತದಾರರ ಪಟ್ಟಿಯ ಭಾಗದ ಸಂಖ್ಯೆಯನ್ನು ಕ್ರಮ ಸಂಖ್ಯೆ 1ರಿಂದಲೇ ಪ್ರಾರಂಭಿಸಬೇಕು. ಮತದಾರರ ಪಟ್ಟಿಯ ಭಾಗದ ಸಂಖ್ಯೆಗಳನ್ನೇ ಆ ಭಾಗಕ್ಕೆ ನಿಗದಿಪಡಿಸಿ ಮತಗಟ್ಟೆಗಳಿಗೆ ನೀಡಬೇಕು ಎಂದು ತಿಳಿಸಿದೆ. ಮತದಾರರ ಪಟ್ಟಿಗೆ ಸ್ವೀಕೃತವಾಗುವ ಹಕ್ಕು ಮತ್ತು ಆಕ್ಷೇಪಣೆಗಳನ್ನು ಮತದಾರರ ನೋಂದಣಾಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿಯು ಇತ್ಯರ್ಥಪಡಿಸಬೇಕು. ಮತದಾರರ ಪಟ್ಟಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸುರಕ್ಷಿತವಾಗಿ ಸಂರಕ್ಷಿಸಬೇಕು. ಮತದಾರರ ಪಟ್ಟಿಯ ಮೇಲ್ವಿಚಾರಣೆಗೆ ವಿಶೇಷ ಆಯುಕ್ತರನ್ನು ರಾಜ್ಯ ಚುನಾವಣಾ ಆಯೋಗದಿಂದಲೇ ನೇಮಿಸಲಾಗುವುದು ಎಂದು ಆದೇಶಿಸಿದೆ. ವಾರ್ಡ್‌ವಾರು ಮತದಾರರ ಪಟ್ಟಿಯನ್ನು ನಿಗದಿತ ಅವಧಿಯೊಳಗೆ ಲೋಪದೋಷಗಳಿಗೆ ಅವಕಾಶ ನೀಡದಂತೆ ಆಯಾ ಪಾಲಿಕೆಗಳ ಆಯುಕ್ತರು, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳು ಕಾರ್ಯ ನಿರ್ವಹಿಸಬೇಕು. ಮತದಾರರ ಪಟ್ಟಿಯಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಚುನಾವಣಾಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.



**ನ.4ರಿಂದ ಗಣತಿ ಮಾದರಿಯಲ್ಲಿ ನಡೆಯುವ ಪರಿಷ್ಕರಣೆಯಲ್ಲಿ ಒಟ್ಟು 51 ಕೋಟಿ ಮತದಾರರ ಹೆಸರುಗಳನ್ನು ಪರಿಶೀಲಿಸಲಾಗುವುದು. ಆಧಾರ್ ಕಾರ್ಡ್ ಅನ್ನು ಗುರುತಿನ ಚೀಟಿಯಾಗಿ ಪರಿಗಣಿಸಲಾಗುವುದು. ಮುಂದಿನ ವರ್ಷದ ಫೆಬ್ರವರಿ 7ಕ್ಕೆ ಅಂತಿಮ ಮತಪಟ್ಟಿ ಪ್ರಕಟಿಸಲಾಗುವುದು,'' ಎಂದು ಕೇಂದ್ರ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹೊಸದಿಲ್ಲಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದರು.**

**ಎಸ್‌ಐಆರ್‌' 2.0 ಶುರು:** ಪ್ರತಿಪಕ್ಷಗಳ ಭಾರಿ ವಿರೋಧದ ನಡುವೆ 2ನೇ ಹಂತದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಚುನಾವಣಾ ಆಯೋಗ ಸೋಮವಾರದಿಂದಲೇ (ಅ.27) ಚಾಲನೆ ನೀಡಿದೆ. ತಮಿಳುನಾಡು ಸೇರಿದಂತೆ 9 ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಡೆಯಲಿದೆ. ಈ ರಾಜ್ಯಗಳಲ್ಲಿ ಮತದಾರರ ಪಟ್ಟಿಯನ್ನು ರಾತ್ರಿಯಿಂದಲೇ ತಟಸ್ಥಗೊಳಿಸಲಾಗಿದ್ದು, ಯಾವುದೇ ಬದಲಾವಣೆಗೆ ಅವಕಾಶವಿಲ್ಲ. ಈ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮುಂದಿನ ಎರಡು ವರ್ಷಗಳ ಒಳಗೆ ವಿಧಾನಸಭೆ ಚುನಾವಣೆ ನಡೆಯಲಿದೆ.

**ಮತದಾರರ ಪಟ್ಟಿ ಪರಿಷ್ಕರಣೆ ದಿನಾಂಕದ ವಿವರ ಹೀಗಿದೆ,**


- **ಕರಡು ಮತದಾರರ ಪಟ್ಟಿ ಪ್ರಕಟ: ಡಿಸೆಂಬರ್ 8**
- **ಆಕ್ಷೇಪಣೆ ಸಲ್ಲಿಕೆಗೆ ಕಾಲಾವಕಾಶ: ಡಿಸೆಂಬರ್ 9 ರಿಂದ 23**
- **ಆಕ್ಷೇಪಣೆಗಳ ವಿಲೇವಾರಿ: ಡಿಸೆಂಬರ್ 24 ರಿಂದ 2026ರ ಜನವರಿ 7**
- **ಅಂತಿಮ ಮತದಾರರ ಪಟ್ಟಿ ಪ್ರಕಟ: ಜನವರಿ 29**

# ಅಧಿಕಾರಿಗಳ ವಿರುದ್ಧ ಆಕ್ರೋಶ; ಸಚಿವ ಮಹದೇವಪ್ಪ ಭೇಟಿ

■ ಈಶ್ವರ ಖಂಡ್ರೆ, ತರಾಟೆಗೆ ತೆಗೆದುಕೊಂಡ ರೈತರು ■ ಅಧಿಕಾರಿಗಳ ನಿರ್ಲಕ್ಷ್ಯದಿಂದ ಹುಲಿ ದಾಳಿ

• **ಉದಯವಾಹಿನಿ, ಮೈಸೂರು**

ಅರಣ್ಯಾಧಿಕಾರಿಗಳ ನಿರ್ಲಕ್ಷ್ಯದಿಂದ ಹುಲಿ ದಾಳಿಯಾಗಿದ್ದು, ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಎಂದು ಆಗ್ರಹಿಸಿ ಬೆಣ್ಣೆಗೆರೆ ಗ್ರಾಮದಲ್ಲಿ ಹುಲಿ ದಾಳಿಯಿಂದ ಮೃತಪಟ್ಟ ರಾಜಶೇಖರ್ ಕುಟುಂಬಸ್ಥರು, ರೈತ ಸಂಘಟನೆಗಳ ಮುಖಂಡರು ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರದ ಎದುರು ಪ್ರತಿಭಟಿಸಿದರು. ಬೆಣ್ಣೆಗೆರೆ ಗ್ರಾಮವು ಅರಣ್ಯದಿಂದ 22 ಕಿ.ಮೀ ದೂರದಲ್ಲಿದೆ. ಈಚೆಗೆ 18 ಕಿ.ಮೀ ದೂರದಲ್ಲಿ ಹುಲಿ ದಾಳಿ ನಡೆದಿತ್ತು. ಆ ಸಮಯದಲ್ಲಿ ಬೆಣ್ಣೆಗೆರೆಗೆ ಬಂದಿದ್ದ ಅರಣ್ಯ ಇಲಾಖೆ ಸಿಬ್ಬಂದಿ ಹುಲಿ ಹೆಜ್ಜೆಗಳನ್ನು ಗುರುತಿಸಿ ತೆರಳಿದ್ದರು. ಆದರೆ ಬೋನು ಇಡುವ ಕೆಲಸ ಮಾಡಲಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಹುಲಿ ದಾಳಿ ನಡೆಸಿದಿದೆ. ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತು ಮಾಡಬೇಕು ಎಂದು ಆಗ್ರಹಿಸಿದರು. ಬಂಡೀಪುರ ಅರಣ್ಯ ಪ್ರದೇಶದಲ್ಲಿ ನಿತ್ಯ ಬೆಳಿಗ್ಗೆ ಹಾಗೂ ಸಂಜೆ ಸಫಾರಿ ನಡೆಯುತ್ತದೆ. ಹುಲಿ ಕಂಡುಬಂದ ಸ್ಥಳಕ್ಕೆ ಅನೇಕ ವಾಹನಗಳು ಒಂದೇ ಸಮಯಕ್ಕೆ ಬಂದು ನಿಂತು ಗದ್ದಲ ಎಬ್ಬಿಸುವುದರಿಂದ ಅಲ್ಲಿಂದ ಅವು ನಾಡಿನ ಹಾದಿ ಹಿಡಿದಿವೆ. ಬೋನಿಗೆ ಬಿದ್ದ ಹುಲಿಗಳನ್ನು ಹತ್ತಿರದಲ್ಲೇ ಬಿಡುತ್ತಿರುವ ಕಾರಣ ಅವು ಮತ್ತೆ ನಾಡಿಗೆ ಬಂದು ಜನ, ಜಾನುವಾರಿನ ಮೇಲೆ ದಾಳಿ ನಡೆಸುತ್ತಿವೆ. ಈ ಬಗ್ಗೆ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

> ನನಗೆ ಇಲ್ಲಿಗೆ ರೈತನ ಶವ ತಂದಿರೋದೆ ಗೊತ್ತಿಲ್ಲ. ನನ್ನ ಕಾರಣದಿಂದ ಶವ ಇಲ್ಲಿಗೆ ತಂದಿದ್ದರೆ ಅಕ್ಷಮ್ಯ ಅಪರಾಧ. ನಾನು ಕ್ಷೇಮೆ ಕೇಳುತ್ತೇನೆ ಹಾಗೂ ಮಾಹಿತಿ ಪಡೆದು ಕ್ರಮವಹಿಸುತ್ತೇನೆ. ಮೃತ ವ್ಯಕ್ತಿಗೆ 10 ಲಕ್ಷ ಪರಿಹಾರ ನೀಡಿದ್ದು. 20 ಲಕ್ಷಕ್ಕೆ ಏರಿಸಲು ಕ್ರಮವಹಿಸುತ್ತೇನೆ.
>
> – ಈಶ್ವರ ಖಂಡ್ರೆ, ಸಚಿವ

ಅಂತಿಮ ನಮನ ಸಲ್ಲಿಸಲು ಬಂದ ಅರಣ್ಯ ಸಚಿವ ಈಶ್ವರ ಖಂಡ್ರೆ ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಸುತ್ತುವರಿದ ಮೃತರ ಕುಟುಂಬಸ್ಥರು ಹಾಗೂ ರೈತ ಮುಖಂಡರು ಘೇರಾವ್ ಹಾಕಿದರು. ರೈತ ಮುಖಂಡ ಮಂಜು ಕಿರಣ್ ಸಚಿವರನ್ನು ಅಡ್ಡಗಟ್ಟಿ ತರಾಟೆಗೆ ತೆಗೆದುಕೊಂಡರು, ರೈತರ ಸಾವಿಗೆ ನೀವು ಹೊಣೆ, ಅವರನ್ನು

**ಕೋಲ್ಡ್ ಸ್ಟೋರೇಜ್ ಇಲ್ಲದಿರುವುದು ವಿಷಾದನೀಯ**

ಪ್ರತಿಭಟನಾ ಸ್ಥಳಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಭೇಟಿ ಮಾತನಾಡಿ ಅವರು ಹೊಸ ತಾಲ್ಲೂಕಿನ ಘೋಷಣೆಯಾದ ಮೇಲೂ ಗಡಿ ತಾಲ್ಲೂಕಿನಲ್ಲಿ ಅಲ್ಲಿಗೆ ಅಗತ್ಯವಿರುವ ಮೂಲಸೌಕರ್ಯ ನೀಡದಿರುವುದು ವಿಷಾದನೀಯ. ಸರಗೂರಿನ ಶವಾಗಾರದಲ್ಲಿ ಕೋಲ್ಡ್ ಸ್ಟೋರೇಜ್ ಇಲ್ಲ ಎಂಬ ಕಾರಣಕ್ಕೆ ಮೈಸೂರಿಗೆ ಮೃತದೇಹ ತಂದಿರುವುದು ಅವ್ಯವಸ್ಥೆಯನ್ನು ತೋರಿಸುತ್ತದೆ. ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲೇ ಆಡಳಿತ ಹಳಿ ತಪ್ಪುತ್ತಿದೆ. ದೂರು ಬಂದ ಕೂಡಲೇ ಪ್ರತಿಕ್ರಿಯಿಸದಿದ್ದರೆ ಮತ್ತಷ್ಟು ಪ್ರಾಣಿ ಸಂಘರ್ಷ ಹೆಚ್ಚಲಿದೆ. ಈ ಬಗ್ಗೆ ಸಭೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಕೊಲೆ ಮಾಡುತ್ತಿದ್ದೀರಿ. ಅರಣ್ಯ ಪ್ರದೇಶದಲ್ಲಿ ಅಕ್ರಮ ರೆಸಾರ್ಟ್ ತಲೆ ಎತ್ತುತ್ತಿರುವ ಬಗ್ಗೆ ಸಂಘಟನೆಯವರು ದಾಖಲೆ ನೀಡಿದರೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದರು.

**ಕಾಡಿನಿಂದ ನಾಡಿಗೆ ಬರುತ್ತಿವೆ**

ಸಫಾರಿ ಹೆಸರಿನಲ್ಲಿ ಪ್ರಾಣಿಗಳಿಗೆ ತೊಂದರೆ ನೀಡುತ್ತಿರುವುದರಿಂದ ಅವು ಕಾಡಿನಿಂದ ನಾಡಿಗೆ ಬರುತ್ತಿವೆ. ನಿಮ್ಮ ಮೇಲೆ ಹುಲಿ ದಾಳಿ ಆಗುವುದಿಲ್ಲ. ನೀವು ವಿಧಾನಸೌಧದಲ್ಲಿ ಕುಳಿತಿರುತ್ತೀರಿ. ಇನ್ನೆಷ್ಟು ರೈತರು ಬಲಿಯಾಗಬೇಕು. ಗ್ರಾಮದಲ್ಲಿ ಆಕ್ರೋಶ ಎದುರಿಸಬೇಕಾಗುತ್ತದೆ ಎಂಬ ಕಾರಣಕ್ಕೆ ಮೃತ ವ್ಯಕ್ತಿಯ ಮರಣೋತ್ತರ ಪರೀಕ್ಷೆಯನ್ನು ಸರಗೂರು ತಾಲ್ಲೂಕಿನಲ್ಲಿ ನಡೆಸದೆ ಮೈಸೂರಿಗೆ ತಂದಿದ್ದಾರೆ. ರೈತ ಮೃತಪಟ್ಟ ದಿನ ಸರಗೂರಿನಲ್ಲೇ ಇದ್ದರೂ ಸ್ಥಳಕ್ಕೆ ಆಗಮಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಉಸ್ತುವಾರಿ ಸಚಿವ ಭೇಟಿ:** ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸ್ಥಳಕ್ಕೆ ಭೇಟಿ ನೀಡಿ ರೈತ ಮುಖಂಡರ ಅಹವಾಲು ಆಲಿಸಿದರು. ರೈತ ಮುಖಂಡರು ನೀಡಿರುವ ದೂರನ್ನು ಗಂಭೀರವಾಗಿ ಪರಿಗಣಿಸಿ, ರೈತರ ಉಪಸ್ಥಿತಿಯಲ್ಲಿ ಉನ್ನತ ಮಟ್ಟದ ಸಭೆ ಕರೆಯುವಂತೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ಅವರಿಗೆ ಸೂಚಿಸಿದರು. ಮೃತ ರಾಜಶೇಖರ್ ಪುತ್ರ ಶಿವು, ರೈತ ಮುಖಂಡರಾದ ಬಡಗಲಪುರ ನಾಗೇಂದ್ರ, ಹಳ್ಳಿಕೆರೆಹುಂಡಿ ಬಸವರಾಜು, ಹೊಸಕೋಟೆ ಬಸವರಾಜು ಇದ್ದರು.

## ಸಾಕುಪ್ರಾಣಿಗಳ ರಕ್ಷಣೆಯೇ ದೊಡ್ಡ ಸವಾಲು

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನ ಭೀಮನಭೀಡು ಹಾಗೂ ಚಿರಕನಹಳ್ಳಿ ಗ್ರಾಮದಲ್ಲಿ ಚಿರತೆ ದಾಳಿಗೆ ಮೇಕೆ ಹಾಗೂ ಕರು ಸಾವನ್ನಪ್ಪಿರುವ ಘಟನೆ ನಡೆದಿದ್ದು ಸೂಕ್ತ ಪರಿಹಾರಕ್ಕೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

**ವನ್ಯಜೀವಿಗಳ ಸರಣಿ ದಾಳಿ**

ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಕುಂದಕೆರೆ ವಲಯದ ಚಿರಕನಹಳ್ಳಿ ಗುರುಸ್ವಾಮಿ ಎಂಬವರ ಜಮೀನಿನಲ್ಲಿ ಕರುವನ್ನ ಚಿರತೆ ಬಲಿ ಪಡೆದಿದ್ದರೆ ಗುಂಡ್ಲುಪೇಟೆ ಬಫರ್ ಜೋನ್ ವಲಯದ ಭೀಮನಭೀಡು ಗ್ರಾಮದ ಶಿವಣ್ಣ ಎಂಬವರ ಮೇಕೆಯನ್ನ ಚಿರತೆ ಭೇಟೆಯಾಡಿದೆ. ಪ್ರತಿನಿತ್ಯ ವನ್ಯಜೀವಿಗಳ ಉಪಟಳದಿಂದ ಬೇಸತ್ತಿರುವ ರೈತರಿಗೆ ಸಾಕು ಪ್ರಾಣಿಗಳ ರಕ್ಷಣೆಯೇ ದೊಡ್ಡ ಸವಾಲಾಗಿ ಪರಿಣಮಿಸಿದೆ. ಜಾನುವಾರುಗಳ ಮೇವಿಗೆ ಹೊರಹೋಗಲು ಸಹ ಭಯಪಡುವಂತ ಸ್ಥಿತಿಯನ್ನ ತಂದೊಡ್ಡಿರುವ ಪ್ರಾಣಿಗಳ ಉಪಟಳಕ್ಕೆ ಕಡಿವಾಣ ಹಾಕುವಂತೆ ಅರಣ್ಯ ಇಲಾಖೆಗೆ ಮನವಿ ಮಾಡುತ್ತಲಿದ್ದರೂ ಯಾವುದೇ ಪ್ರಯೋಜನವಾಗಿಲ್ಲ.


> ವನ್ಯಜೀವಿಗಳ ಉಪಟಳಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಿದ್ದ ಅರಣ್ಯ ಇಲಾಖೆ ಇಂತಿಷ್ಟು ಪರಿಹಾರ ಹಣವೆಂಬಂತೆ ನೀಡಿ ಕೈತೊಳೆದುಕೊಳ್ಳುತ್ತಿದೆ ಇದರಿಂದ ರೈತಾಪಿ ವರ್ಗಕ್ಕೆ ಪೆಟ್ಟು ಬೀಳುತ್ತಿದೆ, ವನ್ಯಪ್ರಾಣಿಗಳಿಂದ ಬಲಿಯಾದ ಪ್ರಾಣಿಗಳಿಗೆ ಪರಿಹಾರ ನೀಡುವ ಬದಲು ಕಡಿವಾಣಕ್ಕೆ ಸೂಕ್ತ ಕ್ರಮ ಕೈಗೊಂಡರೆ ಒಳ್ಳೆಯದು.
>
> –ರಾಜು, ರೈತ ಭೀಮನಭೀಡು

## ದಾಖಲೆ ಇಲ್ಲದ ಶಾಲಾ ವಾಹನಗಳ ಮೇಲೆ ಕ್ರಮ

• **ಉದಯವಾಹಿನಿ, ಚಿಂತಾಮಣಿ**

ಖಾಸಗಿ ಶಾಲಾ, ಕಾಲೇಜುಗಳ ಆಡಳಿತ ಮಂಡಳಿಯು ಮಕ್ಕಳ ದಾಖಲಾತಿಗಷ್ಟೇ ಸೀಮಿತವಾಗದೆ, ಆ ಮಕ್ಕಳ ಸುರಕ್ಷತೆ ಬಗ್ಗೆಯೂ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಡಿವೈಎಸ್‌ಪಿ ಪಿ. ಮುರಳೀಧರ್ ಸೂಚಿಸಿದರು. ಈ ನಿಟ್ಟಿನಲ್ಲಿ ಶಿಕ್ಷಕರು ಮತ್ತು ಪೋಷಕರ ಸಭೆಗಳಲ್ಲಿ ಮಕ್ಕಳ ಸುರಕ್ಷತಾ ಕ್ರಮಗಳ ಬಗ್ಗೆ ಪೋಷಕರಲ್ಲೂ ಜಾಗೃತಿ ಮೂಡಿಸಬೇಕು ಎಂದು ಶಾಲಾ ಆಡಳಿತ ಮಂಡಳಿಗಳಿಗೆ ಅವರು ಸೂಚಿಸಿದರು.

ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಬುರುಡಗುಂಟೆ ಬಳಿ ಇತ್ತೀಚೆಗೆ ಸಂಭವಿಸಿದ ಶಾಲಾ ವಾಹನ ಮತ್ತು ದ್ವಿಚಕ್ರ ವಾಹನದ ಮಧ್ಯೆ ಡಿಕ್ಕಿಯಾಗಿ ನಾಲ್ವರು ಮೃತಪಟ್ಟ ಘಟನೆ ಹಿನ್ನೆಲೆಯಲ್ಲಿ ನಗರ ಪೊಲೀಸ್ ಠಾಣೆಯಲ್ಲಿ ಖಾಸಗಿ ಶಾಲಾ, ಕಾಲೇಜುಗಳ ಮುಖ್ಯಸ್ಥರ


ಉದಯವಾಹಿನಿ ಚಿತ್ರ

ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಮಾತನಾಡಿದ ಅವರು, ನಗರದಲ್ಲಿನ ಒಟ್ಟಾರೆ ಶಾಲಾ ಕಾಲೇಜುಗಳ ವಾಹನಗಳ ಪೈಕಿ 63 ವಾಹನಗಳಿಗೆ ಎಫ್.ಸಿ ಮತ್ತು ವಿಮೆ ಅವಧಿ ಮುಕ್ತಾಯವಾಗಿದ್ದು, ಅವುಗಳನ್ನು ನವೀಕರಣ ಮಾಡಿಲ್ಲ. ಸಾರಿಗೆ ಇಲಾಖೆಯಿಂದ ನೋಟಿಸ್ ನೀಡಲಾಗಿದ್ದರೂ, ಯಾರೂ ಸ್ಪಂದಿಸಿಲ್ಲ. ಇದೇ ರೀತಿ ಬೇಜವಾಬ್ದಾರಿ ತೋರಿದಲ್ಲಿ, ಕಾನೂನು ಪಾಲನೆ ಮಾಡದ ವಾಹನಗಳನ್ನು ವಶಕ್ಕೆ ಪಡೆದು, ಮೊಕದ್ದಮೆ ದಾಖಲಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು. ಇತ್ತೀಚೆಗೆ ನಡೆದ ಅಪಘಾತದಲ್ಲಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟರು. ಆ ಮನೆಯ ಮಹಿಳೆಯ ಪರಿಸ್ಥಿತಿ ಊಹಿಸಿಕೊಳ್ಳಿ. ಇದೇ ಪರಿಸ್ಥಿತಿ ನಮ್ಮ ಮನೆಯವರಿಗೆ ಎದುರಾದರೆ ಹೇಗಿರುತ್ತದೆ ಎಂಬುದನ್ನು ಚಿಂತಿಸಿ ಎಂದು ಹೇಳಿದರು.

ಅಪ್ರಾಪ್ತ ವಯಸ್ಕರಿಗೆ ವಾಹನ ನೀಡಬಾರದು ಎಂದು ಪೋಷಕರಿಗೆ ಮನವರಿಕೆ ಮಾಡಬೇಕು. ಜನರು ಬಹಳ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಾರೆ. ಶಾಲಾ ಕಾಲೇಜುಗಳಲ್ಲಿ ಈ ಬಗ್ಗೆ ಪ್ರಾಥಮಿಕ ಹಂತದಿಂದಲೇ ಜಾಗೃತಿ ಮೂಡಿಸಬೇಕು. ವಾಹನಗಳಲ್ಲಿ ನಿಗದಿತಕ್ಕಿಂತ ಹೆಚ್ಚಾಗಿ ಮಕ್ಕಳನ್ನು ಕೊಂಡೊಯ್ಯಬಾರದು ಒಂದು ಆಟೊದಲ್ಲಿ 20–25 ಮಕ್ಕಳನ್ನು ಸಾಗಿಸಿದರೆ ಕುರಿಗಳಿಗೂ ಮಕ್ಕಳಿಗೂ ಇರುವ ವ್ಯತ್ಯಾಸವೇನು ಎಂದು ಪ್ರಶ್ನಿಸಿದರು.

## ನಕಲಿ ದಾಖಲೆ ಸೃಷ್ಟಿಸಿ ದೇವಾಲಯದ ಆಸ್ತಿ ಪರಭಾರೆ: ಆರೋಪ

• **ಉದಯವಾಹಿನಿ, ಹಲಗೂರು**

ಸಮೀಪದ ಬಸವನಹಳ್ಳಿ ಹೆಬ್ಬೆಟ್ಟದ ಬಸವೇಶ್ವರ ದೇವಸ್ಥಾನದ ಆಸ್ತಿಯನ್ನು ಅರ್ಚಕರು ನಕಲಿ ದಾಖಲೆ ನೀಡಿ ತಮ್ಮ ಕುಟುಂಬದವರ ಹೆಸರಿಗೆ ಖಾತೆ ಮಾಡಿಸಿಕೊಂಡು ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಮಾರಾಟ ಮಾಡಿರುವ ಗಂಭೀರ ಆರೋಪ ಕೇಳಿ ಬಂದಿದೆ.

ಈ ಸಂಬಂಧ ಗ್ರಾಮಸ್ಥರು ತಹಶೀಲ್ದಾರ್‌ಗೆ ದೂರು ಸಲ್ಲಿಸಿದ್ದಾರೆ. ಬಸವನಹಳ್ಳಿ ಗ್ರಾಮದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಬಸವೇಶ್ವರ ದೇವಸ್ಥಾನವಿದೆ. ಈ ದೇವಸ್ಥಾನಕ್ಕೆ ಬ್ರಿಟಿಷರ ಕಾಲದಿಂದಲೂ ಇನಾಂ ಜಮೀನುಗಳಿದ್ದು, 1969ರಿಂದಲೂ ಸ.ನಂ 15ರಲ್ಲಿ 9 ಎಕರೆ 19 ಗುಂಟೆ ಬಸವೇಶ್ವರ ದೇವರ ಹೆಸರಿನಲ್ಲಿ, ಸ.ನಂ 14ರಲ್ಲಿ 5 ಎಕರೆ 39 ಗುಂಟೆ ವಡೇರಿ ಗೋರಿ ಎಂದು ದಾಖಲೆ ಇದೆ. ಈ ಇನಾಂ ಜಮೀನಿನಲ್ಲಿ ಸ.ನಂ 14 ಮತ್ತು 15ರ ಜಮೀನನ್ನು 2018 ರಲ್ಲಿ ತಹಶೀಲ್ದಾರ್ ಕಚೇರಿಯಲ್ಲಿ ಸುಳ್ಳು ದಾಖಲೆ ಒದಗಿಸಿ ದೇವಸ್ಥಾನದ ಪೂಜಾರಿ ಹೆಸರಿಗೆ ಖಾತೆ ಮಾಡಿಸಿಕೊಳ್ಳಲಾಗಿದೆ. ಈ ಪೈಕಿ ಸ.ನಂ 15ರಲ್ಲಿ 9.19 ಗುಂಟೆ ಜಮೀನನ್ನು 2025ರಲ್ಲಿ ಉದ್ಯಮಿಯೊಬ್ಬರಿಗೆ ಮಾರಾಟ ಮಾಡಲಾಗಿದೆ. ಇದಾದ ಬಳಿಕ ಆ ಉದ್ಯಮಿ


ಉದಯವಾಹಿನಿ ಚಿತ್ರ

ಜಮೀನನ್ನು ವಿಂಗಡಿಸಿ ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂಬುದು ಗ್ರಾಮಸ್ಥರ ಆರೋಪ.

ಸ.ನಂ 14ರ ಜಮೀನು ವಡೇರಿ ಗೋರಿ ಅದೇ ಗ್ರಾಮದ ಮಠದ ಶಾಂತ ಲಿಂಗಸ್ವಾಮಿ ಗುರುಗಳಿಗೆ ಸೇರಿದ್ದು, ಆ ಗುರುಗಳ ಮರಣದ ನಂತರ ಅವರ ಗೋರಿ ಇರುವುದಕ್ಕೆ ವಡೇರಿಗೋರಿ ಎಂದು ಕರೆಯಲಾಗುತ್ತದೆ. ಈ ಅಸ್ತಿಯನ್ನು ಪೂಜಾರಿ ಕುಟುಂಬದವರು ಅಕ್ರಮ ಖಾತೆ ಮಾಡಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಜಮೀನುಗಳ ಮೂಲ ದಾಖಲೆ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದು ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗೆ ಬಸವನಹಳ್ಳಿ ಗ್ರಾಮಸ್ಥರು ದೂರು ಸಲ್ಲಿಸಿದ್ದರು. ಇತ್ತೀಚೆಗೆ ಖರೀದಿದಾರ ದೇವಸ್ಥಾನದ ಪಕ್ಕದಲ್ಲೇ ರಸ್ತೆ ಮತ್ತು ಜಮೀನಿನಲ್ಲಿ ಗಿಡ ಗಂಟಿಗಳನ್ನು ತೆರವು ಮಾಡಿದ್ದು. ನಂತರ ಖರೀದಿಸಿದ ಭೂಮಿಯಲ್ಲಿ ಅಳತೆ ಕಲ್ಲುಗಳನ್ನು ಹಾಕಿಸಿದ್ದರು. ಇದರಿಂದ ಆತಂಕಗೊಂಡ ಗ್ರಾಮಸ್ಥರು ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಬಸವೇಶ್ವರ ದೇವಸ್ಥಾನದ ಜಮೀನು ಅಕ್ರಮವಾಗಿ ಪರಭಾರೆ ಆಗಿರುವ ಬಗ್ಗೆ ಬಸವನಹಳ್ಳಿ ಗ್ರಾಮಸ್ಥರು ಮನವಿ ಸಲ್ಲಿಸಿದ್ದಾರೆ. ಜಿಲ್ಲಾಧಿಕಾರಿ ಸೂಚನೆಯಂತೆ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ಮೂಲ ದಾಖಲೆಯಲ್ಲಿ ಬಸವೇಶ್ವರ ದೇವರು ಎಂಬುದಾಗಿ ನಮೂದಾಗಿದೆ. ನಮ್ಮ ಕಚೇರಿಯಲ್ಲಿ ಲಭ್ಯವಿರುವ ದಾಖಲೆ ಮತ್ತು ಖಾತೆ ಬದಲಾಗಿರುವ ಪೂರಕ ವರದಿಯನ್ನು ಜಿಲ್ಲಾಧಿಕಾರಿಗೆ ಸಲ್ಲಿಸಲಾಗುವುದು. ಅವರ ಮುಂದಿನ ಆದೇಶದಂತೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ತಹಶೀಲ್ದಾರ್ ವಿ.ಎಸ್.ಲೋಕೇಶ್ ತಿಳಿಸಿದ್ದಾರೆ.

ಅರ್ಚಕರು, ಕಂದಾಯ ಇಲಾಖೆ ಅಧಿಕಾರಿಗಳು ಪ್ರಕರಣದಲ್ಲಿ ಶಾಮೀಲಾಗಿ ದೇವಾಲಯದ ಆಸ್ತಿಯನ್ನು ಖಾಸಗಿಯವರಿಗೆ ವರ್ಗಾಯಿಸಿದ್ದಾರೆ. ಜಿಲ್ಲಾಧಿಕಾರಿ ಪ್ರಕರಣದ ತನಿಖೆ ನಡೆಸಿ, ದೇವಾಲಯದ ಹೆಸರಿಗೆ ಮರಳಿ ಆರ್.ಟಿ.ಸಿ ಸೇರ್ಪಡೆ ಮಾಡಬೇಕು ಎಂದು ಗ್ರಾ. ಪಂ. ಸದಸ್ಯ ಶಶಿಕುಮಾರ್ ಒತ್ತಾಯಿಸಿದ್ದಾರೆ.

## ಮಾನವ ಸಂಘರ್ಷ ನಿಯಂತ್ರಣಕ್ಕೆ ಕಾರ್ಯಪಡೆ ರಚಿಸಿ

• **ಉದಯವಹಿನಿ, ಚಾಮರಾಜನಗರ**

ಮಾನವ ಹಾಗೂ ವನ್ಯಜೀವಿ ಸಂಘರ್ಷ ನಿಯಂತ್ರಿಸಲು ಸ್ಥಳೀಯ ಜನಪ್ರತಿನಿಧಿಗಳು, ಸ್ವಯಂ ಸೇವಾ ಸಂಸ್ಥೆಗಳು, ಪರಿಸರ ತಜ್ಞರನ್ನೊಳಗೊಂಡ ರಾಜ್ಯಮಟ್ಟದ ವನ್ಯಜೀವಿ ಮಾನವ ಸಂಘರ್ಷ ನಿರ್ವಹಣಾ ಕಾರ್ಯಪಡೆ ರಚಿಸಬೇಕು' ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದರು. ಸರಗೂರು ತಾಲ್ಲೂಕಿನಲ್ಲಿ ಹುಲಿದಾಳಿಗೆ ರೈತರೊಬ್ಬರು ಮೃತಪಟ್ಟು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡ ಹಿನ್ನೆಲೆಯಲ್ಲಿ, ಬಂಡೀಪುರದಲ್ಲಿ ವನ್ಯಜೀವಿ ವಿಭಾಗದ ಉನ್ನತಾಧಿಕಾರಿಗಳ ತುರ್ತು ಸಭೆ ನಡೆಸಿದ ಅವರು, ಉದ್ದೇಶಿತ ಕಾರ್ಯಪಡೆಯು ಕಾಡಂಚಿನ ಗ್ರಾಮಗಳ ಜನರಿಗೆ ಪ್ರಾಣಿಗಳ ಜೊತೆ ಸಹಬಾಳ್ವೆ ನಡೆಸುವ, ಮುನ್ನೆಚ್ಚರಿಕಾ ಕ್ರಮ ತೆಗೆದುಕೊಳ್ಳುವ ಕುರಿತು ಜಾಗೃತಿ ಮೂಡಿಸಬೇಕು ಎಂದರು.

ಕಾಡಿನಂಚಿನಲ್ಲಿರುವ ಶಾಲೆಗಳ ವಿದ್ಯಾರ್ಥಿಗಳಿಗೆ ಸಂವೇದನಾಶೀಲತೆ ಬೆಳೆಸುವುದರ ಜೊತೆಗೆ ಅಧಿಕಾರಿಗಳು ಹಾಗೂ ಗ್ರಾಮಸ್ಥರ ನಡುವೆ ಸ್ನೇಹಸೇತುವಾಗಿ ಕಾರ್ಯಪಡೆ ಕಾರ್ಯನಿರ್ವಹಿಸಬೇಕು ಎಂದರು. ಆನೆ, ಹುಲಿ, ಚಿರತೆ ಸಹಿತ ವನ್ಯಜೀವಿಗಳ ಸೆರೆ ಕಾರ್ಯಾಚರಣೆ ವೇಳೆ ಎಸ್ ಒಪಿ ಪಾಲಿಸಬೇಕು. 155 ಸೆಕ್ಷನ್ ಅಡಿ ನಿರ್ಬಂಧಕಾಜ್ಞೆ ಜಾರಿಗೊಳಿಸಿ ಕಾರ್ಯಾಚರಣೆ ಮಾಡಬೇಕು. ಸಾಮಾಜಿಕ


ಉದಯವಾಹಿನಿ ಚಿತ್ರ

ಮಾಧ್ಯಮಗಳ ಮೂಲಕ ಸಕಾಲದಲ್ಲಿ ಸುರಕ್ಷತಾ ಕ್ರಮಗಳ ಮಾಹಿತಿ ರವಾನಿಸಬೇಕು. ವಾಟ್ಸ್ ಆ್ಯಪ್ ಮೂಲಕ ಸಂದೇಶ ರವಾನೆಗೆ ಸಮಗ್ರ ಕಮಾಂಡ್ ಸೆಂಟರ್ ಸ್ಥಾಪಿಸಲಾಗುವುದು ಎಂದರು.

ಟೆಂಟಕಲ್ ಫೆನ್ಸಿಂಗ್, ಸೌರ ತಂತಿ ಬೇಲಿ ಅಳವಡಿಕೆ, ಆನೆ ಕಂದಕ ನಿರ್ಮಾಣ ಹಾಗೂ ರೈಲ್ವೆ ಬ್ಯಾರಿಕೇಡ್‌ಗೆ ಚೈನ್ ಲಿಂಕ್ ಬೇಲಿ ಹಾಕಲು ಪ್ರಸ್ತಾವ ಸಲ್ಲಿಸಬೇಕು. ಮುಂಚೂಣಿ ಹೊರಗುತ್ತಿಗೆ ಸಿಬ್ಬಂದಿಯನ್ನು ನೇಮಿಸಬೇಕು. ವನ್ಯಜೀವಿಗಳು ಕಾಡಿನಿಂದ ಹೊರಗೆ ಹೋಗದಂತೆ ನಿಯಂತ್ರಿಸುವ ಕ್ರಮಗಳ ಬಗ್ಗೆ 5 ದಿನಗಳಲ್ಲಿ ವರದಿ ಸಲ್ಲಿಸಬೇಕು ಎಂದು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸಚಿವರು ಸೂಚಿಸಿದರು. ಮಲೆನಾಡಿನಲ್ಲಿ ಕಾಳಿಂಗ ಸರ್ಪಗಳ ಸಂಶೋಧನೆ ಹೆಸರಲ್ಲಿ ಶೋಷಣೆ ನಡೆಯುತ್ತಿರುವ ಬಗ್ಗೆ ವರದಿ ಪರಾಮರ್ಶಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

## ಹೆಣ್ಣು ತನ್ನ ಹಕ್ಕಿಗಾಗಿ ಹೋರಾಡಬೇಕಿದೆ


ಉದಯವಾಹಿನಿ ಚಿತ್ರ

• **ಉದಯವಹಿನಿ, ವಿರಾಜಪೇಟೆ**

ಮಹಿಳೆಯರು ಪ್ರಸ್ತುತ ಎಲ್ಲಾ ಕ್ಷೇತ್ರದಲ್ಲೂ ಅಭಿವೃದ್ಧಿ ಸಾಧಿಸುತ್ತಿದ್ದಾರೆ. ವಿಶೇಷವಾಗಿ ಹೆಣ್ಣು ಶಿಕ್ಷಣ ಪಡೆದರೆ ಮಾತ್ರ ಅನ್ಯಾಯ, ದೌರ್ಜನ್ಯಗಳನ್ನು ಪ್ರಶ್ನಿಸಲು ಸಾಧ್ಯ ಎಂದು ದುಡಿಯುವ ಮಹಿಳೆಯರ ಸಂಘಟನೆಯ ರಾಜ್ಯ ಸಂಚಾಲಕಿ ಎಚ್. ಎಸ್. ಸುನಂದ ಅವರು ಅಭಿಪ್ರಾಯಪಟ್ಟರು. ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯುನಿಯನ್ಸ್‌ನ ಜಿಲ್ಲಾ ಸಮಿತಿ ವತಿಯಿಂದ ಪಟ್ಟಣದಲ್ಲಿ ಈಚೆಗೆ ನಡೆದ ದುಡಿಯುವ ಮಹಿಳೆಯರ ಜಿಲ್ಲಾ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹೆಣ್ಣು ಇಂದು ಬೀದಿಯಲ್ಲಿ ಕಸ ತೆಗೆಯುವ, ತನ್ನದಲ್ಲದ ಮನೆಗಳಲ್ಲಿ ಕಸಮುಸುರೆ ಸ್ವಚ್ಛತೆ ಸೇರಿದಂತೆ ಅನೇಕ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾಳೆ. ಹೀಗೆ ಹೆಣ್ಣು ಕುಟುಂಬ, ಸಮಾಜದ ಅಭಿವೃದ್ಧಿಗೆ ಹಿಂದಿನಿಂದಲೂ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಕೆಲಸಕ್ಕೆ ಕೂಲಿ ಪಡೆದರೂ ಆದಾಯದ ಪಾಲು ಬಳಸಲು ಹಕ್ಕು ಇಲ್ಲದವಳಾಗಿದ್ದಾಳೆ. ಇಂದು ಹೆಣ್ಣು ತನ್ನ ಹಕ್ಕಿಗಾಗಿ ಹೋರಾಡಬೇಕಿದೆ ಎಂದರು.

ತಾನು ದುಡಿಯುವ ಸ್ಥಳಗಳಲ್ಲಿ ಉಸಿರುಗಟ್ಟಿಸುವ ವಾತಾವರಣ ಇದ್ದರೆ ಅದನ್ನು ಖಂಡಿಸಬೇಕು. ದುಡಿಮೆಯ ಕಾಲಾವಧಿ ದಿನಕ್ಕೆ 8 ಗಂಟೆಗೆ ನಿಗದಿಪಡಿಸಬೇಕು. ಹೆಣ್ಣುಮಕ್ಕಳು ಇಂದಿಗೂ ಅಪಾಯಕಾರಿ ಸ್ಥಳಗಳಲ್ಲಿ ರಾತ್ರಿ ಪಾಳಿ ಕೆಲಸ ಮಾಡುತ್ತಿದ್ದಾರೆ. ಮಹಿಳೆಯರ ಜೀವಕ್ಕೆ ಬೆಲೆ ಕೊಡದ ಸಮಾಜವನ್ನು ಎದುರು ಹಾಕಿಕೊಂಡು ಸಮಾನತೆಯ ಆಶಯಗಳ ಈಡೇರಿಕೆಗೆ ಹೋರಾಡುತ್ತಲೇ ನಮ್ಮ ತನವನ್ನು ಕಾಪಾಡಿಕೊಳ್ಳಬೇಕಿದೆ ಎಂದರು. ಸಿ.ಐ.ಟಿ.ಯುನ ಜಿಲ್ಲಾ ಅಧ್ಯಕ್ಷ ಪಿ.ಆರ್. ಭರತ್ ಅವರು ಮಾತನಾಡಿ, ಸಮಾಜದಲ್ಲಿ ಮಹಿಳೆಯರ ದುಡಿಮೆ, ಶ್ರಮ ಪರಿಗಣನೆ ಆಗುತ್ತಿಲ್ಲ. ಕೆಲಸ ಮಾಡುವ ವಿಭಿನ್ನ ವಲಯಗಳಾದ ಉತ್ಪಾದನೆ, ಕೃಷಿ, ಸೇವಾ ವಲಯಗಳಲ್ಲಿ ಮಹಿಳೆಯರಿಗೆ ಅನೇಕ ಅಡೆತಡೆಗಳಿವೆ. ಇವೇ ತಾರತಮ್ಯಗಳು ಮತ್ತು ದೌರ್ಜನ್ಯಕ್ಕೂ ಕಾರಣಗಳಾಗಿವೆ ಎಂದರು. ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಸುಮಿತ್ರ ಅವರು ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿ, ದುಡಿಯುವ ಮಹಿಳೆಯರು ಸಾಕಷ್ಟು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಸಂಘಟಿತ, ಅಸಂಘಟಿತ ವಲಯ, ಸೇವಾ ವಲಯಗಳ ಕೆಲಸಗಳಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳಲಾಗುತ್ತಿದೆ. ಕೆಲಸದ ಸ್ಥಳಗಳಲ್ಲಿ ನಡೆಯುವ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮವಹಿಸಬೇಕು. ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳಾ ಹಕ್ಕುಗಳ ರಕ್ಷಣೆಗೆ ಇರುವ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು ಎಂದರು.

## ಮತ ಕಳ್ಳತನ ಬಿಜೆಪಿ, ಆಯೋಗ ಶಾಮೀಲು

• **ಉದಯವಾಹಿನಿ, ಕೋಲಾರ**

ದೇಶದ ವಿವಿಧೆಡೆಯ ಚುನಾವಣೆಗಳಲ್ಲಿ ಮತ ಕಳ್ಳತನ ನಡೆದಿದೆ ಎಂದು ಆರೋಪಿಸಿ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ನಗರದ ಹೊಸ ಬಸ್ ನಿಲ್ದಾಣ ಬಳಿ ಪ್ರತಿಭಟನೆ ಹಾಗೂ ಸಹಿ ಸಂಗ್ರಹ ಅಭಿಯಾನ ನಡೆಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಲಕ್ಷ್ಮಿನಾರಾಯಣ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಬಿಜೆಪಿ, ಚುನಾವಣಾ ಆಯೋಗದ ವಿರುದ್ಧ ವಾಗ್ದಾಳಿ ನಡೆಸಿದರು. ಚುನಾವಣಾ ಆಯೋಗವು ಬಿಜೆಪಿ ಸರ್ಕಾರದ ಏಜೆಂಟರಂತೆ ವರ್ತಿಸುತ್ತಿದೆ ಎಂದು ಆರೋಪಿಸಿದರು. ಶಾಸಕ ಕೊತ್ತೂರು ಮಂಜುನಾಥ್ ಮಾತನಾಡಿ, ಒಂದೇ ಮನೆಯಲ್ಲಿ ಸುಮಾರು 10 ಸಾವಿರ ಜನರಿದ್ದಾರೆ ಎಂದು ವಿಳಾಸ ತೋರಿಸುತ್ತಿದ್ದಾರೆ. ಇದು ಹೇಗೆ ಸಾಧ್ಯ? ಮತಗಳ್ಳತನ ನಡೆದಿರುವುದು ಇದರಿಂದಲೇ ತಿಳಿಯುತ್ತದೆ. ಮತಗಳ್ಳತನದ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಅಂಬೇಡ್ಕರ್ ಕೊಟ್ಟಿರುವ ಸಂವಿಧಾನವನ್ನು ಬಿಜೆಪಿ ಅನುಸರಿಸುತ್ತಿದೆಯೇ? ದೇಶದಲ್ಲಿ ಬಿಜೆಪಿಯವರು ಮತಗಳ್ಳತನದ ಮೂಲಕ ಗೆದ್ದಿದ್ದಾರೆ. ಮತಗಳ್ಳತನ ನಡೆದಿದೆ ಎಂದು


ಉದಯವಾಹಿನಿ ಚಿತ್ರ

ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಚುನಾವಣಾ ಆಯೋಗಕ್ಕೆ ದೂರು ನೀಡಿದರೆ, ಮತಗಳ್ಳತನ ಆಗಿಲ್ಲ– ಕ್ಷಮಾಪಣೆ ಕೇಳಬೇಕು ಎನ್ನುತ್ತಾರೆ. ಇಂತಹ ಅನ್ಯಾಯಗಳು ನಮ್ಮ ದೇಶದಲ್ಲಿ ನಡೆಯುತ್ತಿವೆ. ಮತಗಳ್ಳತನ ಕುರಿತು ಹಳ್ಳಿ ಹಳ್ಳಿಗೂ ಹೋಗಿ ಮಾಹಿತಿ ನೀಡಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಎಂ.ಎಲ್. ಅನಿಲ್ ಕುಮಾರ್ ಮಾತನಾಡಿ, ಒಂದು ಮತಕ್ಕೆ 80 ಕೊಟ್ಟು 6 ಸಾವಿರ ಮತಗಳನ್ನು ಖರೀದಿ ಮಾಡಿರುವ ಸತ್ಯ ತನಿಖೆಯಿಂದ ಹೊರಬಂದಿದೆ. ಚುನಾವಣಾ ಆಯೋಗ ಪಕ್ಷಾತೀತವಾಗಿ ಕೆಲಸ ಮಾಡಬೇಕು. ಒಂದು ಪಕ್ಷದ ಏಜೆಂಟ್ ರೀತಿ ಕೆಲಸ ಮಾಡಬಾರದು. ಯಾವುದೋ ಒಂದು

> ಚುನಾವಣಾ ವ್ಯವಸ್ಥೆಯಲ್ಲೇ ಅಕ್ರಮ ಎಸಗಿಬಿಟ್ಟರೆ ಬಿಜೆಪಿಯ ಗೆಲುವು ಸುಲಭ. ಹೀಗಾಗಿ, ಚುನಾವಣಾ ಆಯೋಗ ಮತ್ತು ಬಿಜೆಪಿ ಜಂಟಿಯಾಗಿಯೇ ಈ ಅಕ್ರಮದಲ್ಲಿ ಶಾಮೀಲಾಗಿವೆ. ಮತದಾರರ ಪಟ್ಟಿ ನಿರ್ವಹಣೆಯಲ್ಲಿ ಅಕ್ರಮವಾಗದಂತೆ ನೋಡಿಕೊಳ್ಳುವುದು ಆಯೋಗದ ಮೊದಲ ಕರ್ತವ್ಯ. ಆದರೆ, ಮಹದೇವಪುರ ಕ್ಷೇತ್ರದ ಮತದಾರರ ಪಟ್ಟಿಯಲ್ಲೇ ಚುನಾವಣಾ ಆಯೋಗ ಎಷ್ಟು ಅಕ್ರಮ ಎಸಗಿದೆ ಎಂಬುದು ಗೊತ್ತಾಗುತ್ತದೆ ಎಂದು ಹೇಳಿದರು.

ಸರ್ಕಾರದ ಪರ ಕೆಲಸ ಮಾಡುವುದಲ್ಲ. ಸಿಬಿಐ, ಇ.ಡಿ, ಚುನಾವಣಾ ಆಯೋಗ ಸೇರಿ ಎಲ್ಲದರಲ್ಲೂ ರಾಜಕೀಯಕರಣಗೊಳಿಸಿದ್ದಾರೆ. ಜೊತೆಗೆ ಸುಪ್ರೀಂ ಕೋರ್ಟ್‌ಅನ್ನು ಸಹ ಬೇರೆ ದೃಷ್ಟಿಯಲ್ಲಿ ನೋಡುವ ಹಾಗೆ ಇಟ್ಟಿದ್ದಾರೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು ಎಂದರು.

## ಮಿನಿ ನ್ಯೂಸ್

### ಕೆಂಪಾಪುರದಲ್ಲಿ ಹೆಚ್ಚುವರಿ ಜಮೀನು ವಶಕ್ಕೆ ಗ್ರಾಮಸ್ಥರ ವಿರೋಧ

• **ಉದಯವಾಹಿನಿ, ಮಾಗಡಿ**

ಕೆಂಪಾಪುರದಲ್ಲಿ ಹಿರಿಯ ಕೆಂಪೇಗೌಡರ ಐಕ್ಯಸ್ಥಳ ಅಭಿವೃದ್ಧಿ ಹೆಸರಿನಲ್ಲಿ ರೈತರ ಹೆಚ್ಚುವರಿ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಬೇಕೆಂದು ನೂರಾರು ರೈತರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು. ತಿಪ್ಪಸಂದ್ರ ಹೋಬಳಿ ಕೆಂಪಾಪುರದಲ್ಲಿ ನಾಡಪ್ರಭು ಹಿರಿಯ ಕೆಂಪೇಗೌಡರ ಐಕ್ಯಸ್ಥಳ ಪತ್ತೆಯಾಗಿ 15 ವರ್ಷ ಆಗಿದೆ. ಈ ಸ್ಥಳವನ್ನು ವಿಶ್ವಸ್ಮಾರಕವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಮುಂದಾಗಿರುವುದು ಗ್ರಾಮಸ್ಥರಿಗೆ ಸಂತೋಷ ಮತ್ತು ಹೆಮ್ಮೆಯ ವಿಷಯವಾಗಿದೆ. ಈ ಯೋಜನೆಗಾಗಿ ನೀಲಿ ನಕ್ಷೆಯು ಈ ಹಿಂದೆಯೇ ತಯಾರಾಗಿದೆ.

ಗ್ರಾಮಸ್ಥರು, ರೈತರು ಒಮ್ಮತದಿಂದ ಈಗಾಗಲೇ 10 ಎಕರೆಗೂ ಹೆಚ್ಚು ಭೂಮಿ ಸರ್ಕಾರಕ್ಕೆ ನೀಡಲಾಗಿದೆ. ಭೂಸ್ವಾಧೀನಕ್ಕೆ ಒಳಗಾದ ರೈತರಿಗೆ ಪುನರ್ವಸತಿಗಾಗಿ ಜಾನಿಗೆರೆ ಗ್ರಾಮದಲ್ಲಿ ಗೋಮಾಳ ಜಾಗ ಗುರುತಿಸಲಾಗಿದೆ. ಅಲ್ಲಿ ಮೂಲ ಸೌಕರ್ಯ ಅಥವಾ ಹಕ್ಕುಪತ್ರ ನೀಡದೆ ಈಗ ಹೆಚ್ಚುವರಿಯಾಗಿ ಇನ್ನೂ 10 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲು ಭೂದಾಖಲೆಗಳ ಸಹಾಯಕ ನಿರ್ದೇಶಕ ನೋಟಿಸ್ ಜಾರಿ ಮಾಡಿ ಸಹಿ ಹಾಕುವಂತೆ ಒತ್ತಾಯಿಸುತ್ತಿದ್ದಾರೆ. ರೈತರು ಈ ನೋಟಿಸ್ ಅನ್ನು ತಿರಸ್ಕರಿಸಿದ್ದಾರೆ. ನಮಗೆ ಈಗ ಉಳಿದಿರುವುದು ಕೇವಲ ತುಂಡು ಜಮೀನು. ಇದನ್ನು ಕಳೆದುಕೊಂಡರೆ ಜೀವನಾಧಾರ ದನಕರು, ಮಕ್ಕಳು, ಮನೆತನದ ನಿರ್ವಹಣೆ ಹೇಗೆ ಸಾಧ್ಯ ಎಂಬ ಆತಂಕದಲ್ಲಿದ್ದೇವೆ ಎಂದು ರೈತರು ಅಳಲು ತೋಡಿಕೊಂಡರು.


### ಕೇಂದ್ರ ಚುನಾವಣಾ ಆಯುಕ್ತ ರಾಜಕೀಯ ಪುಢಾರಿ: ಯತೀಂದ್ರ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಮೈಸೂರು**

ಉತ್ತರಾಧಿಕಾರಿ ಹೇಳಿಕೆ ನೀಡಿ ಸಂಕಷ್ಟಕ್ಕೆ ಸಿಲುಕಿದ್ದ ಯತೀಂದ್ರ ಸಿದ್ದರಾಮಯ್ಯ ಈಗ ಮತ್ತೊಂದು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ವೋಟ್ ಚೋರಿ ಸಹಿ ಸಂಗ್ರಹ ಸಭೆಯಲ್ಲಿ ಮತಗಳ್ಳತನ ವಿರುದ್ಧ ಮಾತನಾಡುವಾಗ ಕೇಂದ್ರ ಚುನಾವಣಾ ಆಯುಕ್ತರನ್ನು ರಾಜಕೀಯ ಪುಢಾರಿ ಎಂದು ಹೊಸ ವಿವಾದ ಮೈಮೇಲೆ ಎಳೆದುಕೊಂಡಿದ್ದಾರೆ. ವರುಣಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ನಡೆದ ವೋಟ್ ಚೋರಿ ಸಹಿ ಸಂಗ್ರಹ ಸಭೆಯಲ್ಲಿ ಈ ವಿವಾದಾತ್ಮಕ ಭಾಷಣ ಮಾಡಿದ್ದಾರೆ. ಕೇಂದ್ರ ಚುನಾವಣಾ ಆಯುಕ್ತ ಒಬ್ಬ ರಾಜಕೀಯ ಪುಢಾರಿ. ಕೇಂದ್ರ ಚುನಾವಣಾ ಆಯುಕ್ತ ರಾಜಕೀಯ ಪುಢಾರಿ ರೀತಿ ಹೇಳಿಕೆಗಳನ್ನು ಕೊಡುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ. ಮತಗಳ್ಳತನದ ಬಗ್ಗೆ ರಾಹುಲ್ ಗಾಂಧಿ ಸಾಕ್ಷಿ ಸಮೇತ ದೂರು ಕೊಟ್ಟಿದ್ದಾರೆ. ಆದರೆ ದೂರು ಕೊಟ್ಟವರ ಮೇಲೆಯೇ ಚುನಾವಣಾ ಆಯುಕ್ತರು ಮಾತನಾಡುತ್ತಿದ್ದಾರೆ. ಆರೋಪ ಮಾಡಿರುವವರ ಮೇಲೆಯೇ ದಾಳಿ ಮಾಡಿ ತೇಜೋವಧೆ ಮಾಡುತ್ತಿದ್ದಾರೆ ಎಂದು ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಬಗ್ಗೆ ಟೀಕಿಸಿದ್ದಾರೆ.

### ನವೀಕರಣಗೊಂಡ ಕೆಲಸೂರು ಗ್ರಾ.ಪಂ. ಕಾರ್ಯಾಲಯ ಉದ್ಘಾಟನೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನ ಕೆಲಸೂರು ಗ್ರಾಮದಲ್ಲಿ ನವೀಕರಣಗೊಂಡ ಗ್ರಾಮ ಪಂಚಾಯತಿ ಕಾರ್ಯಾಲಯವನ್ನ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಉದ್ಘಾಟಿಸಿದರು. ಈ ಹಿಂದೆ ಹಲವು ಸಮಸ್ಯೆಗಳಿಂದ ಕೂಡಿದ್ದ ಗ್ರಾಮಪಂಚಾಯತಿಗೆ ಹೊಸ ಸ್ಪರ್ಶ ನೀಡುವ ಜೊತೆಗೆ ಅಗತ್ಯ ಸೌಲಭ್ಯಗಳನ್ನ ಕಲ್ಪಿಸಲಾಗಿದ್ದು ನೂತನವಾಗಿ ನವೀಕರಣಗೊಂಡ ಕಟ್ಟಡವನ್ನ ಸದ್ಬಳಕೆ ಮಾಡಿಕೊಳ್ಳುವಂತೆ ಶಾಸಕ ಗಣೇಶ್ ಪ್ರಸಾದ್ ಸಲಹೆ ನೀಡಿದರು. ಈ ವೇಳೆ ಗ್ರಾಮಪಂಚಾಯತಿ ಅಧ್ಯಕ್ಷೆ ಚೆನ್ನಾಜಮ್ಮ, ಉಪಾಧ್ಯಕ್ಷ ಮಹದೇವೆಗೌಡ, ಸದಸ್ಯರಾದ ಮಾದಪ್ಪ, ಸೌಮ್ಯ ಮಂಜುನಾಥ್, ಚೆನ್ನನಾಯ್ಕ, ಸಿದ್ದಪ್ಪಾಜಿ, ರತಿಮಣಿ, ನಾಗೇಶ್ ನಾಯ್ಕ, ಸ್ವಾಮಿ, . ಮಂಗಳಮ್ಮ, ಪಿಡಿಓ ರವಿ, ಸಿಬ್ಬಂದಿಗಳು ಇದ್ದರು.

## ನಾಡಕಚೇರಿ ಮುಂದೆ ಕಸ ಸುರಿದು ಪ್ರತಿಭಟನೆ; ಕಸ ವಿಲೇವಾರಿ ಬಿಕ್ಕಟ್ಟು

● ಹುಳಿಯಾರು ನಾಡಕಚೇರಿ ಮುಂದೆ ಕಸ ಸುರಿಯುವ ವಿಚಾರವಾಗಿ ಪೊಲೀಸ್ ಹಾಗೂ ಪ್ರತಿಭಟನಕಾರರಿಗೆ ವಾಗ್ವಾದ

• **ಉದಯವಾಹಿನಿ, ಹುಳಿಯಾರು**

ಕಸ ವಿಲೇವಾರಿ ಘಟಕ ಸಮಸ್ಯೆ, ಪಟ್ಟಣದ ಮೂಲಸೌಕರ್ಯಗಳ ಕೊರತೆ ಖಂಡಿಸಿ, ಹುಳಿಯಾರಿನ ರೈತ ಸಂಘ 19 ದಿನಗಳಿಂದ ಪಟ್ಟಣ ಪಂಚಾಯಿತಿ ಕಚೇರಿ ಮುಂದೆ ನಡೆಯುತ್ತಿರುವ ಅಹೋರಾತ್ರಿ ಧರಣಿ ಬೆಂಬಲಿಸಿ ವಿವಿಧ ಸಂಘ–ಸಂಸ್ಥೆಗಳು ಮತ್ತು ನಾಗರಿಕರು ಟ್ರ್ಯಾಕ್ಟರ್‌ನಲ್ಲಿ ಕಸ ತುಂಬಿಕೊಂಡು ಬಂದು ನಾಡಕಚೇರಿ ಮುಂದೆ ಸುರಿಯಲು ಯತ್ನಿಸುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು.

**19 ದಿನಗಳಿಂದ ಅಹೋರಾತ್ರಿ ಧರಣಿ**

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಸೇರಿದಂತೆ ಹಲವು ಸಂಘಟನೆಗಳ ಬೆಂಬಲದೊಂದಿಗೆ ನಡೆದ ಈ ಪ್ರತಿಭಟನೆಯು ತೀವ್ರ ಸ್ವರೂಪ ಪಡೆದುಕೊಂಡಿತ್ತು. ಪಟ್ಟಣ ಪಂಚಾಯಿತಿ ಮುಂದೆ ತಹಶೀಲ್ದಾರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಅಧಿಕಾರಿಗಳು ಸೇರಿಕೊಂಡು ಪ್ರತಿಭಟನಕಾರರೊಂದಿಗೆ ಸಂಜೆವರೆಗೆ ಸಮಾಲೋಚಿಸಿದರು. ಮೂರು ಬೇಡಿಕೆಗಳಲ್ಲಿ ಎರಡು ಬೇಡಿಕೆ ಈಡೇರಿಸುವ ಭರವಸೆ ನೀಡಿದರೂ ಸಹ ಪ್ರತಿಭಟನಕಾರರು ಒಪ್ಪದೇ ನಾಡಕಚೇರಿ ಮುಂದೆ ಕಸ ಸುರಿಯುವ ಪ್ರಯತ್ನಕ್ಕೆ ಮುಂದಾದರು. ಪ್ರತಿಭಟನಾಕಾರರು ಟ್ರ್ಯಾಕ್ಟರ್‌ನಲ್ಲಿ ಕಸ ತುಂಬಿಕೊಂಡು ಮೊದಲು ದುರ್ಗಮ್ಮನ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ನಂತರ,


ಉದಯವಾಹಿನಿ ಚಿತ್ರ

ಮೆರವಣಿಗೆ ಮೂಲಕ ನಾಡಕಚೇರಿ ಮುಂದೆ ಆಗಮಿಸಿ, ಕಸ ಸುರಿಯುವ ಮೂಲಕ ಆಕ್ರೋಶ ವ್ಯಕ್ತಪಡಿಸಲು ಮುಂದಾದರು.

**ಪೊಲೀಸರ ಅಡ್ಡಿ:** ನಾಡಕಚೇರಿ ಆವರಣದ ಮುಂದೆ ಕಸ ಸುರಿಯುವುದಕ್ಕೆ ಸ್ಥಳದಲ್ಲಿದ್ದ ಪೊಲೀಸರು ಅಡ್ಡಿಪಡಿಸಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ತಡೆಯಲು ನಾಡಕಚೇರಿ ಮುಂದೆ ಹೆಚ್ಚುವರಿ ಎಸ್.ಪಿ., ಡಿವೈಎಸ್ಪಿ ಮತ್ತು ಸರ್ಕಲ್ ಇನ್‌ಸ್ಪೆಕ್ಟರ್ ಸೇರಿದಂತೆ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಬಿಗಿ ಸರ್ಪಗಾವಲು ಏರ್ಪಡಿಸಲಾಗಿತ್ತು.

**ಹಿರಿಯ ಅಧಿಕಾರಿಗಳೊಂದಿಗೆ ಮಾತುಕತೆ:** ಪ್ರತಿಭಟನಾಕಾರರನ್ನು ಸಮಾಧಾನಪಡಿಸಲು ತಿಪಟೂರು ಉಪವಿಭಾಗಾಧಿಕಾರಿ ಸಪ್ತಶ್ರೀ ಅವರು ಸ್ಥಳಕ್ಕೆ ಆಗಮಿಸಿ ಮಾತುಕತೆ ನಡೆಸಿದರು. ತುಮಕೂರು ನಗರ ಅಭಿವೃದ್ಧಿ ಕೋಶದ ಯೋಜನಾಧಿಕಾರಿ ಯೋಗಾನಂದ್, ತುಮಕೂರು ಎಪಿಎಂಸಿ ಉಪನಿರ್ದೇಶಕ ರಾಜಣ್ಣ, ತಹಶೀಲ್ದಾರ್ ಕೆ.ಪುರಂದರ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಅಧಿಕಾರಿಗಳು ಮತ್ತು ಪ್ರತಿಭಟನಾಕಾರರ ನಡುವೆ ಕಾವೇರಿದ ಚರ್ಚೆ ನಡೆಯಿತು.

ಪ್ರತಿಭಟನಾಕಾರರು ತಮ್ಮ ಬೇಡಿಕೆಗಳನ್ನು ಕೇವಲ ಮೌಖಿಕವಾಗಿ ಹೇಳದೆ, ಸಮಸ್ಯೆಗಳ ಶಾಶ್ವತ ಪರಿಹಾರಕ್ಕಾಗಿ ನಿರ್ದಿಷ್ಟ ಕಾರ್ಯತಂತ್ರವನ್ನು ರೂಪಿಸುವಂತೆ ಒತ್ತಾಯಿಸಿದರು.

**ತಾಂತ್ರಿಕ ಸಮಿತಿ ರಚನೆ**

ಜಾಗ ಗುರುತಿಸುವ ಮುನ್ನ ಅಧಿಕಾರಿಗಳು ಸಾರ್ವಜನಿಕರು ಜನಪ್ರತಿನಿಧಿಗಳು ಮತ್ತು ತಾಂತ್ರಿಕ ಪರಿಣಿತರನ್ನು ಒಳಗೊಂಡ ತಾಂತ್ರಿಕ ಸಮಿತಿ ರಚಿಸಲು ತೀರ್ಮಾನಿಸಲಾಯಿತು. ಕಸ ವಿಲೇವಾರಿ ಘಟಕದ ಶಾಶ್ವತ ಜಾಗ ಗುರುತಿಸುವ ಜವಾಬ್ದಾರಿಯನ್ನು ಆಡಳಿತ ತೆಗೆದುಕೊಂಡಿದ್ದು 15 ದಿನಗಳಲ್ಲಿ ಜಾಗ ಗುರುತಿಸಿ ಸಮಸ್ಯೆ ಇತ್ಯರ್ಥಪಡಿಸುವ ಭರವಸೆ ನೀಡಿದರು. ಸಂತೆ ಜಾಗದ ಸ್ಥಳಾಂತರಕ್ಕೆ ತಾತ್ವಿಕ ಒಪ್ಪಿಗೆ ದೊರೆಯಿತು. ಸಾರ್ವಜನಿಕ ಶೌಚಾಲಯವನ್ನು ತೆರೆಯಲು ಅಧಿಕಾರಿಗಳು ಸೂಚನೆ ನೀಡಿದರು. ತೀವ್ರ ವಾದ ವಿವಾದ ಏರ್ಪಟ್ಟು ಕೊನೆಗೆ ನಾಡಕಚೇರಿಗೆ ಮಹಿಳೆಯರು ಆರತಿ ಎತ್ತಿ ಕಸ ಸುರಿಯುವ ನಿರ್ಧಾರಕ್ಕೆ ಅಂತ್ಯ ಹಾಡಿದರು. ಎರಡು ಬೇಡಿಕೆ ಬಗೆಹರಿದಿದ್ದರೂ ಪ್ರತಿಭಟನಾಕಾರರು ತಮ್ಮ ಪ್ರತಿಭಟನೆಯನ್ನು ಹಿಂಪಡೆದಿಲ್ಲ. 15 ದಿನಗಳಲ್ಲಿ ಕಸ ವಿಲೇವಾರಿ ಘಟಕದ ಜಾಗ ಗುರುತಿಸದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಅಂತರಾಳದಿಂದ... EDITORIAL

# ತೆರಿಗೆ ಹಂಚಿಕೆ: ಕರ್ನಾಟಕಕ್ಕೆ ಮತ್ತೆ ಅನ್ಯಾಯ

ಕಳೆದ ವರ್ಷ ಇದೇ ರೀತಿ ಅನ್ಯಾಯವಾದಾಗ ಕರ್ನಾಟಕ ಸರಕಾರ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಬೇಕಾಯಿತು. ಈ ಸಲ ಮತ್ತೆ ಅದರ ಪುನರಾವರ್ತನೆಯಾಗಿದೆ.

ಅನುದಾನ ಹಂಚಿಕೆಯ ಸಂಬಂಧದಲ್ಲಿ ಮೋದಿ ಸರಕಾರ ಯಾವ ರೀತಿ ಅನ್ಯಾಯ ಮಾಡುತ್ತಿದೆ ಎಂಬುದು ಗುಟ್ಟಿನ ಸಂಗತಿಯಾಗಿ ಉಳಿದಿಲ್ಲ.ಕರ್ನಾಟಕ ತೆರಿಗೆ ರೂಪದಲ್ಲಿ 4.5 ಲಕ್ಷ ಕೋಟಿ ರೂ. ಗಳನ್ನು ಕೇಂದ್ರಕ್ಕೆ ನೀಡಿದೆ. ಇದರಲ್ಲಿ ಕರ್ನಾಟಕಕ್ಕೆ ವಾಪಸ್ ಬರುತ್ತಿರುವುದು ಒಂದು ರೂಪಾಯಿಗೆ 14 ಪೈಸೆ ಮಾತ್ರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಂಕಿ ಅಂಶಗಳ ಸಮೇತ ಬಯಲುಗೊಳಿಸಿದ್ದಾರೆ. ಉತ್ತರ ಪ್ರದೇಶಕ್ಕೆ ಶೇ. 18ರಷ್ಟು ಅನುದಾನ ನೀಡಿದರೆ, ಕರ್ನಾಟಕಕ್ಕೆ ಬಂದಿರುವುದು ಶೇ. 35ರಷ್ಟು ಮಾತ್ರ.

ಬೆಂಗಳೂರಿನ ವಾಹನ ದಟ್ಟಣೆಯನ್ನು ನಿಯಂತ್ರಿಸಲು ಶೇ. 50:50 ಅನುದಾನದ ಅಡಿಯಲ್ಲಿ ಮೆಟ್ರೋ ಯೋಜನೆಯನ್ನು ರೂಪಿಸಲಾಯಿತು. ಇದಕ್ಕೆ ಕರ್ನಾಟಕ ಶೇ. 87ರಷ್ಟು ಹಣ ವಿನಿಯೋಗ ಮಾಡಿದೆ. ಕೇಂದ್ರ ಸರಕಾರ ಕಾಟಾಚಾರಕ್ಕೆ ಎಂಬಂತೆ ಅತ್ಯಂತ ಕಡಿಮೆ ಹಣವನ್ನು ನೀಡಿದೆ. ಮುಂಬೈ ದಿಲ್ಲಿಯ ನಂತರ ಅತ್ಯಂತ ಹೆಚ್ಚು ತೆರಿಗೆ ಕೊಡುವ ನಗರವಾದ ಬೆಂಗಳೂರಿಗೆ ಮೋದಿ ಸರಕಾರದಿಂದ ನ್ಯಾಯ ಸಮ್ಮತವಾದ ನೆರವು ಸಿಗುತ್ತಿಲ್ಲ.ನಮ್ಮ ದೇಶದಲ್ಲಿ ಇರುವುದು ಒಕ್ಕೂಟ ವ್ಯವಸ್ಥೆ ಕೇಂದ್ರದಲ್ಲಿ ಯಾವುದೇ ಪಕ್ಷದ ಸರಕಾರವಿರಲಿ, ಬೇರೆ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳ ಬಗ್ಗೆ ಪಕ್ಷಪಾತ ಮಾಡಬಾರದು. ಆದರೆ ಈಗಿರುವ ಕೇಂದ್ರದ ಸರಕಾರ ಕಳೆದ ಹನ್ನೊಂದು ವರ್ಷಗಳಿಂದ ಕರ್ನಾಟಕ ಸೇರಿದಂತೆ ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳ ಬಗ್ಗೆ ತಾರತಮ್ಯವನ್ನು ಮಾಡುತ್ತಲೇ ಬಂದಿದೆ. ಇಷ್ಟು ಮಾತ್ರವಲ್ಲ, ಈಗಿನ ಕೇಂದ್ರ ಸರಕಾರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 15ನೇ ಹಣಕಾಸು ಆಯೋಗದಿಂದ ಕರ್ನಾಟಕಕ್ಕೆ ನಿಗದಿಪಡಿಸಿದ್ದ ಅನುದಾನವನ್ನು ಕೂಡ ರದ್ದುಗೊಳಿಸಿದ್ದಾರೆ.

ಇಂಥವರನ್ನು ನಾವು ಚುನಾಯಿಸಿ ರಾಜ್ಯಸಭೆಗೆ ಕಳಿಸಿದ್ದೇವೆ. ಅಲ್ಲಿ ಕರ್ನಾಟಕದ ಹಿತರಕ್ಷಣೆ ಮಾಡಬೇಕಾದವರು ಅದಕ್ಕೆ ದ್ರೋಹ ಎಸಗುತ್ತಲೇ ಬಂದಿದ್ದಾರೆ. ಒಂದು ರಾಷ್ಟ್ರ, ಒಂದೇ ಧರ್ಮ, ಒಂದೇ ಭಾಷೆ'ಯ ಹೆಸರಿನಲ್ಲಿ ರಾಜ್ಯಗಳ ಸ್ವಾಯತ್ತ ಅಧಿಕಾರಕ್ಕೆ ಧಕ್ಕೆ ತರಬಾರದು.

> **ತೆರಿಗೆ ಹಂಚಿಕೆಗೆ ಸಂಬಂಧಿಸಿದಂತೆ ಕರ್ನಾಟಕಕ್ಕೆ ಮತ್ತೆ ಅನ್ಯಾಯವಾಗಿದೆ. ತೆರಿಗೆ ಪಾಲು, ನೆರೆ ಪರಿಹಾರ, ಅನುದಾನ ಹಂಚಿಕೆಯಲ್ಲಿ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ (ಎನ್‌ಡಿಎ) ಸರಕಾರ ಸತತವಾಗಿ ಅನ್ಯಾಯ ಮಾಡುತ್ತಲೇ ಬಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಅನುದಾನ ನೀಡದಿರುವ ಬಗೆಗೂ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.**

15ನೇ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ ಕೆರೆಗಳ ಅಭಿವೃದ್ಧಿಗೆ 3,000 ಕೋಟಿ ರೂ. ರಸ್ತೆಗಳ ಅಭಿವೃದ್ಧಿಗೆ 3,000 ಕೋಟಿ ರೂ. ಭದ್ರಾ ಮೇಲ್ದಂಡೆ ಯೋಜನೆಗೆ 5,000 ಕೋಟಿ ರೂ. ಅನುದಾನ ರಾಜ್ಯಕ್ಕೆ ಬಂದಿಲ್ಲ. ಇದಲ್ಲದೆ ಹಣಕಾಸು ಆಯೋಗ ನಿಗದಿಪಡಿಸಿದ್ದ 5,490 ಕೋಟಿ ರೂ. ಅನುದಾನವನ್ನು ಕೂಡ ರದ್ದುಪಡಿಸಲಾಗಿದೆ.

ಈ ಸಂಬಂಧದಲ್ಲಿ ಹಲವಾರು ಬಾರಿ ಮನವಿಯನ್ನು ಸಲ್ಲಿಸಲಾಗಿದ್ದರೂ ಪ್ರಯೋಜನವಾಗಿಲ್ಲ ಎಂದು ರಾಜ್ಯ ಸರಕಾರದ ಆಕ್ಷೇಪವಾಗಿದೆ.

ಕರ್ನಾಟಕ ಮಾತ್ರವಲ್ಲ ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ತಮಿಳುನಾಡು, ತೆಲಂಗಾಣ, ಕೇರಳ, ಪ.ಬಂಗಾಳ ಮೊದಲಾದ ರಾಜ್ಯಗಳಿಗೂ ತೆರಿಗೆ ಹಂಚಿಕೆಗೆ ಸಂಬಂಧಿಸಿದಂತೆ ನ್ಯಾಯವಾದ ಪಾಲು ನೀಡದೆ ಸತಾಯಿಸಲಾಗುತ್ತಿದೆ. ಕೇಂದ್ರದ ಏಜೆಂಟರಂತಿರುವ ರಾಜ್ಯಪಾಲರ ಮೂಲಕ ಕಿರುಕುಳ ನೀಡಲಾಗುತ್ತಿದೆ. ಇಂಥ ಮಲತಾಯಿ ಧೋರಣೆ ಒಕ್ಕೂಟ ವ್ಯವಸ್ಥೆಗೆ ಮಾರಕವಾದುದು. ಅದರಲ್ಲೂ ಅತ್ಯಂತ ಹೆಚ್ಚಿನ ತೆರಿಗೆ ಪಾಲನ್ನು ಕೇಂದ್ರಕ್ಕೆ ನೀಡುವ ದಕ್ಷಿಣದ ರಾಜ್ಯಗಳ ಬಗ್ಗೆ ಕೇಂದ್ರ ಸರಕಾರದ ನೀತಿ ಬದಲಾಗಬೇಕಾಗಿದೆ.ಇಲ್ಲವಾದರೆ ಒಕ್ಕೂಟ ವ್ಯವಸ್ಥೆ ಕ್ರಮೇಣ ದುರ್ಬಲವಾಗುತ್ತ ಹೋಗುತ್ತದೆ. ಪ್ರತ್ಯೇಕತೆಯ ಕೂಗು ಕೇಳಬೇಕಾಗುತ್ತದೆ. ಹಾಗಾಗದಂತೆ ನೋಡಿಕೊಳ್ಳುವುದು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರದ ಜವಾಬ್ದಾರಿಯಾಗಿದೆ. ಕರ್ನಾಟಕಕ್ಕೆ ಇಂಥ ಅನ್ಯಾಯವಾಗಿರುವ ಸಂದರ್ಭದಲ್ಲಿ ಸಂಸತ್ತಿನಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಸಂಸದರು ಪಕ್ಷಭೇದ ಮರೆತು ಒಂದಾಗಿ ಕೇಂದ್ರ ಸರಕಾರದ ಮೇಲೆ ಒತ್ತಡ ತರಬೇಕಾಗಿದೆ. ಕೇರಳ ಮತ್ತು ತಮಿಳುನಾಡಿನ ಸಂಸದರು ತಮ್ಮ ರಾಜ್ಯಕ್ಕೆ ಅನ್ಯಾಯವಾದಾಗ ಪಕ್ಷಭೇದ ಬದಿಗಿಟ್ಟು ಒಂದುಗೂಡಿ ಪ್ರತಿಭಟನೆ ಮಾಡುತ್ತಾರೆ. ಆದರೆ ಕರ್ನಾಟಕದ ಬಿಜೆಪಿ ಸಂಸದರು ಹಾಗೂ ಕೇಂದ್ರ ಸಚಿವ ಸಂಪುಟದಲ್ಲಿ ಇರುವ ರಾಜ್ಯದ ಮಂತ್ರಿಗಳು ಎಲ್ಲಿ ಮೋದಿ ಕೋಪಗೊಳ್ಳುತ್ತಾರೋ ಎಂದು ಹೆದರಿ ಬಾಯಿಗೆ ಬೀಗ ಹಾಕಿಕೊಂಡಿರುತ್ತಾರೆ.ಸಂಸತ್ತಿನ ಉಭಯ ಸದನಗಳಲ್ಲಿ ಕರ್ನಾಟಕದ ಸಮಸ್ಯೆಗಳ ಬಗ್ಗೆ ಮಾತಾಡುವಂಥ ಸಮರ್ಥ ಸಂಸದರೂ ಈಗ ಇಲ್ಲದಂತಾಗಿದೆ. ಜಿಎಸ್‌ಟಿ ದರವನ್ನು ಕಡಿಮೆ ಮಾಡಿರುವುದಾಗಿ ಸಂಭ್ರಮದ ಉತ್ಸವವನ್ನು ನಡೆಸುತ್ತಿರುವ ಕೇಂದ್ರ ಸರಕಾರ ಕಳೆದ ಎಂಟು ವರ್ಷಗಳ ಕಾಲಾವಧಿಯಲ್ಲಿ ಅಂದರೆ ಜಿಎಸ್‌ಟಿ ಜಾರಿಗೆ ಬಂದಾಗಿನಿಂದ ಜನರಿಂದ, ರಾಜ್ಯಗಳಿಂದ ವಸೂಲಿ ಮಾಡಿದ್ದೆಷ್ಟು? ಕಡಿಮೆ ಮಾಡಿರುವುದೆಷ್ಟು? ಎಂಬ ಬಗ್ಗೆ ಅಸಲಿ ವಿವರಣೆಯನ್ನು ನೀಡಲಿ. ಈಗ ಒಮ್ಮಿಂದೊಮ್ಮೆಲೇ ಕಡಿಮೆ ಮಾಡಿರುವುದರಿಂದ ರಾಜ್ಯಗಳಿಗೆ ಅನ್ಯಾಯವಾಗಿದೆ. ವಾಸ್ತವವಾಗಿ ಕರ್ನಾಟಕ ಸರಕಾರ ಕಡಿಮೆ ಅನುದಾನದ ನಡುವೆಯೂ ಗ್ಯಾರಂಟಿ ಯೋಜನೆಗಳ ಖರ್ಚು ಭರಿಸಿ ಆರ್ಥಿಕತೆಯನ್ನು ನಿಭಾಯಿಸುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರ ತನ್ನ ಮಲತಾಯಿ ಧೋರಣೆಯನ್ನು ಕೈ ಬಿಡಬೇಕು.



# ರಾಮಾಯಣ

## ಲಕ್ಷ್ಮಣನು ಸೀತಾದೇವಿಯನ್ನು ಬಿಟ್ಟು ಹೋದದ್ದು

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ಲಕ್ಷ್ಮಣನು ಆಕೆಯನ್ನು ಕುರಿತು ಹೀಗೆ ಸಮಾಧಾನವನ್ನು ಹೇಳಿದನು: ದೇವಿ, ಯಕ್ಷ ರಾಕ್ಷಸ ಗಂಧರ್ವ ಕಿಂಪುರುವಾದಿಗಳಿಂದ ಶ್ರೀರಾಮನು ಅಪಜಯವನ್ನು ಪಡೆಯುವವನಲ್ಲ. ವಾನುಷ್ಯ ರಲ್ಲಾದರೂ ಗಂಧರ್ವರಲ್ಲಾದರೂ ರಾಕ್ಷಸರಲ್ಲಾದರೂ ಪಿಶಾಚರಲ್ಲಾದರೂ ಆತನಿಗೆದುರಾಗಿ ರಣರಂಗದಲ್ಲಿ ನಿಲ್ಲುವವರೊಬ್ಬರೂ ಇಲ್ಲ. ಯುದ್ಧರಂಗದಲ್ಲಿ ದೇವೇಂದ್ರನಿಗೆ ಸಮಾನನಾದ ಶ್ರೀ ರಾಮನು ಯಾರಿಗೂ ಗೆಲ್ಲಲು ಶಕ್ಯನಲ್ಲ. ನೀನು ಕಂಗೆಟ್ಟು ಇಂಥ ಮಾತುಗಳನ್ನಾಡಬೇಡ. ನಾನು ಶ್ರೀರಾಮನಿಲ್ಲದ ಸಮಯದಲ್ಲಿ ಈ ವನದಲ್ಲಿ ನಿನ್ನೊಬ್ಬಳನ್ನೇ ಬಿಟ್ಟು ಹೋಗುವುದಕ್ಕೆ ಸಂಮತಿಸನು, ಸಮಸ್ತ ದೇವತೆಗಳು ಕೂಡಿದರೂ ಸತ್ಯದಲ್ಲಿ ಶ್ರೀ ರಾಮನಿಗೆ ಸರಿಯಾಗಲಾರರು.

ನೀನು ನಿನ್ನ ಮನಸ್ಸಿನ ಭಯವನ್ನು ಬಿಟ್ಟು ಸುಖವಾಗಿರು. ಶ್ರೀರಾಮನು ದೈನ್ಯದಿಂದ ಎಂದಿಗೂ ಕೂಗಿಕೊಳ್ಳತಕ್ಕವನಲ್ಲ. ಆ ಮೃಗವನ್ನು ಕೊಂದು ಶೀಘ್ರದಲ್ಲಿ ಬರುವನು. ಅಂತರಿಕ್ಷಮಾರ್ಗದಲ್ಲಿ ತೋರುವ ಗಂಧರ್ವನಗರದಂತೆ ವಿಚಿತ್ರವಾಗಿ ಮೃಗರೂಪದಿಂದ ಬಂದ ರಾಕ್ಷಸನು ಹಾಗೆ ಸ್ವರಗೈದಿರಬಹುದು. ಹೇಗಾದರೂ ಆ ಸ್ವರವು ಶ್ರೀರಾಮನ ಸ್ವರವಲ್ಲ. ಆತನು ನಿನ್ನನ್ನು ಕಾದುಕೊಂಡಿರ ಹೇಳಿ ನನ್ನನ್ನು ಬಿಟ್ಟು ಹೋದನು. ಆತನ ಮಾತನ್ನು ಮೀರಿ ಈ ಘೋರಾರಣ್ಯದಲ್ಲಿ ನಿನ್ನೊಬ್ಬಳನ್ನೇ ಬಿಟ್ಟು ಹೋಗಲು ಒಪ್ಪೇನು, ದೇವಿ, ನಾವು ಜನಸ್ಥಾನದಲ್ಲಿದ್ದ ಖರದೂಷಣಾದಿ ಹದಿನಾಲ್ಕು ಸಾವಿರ ಮಂದಿ ರಾಕ್ಷಸರನ್ನು ಕೊಂದ ಮೇಲೆ ರಾಕ್ಷಸರು ನಮ್ಮಲ್ಲಿ ವೈರವನ್ನು ಬೆಳೆಸಿ ಆಗಾಗ ವಿಚಿತ್ರವಾಗಿ ಕೂಗುತ್ತಿದ್ದಾರೆ ಎಂದು ನುಡಿದನು.

ಆ ಮಾತನ್ನು ಕೇಳಿ ಸೀತಾದೇವಿಯು ಅತ್ಯಂತ ಕೋಪದಿಂದ ಕಣ್ಣುಗಳನ್ನು ಕೆಂಪುಮಾಡಿ ಕೊಂಡು ಸತ್ಯಸಂಧನಾದ ಲಕ್ಷ್ಮಣನನ್ನು ಕುರಿತು ಹಂಗಿಸಿ ಮಾತನಾಡಿದಳು: ಲಕ್ಷ್ಮಣ, ನೀನು ದುರುಳ, ನಿರ್ದಯ, ಕ್ರೂರಕರ್ಮಿ, ಕುಲಗೇಡಿ. ನಿನಗೆ ಶ್ರೀರಾಮನಲ್ಲಿ ಸ್ವಲ್ಪವೂ ಪ್ರೀತಿಯಿಲ್ಲವೆಂದು ನನಗೆ ತೋರುತ್ತದೆ. ಅಲ್ಲದ ಪಕ್ಷದಲ್ಲಿ ಆತನ ದೈನ್ಯಕ್ತಿಗಳನ್ನು ಕೇಳಿ ಆತನನ್ನು ಹುಡುಕಿಕೊಂಡು ಹೋಗೆಂದು ನಾನು ಹೇಳಿದರೂ ಪ್ರತಿಕೂಲವಾದ ವಚನಗಳನ್ನು ನುಡಿಯುವೆಯಾ ? ಲಜ್ಜೆಗೆಟ್ಟವನಾಗಿ ಮನಸ್ಸು ಬಂದಂತೆ ನಡೆಯುವ ಶತ್ರುವಾದ ನಿನಗೆ ಇಂಥ ಬುದ್ಧಿ ಹುಟ್ಟುವುದು ಆಶ್ಚರ್ಯವಲ್ಲ. ನೀನು ನನಗೋಸ್ಕರವಾಗಿ ಅಯೋಧ್ಯಾಪಟ್ಟಣದಿಂದ ಕಪಟಿ ಸ್ನೇಹವನ್ನು ಮಾಡಿಕೊಂಡು ಬಂದಿದ್ದೀಯೆ.

ಅಲ್ಲದಿದ್ದರೆ ಭರತನು ನನ್ನನ್ನು ಅಪಹರಿಸಿ ತರಬೇಕೆಂದು ನಿನ್ನನ್ನು ಕಳುಹಿಸಿದನೋ ಏನೋ ತಿಳಿಯದು. ನೀವು ಎಷ್ಟು ಪ್ರಯತ್ನ ಪಟ್ಟರೂ ನಾನು ನಿಮಗೆ ದಕ್ಕುವವಳಲ್ಲ. ಕನ್ನೈದಿಲೆ ಪುಷ್ಪದಂತೆ ತನುಕಾಂತಿಯುಳ್ಳವನಾಗಿ ತಾವರೆ ಎಸಳುಗಳಂತೆ ಕಣ್ಣುಗಳುಳ್ಳ ಶ್ರೀರಾಮನಿಗೆ ಪ್ರಿಯಳಾದ ಸ್ತ್ರೀಯು ಮತ್ತೊಬ್ಬ ಪುರುಷನನ್ನು ಮನಸ್ಸಿನಲ್ಲಾದರೂ ನೆನೆಯುವಳೆ ? ನೀನು ನಿನ್ನ ಕಣ್ಣು ಮುಂದೆ ಶರೀರತ್ಯಾಗ ಮಾಡುವ ನನ್ನನ್ನು ನೋಡುವೆ.

**ಮುಂದುವರಿಯುವುದು...**



ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

# ಹೆಚ್. ಎಸ್. ಪ್ರತಿಮಾ ಹಾಸನ್‌ಗೆ ಕೆಂಪಮ್ಮ ಪ್ರಶಸ್ತಿ ಪ್ರಧಾನ

ಅ:26ರಂದು ಅಕ್ಕಮಹಾದೇವಿ ಸಭಾಂಗಣ ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು ಜಾಗೃತಿ ಟ್ರಸ್ಟ್ ವತಿಯಿಂದ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಡೆಯುತ್ತಿರುವ ನಗೆ ಹಬ್ಬ ಕಾರ್ಯಕ್ರಮದಲ್ಲಿ ಮಹಿಳಾ ಸಾಧಕಿಯಾದ ಹಾಸನ ನಗರದ ಶಿಕ್ಷಕಿ ಸಾಮಾಜಿಕ ಚಿಂತಕಿ. ಸಾಹಿತಿ.ಪತ್ರಕರ್ತರು ಹಾಗೂ

ಸಂಸ್ಥಾಪಕ ಅಧ್ಯಕ್ಷರು ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಅಭಿವೃದ್ಧಿ ಪ್ರತಿಷ್ಠಾನದ' ಬಹುಮುಖ ಪ್ರತಿಭೆ, ಸದಾ ಕ್ರಿಯಾಶೀಲರಾಗಿರುವ ಹಾಗೂ ಜಿಲ್ಲೆ, ರಾಜ್ಯ,ಮಟ್ಟದಲ್ಲಿ ಹಲವಾರು ಸಂಘ ಸಂಸ್ಥೆಯಲ್ಲಿ ಪದಾಧಿಕಾರವನ್ನು ಪಡೆದು ಕಾರ್ಯನಿರ್ವಹಿಸುತ್ತಿರುವ, ನೂರಾರು ಪ್ರಶಸ್ತಿಗಳನ್ನು ಪಡೆದಿರುವ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಪಡೆದು ಗುರುತಿಸಿಕೊಂಡಿರುವ ಮಹಿಳಾ ಸಾಧಕಿಯಾದ, ಮಹಿಳಾ ಹೋರಾಟಗಾರ್ತಿಯಾದ, ಕನ್ನಡ ಪರ ಹೋರಾಟಗಾರ್ತಿಯಾದ,ಸಮಾಜ ಸೇವಕಿಯಾದ, ಸಂಘಟಕಿಯಾದ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಹಿತಿಕವಾಗಿ ಸೇವೆ ಸಲ್ಲಿಸಿರುವ ಹಾಗೂ ಹಲವಾರು




ಪ್ರಕಾರಗಳಲ್ಲಿ 12 ಕ್ಕೂ ಹೆಚ್ಚು ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಹಲವು ಕೃತಿ ಬಿಡುಗಡೆಗೆ ಸಿದ್ಧವಾಗುತ್ತಿದ್ದು ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಿರುವ ಹಾಗೂ ಅಂಕಣಗಾರ್ತಿಯಾಗಿ, ಹಲವಾರು ಪ್ರಕಾರಗಳಲ್ಲಿ ಪತ್ರಿಕೆಗಳಿಗೆ ಬರೆಯುತ್ತಿರುವ ಹೆಚ್. ಎಸ್. ಪ್ರತಿಮಾ ಹಾಸನ್ ರವರನ್ನು ಸಾಹಿತ್ಯ ಕ್ಷೇತ್ರಕ್ಕೆ ಆಯ್ಕೆ ಮಾಡಿ ಪ್ರತಿಷ್ಠಿತವಾದ ಕೆಂಪಮ್ಮ ಪ್ರಶಸ್ತಿ ' ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ಹಾಗೂ ಶ್ರೀ ಎಂ. ಎಸ್. ನರಸಿಂಹಮೂರ್ತಿರವರ ಬಂಟಿ ಹೇಳಿದ ಕತೆಗಳು (ಮಕ್ಕಳ ಇವತ್ತು ಹಾಸ್ಯಮಯ ಕತೆಗಳು)ಕೃತಿ ಬಿಡುಗಡೆ ಹಾಗೂ ಅವರ 76ನೇ ವರ್ಷದ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು ಹಾಗೂ ಕಾರ್ಯಕ್ರಮದಲ್ಲಿ ಅಧ್ಯಕ್ಷರು ನಾಗೇಶ್, ಶ್ರೀ. ವೈ. ವಿ. ಗುಂಡೂರಾವ್, ಶ್ರೀ ಹೆಚ್ ಡುಂಡಿರಾಜ್, ಅಪ್ಪಣ್ಣ ಮೇಟಿಗೌಡ, ಹೆಚ್. ಎಂ. ರಘುಕೋಟೆ. ಇನ್ನೂ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಹತ್ತಿಯಂತೆ ಮೃದು.. ಬೆಳಗಿನ ತಿಂಡಿಗೆ 10 ನಿಮಿಷದಲ್ಲಿ ಲೆಮನ್ ಇಡ್ಲಿ!

ಇಡ್ಲಿ ಇಷ್ಟವೋ ಹೀಗಾದ್ರೆ ಬೆಳಗಿನ ಉಪಾಹಾರಕ್ಕೆ ಹೊಸ ಟ್ವಿಸ್ಟ್ ಈ ಲೆಮನ್ ಇಡ್ಲಿ ಟ್ರೈ ಮಾಡಿ ನೋಡಿ. ಪ್ರತೀ ಬೈಟ್‌ನಲ್ಲಿ ಪರಿಪೂರ್ಣ ರುಚಿ. ಬೆಳಗಿನ ಉಪಾಹಾರವು ದಿನದ ಅತ್ಯಂತ ಪ್ರಮುಖ ಊಟ. ಸಾಮಾನ್ಯವಾಗಿ ಇಡ್ಲಿ (ಜಟ), ದೋಸೆಗಳಂತಹ ಸಾಂಪ್ರದಾಯಿಕ ತಿಂಡಿಗಳು ಬಹಳ ಜನಪ್ರಿಯವಾಗಿವೆ. ಆದರೆ, ಕೆಲವೊಮ್ಮೆ ಹೊಸ ಮತ್ತು ವಿಭಿನ್ನ ರುಚಿಯನ್ನು ಸವಿಯಲು ಬಯಸುತ್ತಾರೆ. ಅಂತಹವರಿಗೆ 'ಲೆಮನ್ ಇಡ್ಲಿ' ಉತ್ತಮ ಆಯ್ಕೆಯಾಗಿದೆ. ಬೆಳಗಿನ ಉಪಹಾರ ಬೇಗನೇ ತಯಾರಾಗಬೇಕು ಮತ್ತು ಉತ್ತಮ ರುಚಿ ಹೊಂದಿರಬೇಕು ಅಂತ ನೀವು ಬಯಸಿದರೆ, ಈ ಸ್ಪೆಷಲ್ ಲೆಮನ್ ಇಡ್ಲಿ ರೆಸಿಪಿಯನ್ನು ಖಂಡಿತಾ ಒಮ್ಮೆ ಟ್ರೈ ಮಾಡಿ. ಈ ಲೆಮನ್ ಇಡ್ಲಿ ಸಾಂಪ್ರದಾಯಿಕ ಇಡ್ಲಿಗೆ ವಿಶಿಷ್ಟ ಸ್ಪರ್ಶ ನೀಡುತ್ತದೆ. ನಿಂಬೆಹಣ್ಣಿನ ಲಘು ಹುಳಿ ಮತ್ತು ಖಾರ-ಹುಳಿ ಮಿಶ್ರಿತ ರುಚಿಯಿಂದ ಕೂಡಿದ ಇದು, ಮೃದುವಾಗಿ, ಆರೋಗ್ಯಕರವಾಗಿ ಅತ್ಯಂತ ರುಚಿಕರವಾಗಿರುವುದು ವಿಶೇಷ. ಬೆಳಗ್ಗೆ ಬೇಗನೆ ತಯಾರಿಸಬಹುದಾದ ಈ ಖಾದ್ಯ ಇಡೀ ಕುಟುಂಬಕ್ಕೆ ಇಷ್ಟವಾಗುತ್ತದೆ. ಮನೆಯಲ್ಲೇ ಸುಲಭವಾಗಿ ಲೆಮನ್ ಇಡ್ಲಿ' ತಯಾರಿಸುವ ವಿಧಾನವನ್ನು ಈ ಲೇಖನದಲ್ಲಿ ತಿಳಿಸಲಾಗಿದೆ. ಆರೋಗ್ಯಕರವೂ, ರುಚಿಕರವೂ ಆದ ಈ ಇಡ್ಲಿ ಎಲ್ಲರಿಗೂ ಇಷ್ಟವಾಗುವ ಬ್ರೇಕ್‌ಫಾಸ್ಟ್.

## ಲೆಮನ್ ಇಡ್ಲಿ ತಯಾರಿಸಲು ಬೇಕಾಗುವ ಸಾಮಗ್ರಿಗಳು

- ಇಡ್ಲಿ ರವೆ - 1 ಕಪ್
- ಮೊಸರು - 1/2 ಕಪ್
- ನೀರನ್ನು - 1/2 ಕಪ್ (ಅಗತ್ಯವಿರುವಷ್ಟು)
- ನಿಂಬೆ ರಸ - 2 ಚಮಚ
- ಹಸಿ ಮೆಣಸಿನಕಾಯಿ - 1-2
- ಶುಂಠಿ - 1 ಸಣ್ಣ ತುಂಡು
- ಕೊತ್ತಂಬರಿ ಸೊಪ್ಪು - 2 ಚಮಚ
- ಅಡುಗೆ ಸೋಡಾ - 1/2 ಚಮಚ
- ಉಪ್ಪು - ರುಚಿಗೆ ತಕ್ಕಷ್ಟು
- ಇಡ್ಲಿಗೆ ಹಚ್ಚಲು ಎಣ್ಣೆ - 1 ಚಮಚ

**ಲೆಮನ್ ಇಡ್ಲಿ ತಯಾರಿಸುವ ಸರಳ ವಿಧಾನ:** ಮನೆಯಲ್ಲೇ ರುಚಿಕರವಾದ, ಮೃದುವಾದ ನಿಂಬೆ ಇಡ್ಲಿ ತಯಾರಿಸುವ ತುಂಬಾ ಸುಲಭ. ಮೊದಲಿಗೆ, ಇಡ್ಲಿ ರವೆಯನ್ನು ಒಂದು ಪಾತ್ರೆಯಲ್ಲಿ ತೆಗೆದುಕೊಂಡು, ಸಾಕಷ್ಟು ನೀರು ಸೇರಿಸಿ 10-15 ನಿಮಿಷಗಳ ಕಾಲ ನೆನೆಯಲು ಬಿಡಬೇಕು. ರವೆ ಸರಿಯಾಗಿ ನೆನೆದರೆ ಇಡ್ಲಿ ಮೃದುವಾಗಿ, ರುಚಿಯಾಗಿ ಬರುತ್ತದೆ. ನಂತರ, ದೊಡ್ಡ ಬೌಲ್ ಒಂದಕ್ಕೆ ಮೊಸರು, ನಿಂಬೆ ರಸ, ಸಣ್ಣದಾಗಿ ಹೆಚ್ಚಿದ ಹಸಿಮೆಣಸಿನಕಾಯಿ, ತುರಿದ ಶುಂಠಿ ಮತ್ತು ತಾಜಾ ಕೊತ್ತಂಬರಿ ಸೊಪ್ಪು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. ಇದಕ್ಕೆ ರುಚಿಗೆ ತಕ್ಕಷ್ಟು ಉಪ್ಪನ್ನೂ ಸೇರಿಸಿ ಸಮವಾಗಿ ಕಲೆಸಬೇಕು. ಈಗ ನೆನೆಸಿಟ್ಟ ರವೆಯನ್ನು ಈ ಮಿಶ್ರಣಕ್ಕೆ ಸೇರಿಸಿ, ಎಲ್ಲವನ್ನೂ ಮತ್ತೊಮ್ಮೆ ಚೆನ್ನಾಗಿ ಮಿಕ್ಸ್ ಮಾಡಬೇಕು. ಇಡ್ಲಿ ಹಿಟ್ಟು ತುಂಬಾ ತೆಳುವಾಗಬಾರದು, ಸ್ವಲ್ಪ ಗಟ್ಟಿಯಾಗಿಯೇ ಇರಬೇಕು. ಬೇಕಿದ್ದರೆ, ಅಲ್ಪ ಪ್ರಮಾಣದಲ್ಲಿ ನೀರು ಸೇರಿಸಿ ಸರಿಯಾದ ಹದಕ್ಕೆ ಹೊಂದಿಸಿಕೊಳ್ಳಬಹುದು. ಅಂತಿಮವಾಗಿ, ಹಿಟ್ಟಿಗೆ ಅಡುಗೆ ಸೋಡಾ ಸೇರಿಸಿ, ನಿಧಾನವಾಗಿ ಕಲೆಸಿ.

ಸೋಡಾ ಸೇರಿಸಿದ ನಂತರ ಹೆಚ್ಚು ಹೊತ್ತು ಕಾಯದೆ ತಕ್ಷಣವೇ ಇಡ್ಲಿ ಮಾಡಲು ಸಿದ್ಧರಾಗಬೇಕು. ಇಡ್ಲಿ ಸ್ಟ್ಯಾಂಡ್‌ಗಳಿಗೆ ಎಣ್ಣೆ ಸವರಿ, ಹಿಟ್ಟನ್ನು ತುಂಬಿಸಿ. ಇಡ್ಲಿ ಪಾತ್ರೆಯಲ್ಲಿ (ಸ್ಟೀಮರ್‌ನಲ್ಲಿ) ಈ ಸ್ಟ್ಯಾಂಡ್‌ಗಳನ್ನು ಇರಿಸಿ, ಮಧ್ಯಮ ಉರಿಯಲ್ಲಿ 10-12 ನಿಮಿಷಗಳ ಕಾಲ ಹಬೆಯಲ್ಲಿ ಬೇಯಿಸಿ. ಇಡ್ಲಿ ಬೆಂದ ನಂತರ ತಕ್ಷಣ ಸ್ಟೀಮರ್ ತೆರೆಯಬೇಡಿ. ಸ್ವಲ್ಪ ಸಮಯ ತಣ್ಣಗಾಗಲು ಬಿಟ್ಟರೆ, ಇಡ್ಲಿಗಳು ಮುರಿಯದೆ ಸುಲಭವಾಗಿ ಹೊರಬರುತ್ತವೆ. ಇಷ್ಟು ಮಾಡಿದರೆ, ಬಿಸಿಬಿಸಿಯಾದ ಲೆಮನ್ ಇಡ್ಲಿ ಸವಿಯಲು ಸಿದ್ಧ. ಇದನ್ನು ತೆಂಗಿನಕಾಯಿ ಚಟ್ನಿ ಅಥವಾ ಟೊಮೆಟೊ ಚಟ್ನಿಯೊಂದಿಗೆ ಸವಿದರೆ, ಇದರ ರುಚಿ ಇನ್ನಷ್ಟು ಹೆಚ್ಚುತ್ತದೆ.





# ಒಣಗಿರುವ ನಿಂಬೆಯನ್ನು ಯಾವ ರೀತಿ ಎಲ್ಲಾ ಬಳಸಬಹುದು ಗೊತ್ತಾ?

ನಿಂಬೆಹಣ್ಣು ಒಣಗಿದ್ರೆ, ಅದನ್ನು ಬಿಸಾಡುವವರೇ ಹೆಚ್ಚು. ಆದರೆ ನಿಮ್ಗೆ ಗೊತ್ತಾ ಒಣಗಿ ಹೋಗಿರುವ ನಿಂಬೆಯನ್ನೂ ಸಹ ನಾನಾ ರೀತಿಯಲ್ಲಿ ಬಳಸಬಹುದು. ಅದು ಹೇಗೆ ತಿಳಿಯೋಣ. ಒಣಗಿದ ನಿಂಬೆಹಣ್ಣುಗಳು ನಿಷ್ಪ್ರಯೋಜಕವಲ್ಲ. ಮುಂದಿನ ಬಾರಿ ನೀವು ನಿಮ್ಮ ಫ್ರಿಡ್ಜ್‌ನಲ್ಲಿ ಒಣಗಿದ ನಿಂಬೆಯನ್ನು ಕಂಡುಕೊಂಡಾಗ, ಅದನ್ನು ಎಸೆಯುವ ಬದಲು, ಈ ಸ್ಮಾರ್ಟ್ ವಿಧಾನಗಳಲ್ಲಿ ಬಳಸಿ. ಅಂತಹ ಪರಿಸ್ಥಿತಿಯಲ್ಲಿ, ನಾವು ಅವುಗಳನ್ನು ನಿಷ್ಪ್ರಯೋಜಕವೆಂದು ಭಾವಿಸಿ ಎಸೆಯುತ್ತೇವೆ. ಆದರೆ ಒಣಗಿದ ನಿಂಬೆಹಣ್ಣುಗಳು ಸಹ ತುಂಬಾ ಉಪಯುಕ್ತವಾಗಿವೆ ಎಂದು ನಿಮಗೆ ತಿಳಿದಿದೆಯೇ?. ಅವುಗಳಲ್ಲಿರುವ ನೈಸರ್ಗಿಕ ಆಮ್ಲಗಳು, ಸುಗಂಧ ಮತ್ತು ಎಣ್ಣೆಗಳು ಅವುಗಳನ್ನು ಮನೆಯ ಉದ್ದೇಶಗಳಿಗೆ ಉಪಯುಕ್ತವಾಗಿಸುತ್ತವೆ. ಒಣಗಿದ ನಿಂಬೆಹಣ್ಣುಗಳನ್ನು ಹೇಗೆ ಬಳಸಬಹುದು ಎನ್ನುವುದನ್ನು ನಾವಿಲ್ಲಿ ತಿಳಿಯೋಣ.

**ಪಾತ್ರೆಗಳು ಮತ್ತು ಸಿಂಕ್‌ಗಳನ್ನು ಸ್ವಚ್ಛಗೊಳಿಸಲು ಅವುಗಳನ್ನು ಬಳಸಿ:** ಒಣಗಿದ ನಿಂಬೆ ನೈಸರ್ಗಿಕ ಕ್ಲೀನರ್ ಆಗಿ ಕಾರ್ಯನಿರ್ವಹಿಸುತ್ತದೆ. ಸ್ವಲ್ಪ ಉಪ್ಪಿನೊಂದಿಗೆ ಉಕ್ಕಿನ ಅಥವಾ ತಾಮ್ರದ ಪಾತ್ರೆಗಳ ಮೇಲೆ ಉಜ್ಜಿಕೊಳ್ಳಿ. ಇದು ಮೊಂಡುತನದ ಕಲೆಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ, ಪಾತ್ರೆಗಳು ಹೊಳೆಯುವಂತೆ ಮಾಡುತ್ತದೆ. ಇದು ಸಿಂಕ್‌ಗಳನ್ನು ಸ್ವಚ್ಛಗೊಳಿಸಲು ಸಹ ತುಂಬಾ ಉಪಯುಕ್ತವಾಗಿದೆ.

**ಕೂದಲಿನ ಆರೈಕೆಗಾಗಿ ನಿಂಬೆ ಪುಡಿ:** ಒಣಗಿದ ನಿಂಬೆಹಣ್ಣುಗಳನ್ನು ಪುಡಿಮಾಡಿ. ಈ ಪುಡಿಯನ್ನು ಮೊಸರು ಅಥವಾ ಅಲೋವೆರಾ ಜೆಲ್ ನೊಂದಿಗೆ ಬೆರೆಸಿ ಹೇರ್ ಪ್ಯಾಕ್ ತಯಾರಿಸಿ. ಇದು ನೆತ್ತಿಯನ್ನು ನಿರ್ವಿಷಗೊಳಿಸುತ್ತದೆ, ತಲೆಹೊಟ್ಟು ಕಡಿಮೆ ಮಾಡುತ್ತದೆ, ಕೂದಲಿಗೆ ಹೊಸ ಜೀವ ಮತ್ತು ಹೊಳಪನ್ನು ನೀಡುತ್ತದೆ.

> **ನೈಸರ್ಗಿಕ ಏರ್ ಫ್ರೆಶ್ನರ್**
>
> **ಗ್ಯಾಸ್ ಸ್ಟೌವ್ ಅಥವಾ ಮೈಕ್ರೋವೇವ್‌ನಲ್ಲಿ ಸ್ವಲ್ಪ ಸಮಯದವರೆಗೆ ಒಣಗಿದ ನಿಂಬೆಯನ್ನು ಬಿಸಿ ಮಾಡಿ. ಇದು ಅಡುಗೆಮನೆಯಿಂದ ವಾಸನೆಯನ್ನು ತೆಗೆದುಹಾಕುವ ರಿಫ್ರೆಶ್ ನಿಂಬೆಯಂತಹ ಪರಿಮಳವನ್ನು ಬಿಡುಗಡೆ ಮಾಡುತ್ತದೆ. ಇನ್ನು ಒಣಗಿದ ನಿಂಬೆ ಚೂರುಗಳನ್ನು ದಾಲ್ಚಿನ್ನಿ, ಕರ್ಪೂರ ಮತ್ತು ಲವಂಗಗಳೊಂದಿಗೆ ಜಾಲರಿಯ ಚೀಲದಲ್ಲಿ ಇರಿಸಿ ಮತ್ತು ಅವುಗಳನ್ನು ಸ್ನಾನಗೃಹ, ಕಾರು ಅಥವಾ ಡ್ರಾಯರ್‌ನಲ್ಲಿ ಇರಿಸಿ. ಇದು ನಿಧಾನವಾಗಿ ಸೌಮ್ಯವಾದ ಪರಿಮಳವನ್ನು ಹೊರಹೊಮ್ಮುತ್ತದೆ.**

**ಕ್ಲೋಸೆಟ್‌ಗಳು ಮತ್ತು ಶೂಗಳಿಂದ ವಾಸನೆಯನ್ನು ತೆಗೆದುಹಾಕಲು** ಒಣಗಿದ ನಿಂಬೆಹಣ್ಣುಗಳನ್ನು ಸಣ್ಣ ತುಂಡುಗಳಾಗಿ ಕತ್ತರಿಸಿ ಹತ್ತಿ ಬಟ್ಟೆಯ ಬಂಡಲ್‌ನಲ್ಲಿ ಕಟ್ಟಿ ಕ್ಲೋಸೆಟ್ ಅಥವಾ ಶೂ ಶೇಖರಣಾ ಪ್ರದೇಶದಲ್ಲಿ ಇರಿಸಿ. ಇದು ತೇವಾಂಶ ಮತ್ತು ವಾಸನೆ ಎರಡನ್ನೂ ಹೀರಿಕೊಳ್ಳುತ್ತದೆ.

**ಕೀಟಗಳು, ಇರುವೆಗಳನ್ನು ಹಿಮ್ಮೆಟ್ಟಿಸಲು:** ನಿಂಬೆಯ ವಾಸನೆಯು ಅನೇಕ ಕೀಟಗಳಿಗೆ ಇಷ್ಟವಾಗುವುದಿಲ್ಲ. ಒಣಗಿದ ನಿಂಬೆಹಣ್ಣುಗಳನ್ನು ಬಾಗಿಲುಗಳ ಬಳಿ ಅಥವಾ ಅಡುಗೆಮನೆಯ ಮೂಲೆಗಳಲ್ಲಿ ಇಡುವುದರಿಂದ ಕೀಟಗಳನ್ನು ದೂರವಿಡಲು ಸಹಾಯ ಮಾಡುತ್ತದೆ.

# ಮುಖದ ಟ್ಯಾನ್ ಕಿರಿಕಿರಿ ಉಂಟು ಮಾಡುತ್ತಿದೆಯಾ...?

ನೀವು ನಿಮ್ಮ ಅಗತ್ಯ ಕೆಲಸಗಳಿಗೆ ಮನೆಯಿಂದ ಹೊರಹೋಗಬೇಕಾಗುತ್ತದೆ, ಮನೆಗೆ ಹಿಂತಿರುಗಿದಾಗ ನಿಮ್ಮ ಮುಖದ ಬಣ್ಣ ಬದಲಾಗಿರುತ್ತದೆ. ನಿಮ್ಮ ಮುಖದ ಟ್ಯಾನ್ ತೆಗೆಯಲು ನೈಸರ್ಗಿಕ ಪರಿಹಾರ ಹುಡುಕುತ್ತಿದ್ದರೆ, ಮುಲ್ತಾನಿ ಮಿಟ್ಟಿ ಮತ್ತು ಟೊಮೆಟೊ ಫೇಸ್ ಪ್ಯಾಕ್ ತಯಾರಿಸಿ. ನಿಮ್ಮ ಮುಖದ ಹೊಳಪು ಮರುಪಡೆಯಲು ಇದು ಸಹಾಯ ಮಾಡುತ್ತದೆ. ನೀವು ಸೂರ್ಯನ ಬೆಳಕಿಗೆ ಒಡ್ಡಿಕೊಂಡಾಗ ನಿಮ್ಮ ತ್ವಚೆಯ ಬಣ್ಣ ಕಂದು ಬಣ್ಣಕ್ಕೆ ತಿರುಗುತ್ತದೆ. ಸನ್ ಸ್ಕ್ರೀನ್ ನಿಮಗೆ ಬಿಸಿಲಿನಿಂದ ಚರ್ಮಕ್ಕಾಗುವ ಹಾನಿಯನ್ನು ತಪ್ಪಿಸುತ್ತದಾದರೂ, ನೈಸರ್ಗಿಕ ಪದಾರ್ಥಗಳು ನಿಧಾನವಾಗಿ ಟ್ಯಾನ್ ಅನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ತ್ವಚೆಯ ಬಣ್ಣವನ್ನು ಸಹಜ ಸ್ಥಿತಿಗೆ ತರಲು ಮುಲ್ತಾನಿ ಮಿಟ್ಟಿ ಮತ್ತು ಟೊಮೆಟೊದಿಂದ ಸುಲಭವಾಗಿ ಫೇಸ್ ಪ್ಯಾಕ್ ತಯಾರಿಸಬಹುದು. ಮುಲ್ತಾನಿ ಮಿಟ್ಟಿ ಟೊಮೆಟೊದಲ್ಲಿ ಚರ್ಮವನ್ನು ಸ್ವಚ್ಛಗೊಳಿಸಿ ಹೊಳಪು ನೀಡುವ ಸಾಮರ್ಥ್ಯವಿದೆ. ಬ್ಯೂಟಿಪಾರ್ಲರ್‌ಗೆ ಹೋಗದೆಯೂ ನಿಮ್ಮ ಮುಖಕ್ಕೆ ಹೊಳಪು ನೀಡಲು ಈ ಎರಡೂ ಪದಾರ್ಥಗಳು ಸಹಾಯ ಮಾಡುತ್ತದೆ.



**ಮುಲ್ತಾನಿ ಮಿಟ್ಟಿ, ಟೊಮೆಟೊದಿಂದ ಚರ್ಮಕ್ಕೆ ಏನು ಪ್ರಯೋಜನ?:** ಮುಲ್ತಾನಿ ಮಿಟ್ಟಿ ನೈಸರ್ಗಿಕ ಜೇಡಿಮಣ್ಣು, ಇದು ಸತ್ತ ಚರ್ಮದ ಕೋಶಗಳನ್ನು ಪರಿಣಾಮಕಾರಿಯಾಗಿ ಹೊರಹಾಕುತ್ತದೆ ಮತ್ತು ಸೂರ್ಯನ ಬೆಳಕಿನಿಂದ ಹಾನಿಗೊಳಗಾದ ಚರ್ಮಕ್ಕೆ ಚಿಕಿತ್ಸೆ ನೀಡುತ್ತದೆ. ಮುಲ್ತಾನಿ ಮಿಟ್ಟಿ ಚರ್ಮವನ್ನು ಸಂಪೂರ್ಣವಾಗಿ



ಶುದ್ಧೀಕರಿಸುತ್ತದೆ, ಹೆಚ್ಚುವರಿ ಎಣ್ಣೆ ಕಲ್ಮಶಗಳನ್ನು ಹೀರಿಕೊಳ್ಳುತ್ತದೆ. ಸೂರ್ಯನ ಬೆಳಕಿಗೆ ಒಡ್ಡಿಕೊಂಡ ಚರ್ಮವನ್ನು ನೈಸರ್ಗಿಕ ತಂಪಾಗಿಸುತ್ತದೆ, ಹಿತವಾದ ಸಂವೇದನೆಯನ್ನು ನೀಡುತ್ತದೆ. ಟೊಮೆಟೊದಲ್ಲಿ ಉತ್ಕರ್ಷಣ ನಿರೋಧಕಗಳು ಮತ್ತು ವಿಟಮಿನ್ ಸಿ ಹೇರಳವಾಗಿವೆ.

ಅವು ನೈಸರ್ಗಿಕ ಸಂಕೋಚಕವಾಗಿ ಕಾರ್ಯನಿರ್ವಹಿಸುತ್ತವೆ, ಸೂರ್ಯನಿಂದ ಚರ್ಮಕ್ಕಾದ ಹಾನಿಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ನಿಮ್ಮ ಚರ್ಮದ ಕಾಂತಿಯನ್ನು ಹೆಚ್ಚಿಸುತ್ತದೆ.

**ಮುಲ್ತಾನಿ ಮಿಟ್ಟಿ, ಟೊಮೆಟೊ ಫೇಸ್ ಪ್ಯಾಕ್ ತಯಾರಿಸುವುದು ಹೇಗೆ: ಬೇಕಾಗುವ ಸಾಮಗ್ರಿಗಳು:**

**ಒಂದು ಚಮಚ ಮುಲ್ತಾನಿ ಮಿಟ್ಟಿ ಪುಡಿ**

**ಒಂದು ಚಮಚ ತಾಜಾ ಟೊಮೆಟೊ ತಿರುಳು**

**ತಯಾರಿಸುವ ವಿಧಾನ:** ಮಾಗಿದ ಟೊಮೆಟೊಗಳನ್ನು ಹಿಸುಕಿ ತಿರುಳನ್ನು ತಯಾರಿಸಿ, ಬಳಿಕ ರಸವನ್ನು ತೆಗೆಯಿರಿ. ಈಗ, ಒಂದು ಸ್ವಚ್ಛವಾದ ಬಟ್ಟಲಿನಲ್ಲಿ, ಮುಲ್ತಾನಿ ಮಿಟ್ಟಿ ಪುಡಿ, ತಾಜಾ ಟೊಮೆಟೊ ರಸವನ್ನು ಸೇರಿಸಿ ನಯವಾದ ಪೇಸ್ಟ್ ತಯಾರಿಸಿ. ಅದು ತುಂಬಾ ದಪ್ಪವಾಗಿದ್ದರೆ, ನೀವು ಸ್ವಲ್ಪ ನೀರನ್ನು ಸೇರಿಸಬಹುದು. ಈ ಫೇಸ್ ಪ್ಯಾಕ್ ಹಚ್ಚುವ ಮೊದಲು, ನಿಮ್ಮ ಮುಖ, ಕುತ್ತಿಗೆಯನ್ನು ಹಗುರವಾದ ಕ್ಲೆನ್ಸರ್‌ನಿಂದ ನಿಧಾನವಾಗಿ ಸ್ವಚ್ಛಗೊಳಿಸಿ. ಇದು ಪ್ಯಾಕ್ನ ಪ್ರಯೋಜನಗಳನ್ನು ಉತ್ತಮವಾಗಿ ಹೀರಿಕೊಳ್ಳಲು ಸಹಾಯ ಮಾಡುತ್ತದೆ.

ಈಗ, ನಿಮ್ಮ ಕಂದುಬಣ್ಣಕ್ಕೆ ತಿರುಗಿದ ಭಾಗಕ್ಕೆ ಮುಖ, ಕುತ್ತಿಗೆ, ಕೈಗಳು ಅಥವಾ ಸೂರ್ಯನ ಬೆಳಕಿಗೆ ಒಡ್ಡಿಕೊಂಡ ಯಾವುದೇ ಇತರ ಭಾಗಗಳಿಗೂ ಈ ಪೇಸ್ಟ್ ಹಚ್ಚಿ. ನಿಮ್ಮ ಕಣ್ಣುಗಳು ಮತ್ತು ತುಟಿಗಳ ಸುತ್ತಲಿನ ಸೂಕ್ಷ್ಮ ಚರ್ಮಕ್ಕೆ ಹಚ್ಚಬೇಡಿ.



☛ ವಿಶ್ವಾಸ್.ಡಿ.ಗೌಡ

# ಕನ್ನಡದ ಬೆಳವಣಿಗೆಗೆ ನಾವೇನು ಮಾಡಬಹುದು?

ಕನ್ನಡದ ಬೆಳವಣಿಗೆಗೆ ನಾವೇನು ಮಾಡಬಹುದೆಂದು ನನ್ನನ್ನು ಆಗಿಂದಾಗ ಉತ್ಸಾಹಿ ಯುವಕ ಯುವತಿಯರು ಕೇಳುತ್ತಿರುತ್ತಾರೆ. ಅವರಿಗೆ ತೋರ್ಗಂಬವಾಗಿ ಕೆಲವು ಸಲಹೆಗಳನ್ನು ಇಲ್ಲಿ ಕೊಟ್ಟಿದ್ದೇನೆ. ಇವುಗಳನ್ನು ಅಳವಡಿಸಿಕೊಳ್ಳಿ ಎಂದು ನನ್ನ ವಿನಂತಿ. ಇದೇ ಮಾದರಿಯ ಇತರ ಉಪಾಯಗಳನ್ನು ನಿಮ್ಮ ಬ್ಲಾಗುಗಳಲ್ಲಿ, 6 - ಪತ್ರಿಕೆಗಳಲ್ಲಿ ಇತರರಿಗೂ ತಿಳಿಸಿ-ನಿಷ್ಠೆಯಿಂದ ಆಚರಣೆಗೆ ತನ್ನಿ.

1) ನಿಮ್ಮ ದೂರವಾಣಿಯಿಂದಲೋ, ಮೊಬೈಲ್‌ನಿಂದಲೋ ಅನೇಕ ಸೇವೆಗಳಿಗಾಗಿ ಬ್ಯಾಂಕ್, ವಿಮೆ ಇತ್ಯಾದಿ- ಕರೆಮಾಡುತ್ತಿರುತ್ತೀರಿ. ಆಗ ನಿಮಗೆ ಎದುರಾಗುವುದು ''ಇಂಟರಾಕ್ಟಿವ್ ವಾಯ್ಸ್ ರೆಸ್ಪಾನ್ಸ್' ಸಿಸ್ಟಮ್, ಅಲ್ಲಿ ಬರುವ ಮೊದಲ ಹೇಳಿಕೆ- 'ಇಂಗ್ಲಿಷ್‌ಗಾಗಿ ಒಂದನ್ನು ಒತ್ತಿ, ಕನ್ನಡಕ್ಕಾಗಿ ಎರಡನ್ನು ಒತ್ತಿ ಇತ್ಯಾದಿ. ದಯವಿಟ್ಟು ಕನ್ನಡವನ್ನೇ ಆರಿಸಿಕೊಳ್ಳಿ. ಈ ಆಯ್ಕೆಗಳ ಅಂಕಿ ಅಂಶಗಳ ಬಲದಿಂದ ಆ ಉದ್ಯಮಗಳು ಯಾವ ಭಾಷೆಗೆ ಒತ್ತು ನೀಡಬೇಕೆನ್ನುವ ನಿರ್ಧಾರ ಕೈಗೊಳ್ಳುತ್ತವೆ. ಕನ್ನಡದ ಆಯ್ಕೆಯಿಂದ ಕನ್ನಡ ಬೆಳೆಯುತ್ತದೆ.

ನೀವು ಆಗಿಂದಾಗ ಅಂತರ್ಜಾಲದಲ್ಲಾಗಲೀ, ನೇರವಾಗಿಯಾಗಲೀ ಉದ್ಯಮಗಳು ನಡೆಸುವ ಸರ್ವೆಗಳಲ್ಲಿ ಭಾಗವಹಿಸುತ್ತಿರುತ್ತೀರಿ. ಮುಂದೆ ಆ ರೀತಿ ಭಾಗವಹಿಸುವಾಗ ನಿಮಗೆ ಗೊತ್ತಿರುವ ಭಾಷೆಯ ಬಗ್ಗೆ ಇರುವ ಪ್ರಶ್ನೆಗೆ 'ಕನ್ನಡ' ಎಂದು ಮಾತ್ರ ದಾಖಲಿಸಿ, ನೀವು ಓದುವ ಪತ್ರಿಕೆಗಳ ಬಗ್ಗೆ ಇರುವ ಪ್ರಶ್ನೆಗೆ ಕನ್ನಡದ ದಿನಪತ್ರಿಕೆಗಳ, ನಿಯತ ಕಾಲಿಕಗಳ ಹೆಸರನ್ನು ಮರೆಯದೆ ನಮೂದಿಸಿ. ಇದರಿಂದ ಆ ಸರ್ವೆಯ ಫಲವಾಗಿ ನಡೆಯುವ ಎಲ್ಲಾ ಕಾವ್ಯಗಳಲ್ಲೂ ಕನ್ನಡದ ಬಳಕೆಗೆ ಇಂಬುಕೊಟ್ಟಂತಾಗುತ್ತದೆ.

3) ಇಂದು ಅನೇಕ ವಿಮೆ, ಬ್ಯಾಂಕ್, ಹಣಕಾಸಿನ ವ್ಯವಹಾರದ ಸಂಸ್ಥೆ ಮುಂತಾದ ಉದ್ಯಮಗಳು ತಮ್ಮ ಮಾರಾಟದ ಜಾಲಕ್ಕೆ ಅನೇಕ ಯುವಕರನ್ನು ನೇಮಿಸಿಕೊಂಡಿದೆ. ಇವರಲ್ಲಿ ನಿಜವಾಗಿ ಹೆಚ್ಚು ಮಂದಿ ಹೊರರಾಜ್ಯಗಳಿಂದ ಅಕ್ಕಪಕ್ಕದ ರಾಜ್ಯಗಳಿಂದ ಇಲ್ಲಿಗೆ ಬಂದವರು. ನಮ್ಮ ಜೊತೆ ವ್ಯವಹರಿಸಲು ಕನ್ನಡ ಬಲ್ಲವರನ್ನೇ ಕಳುಹಿಸಬೇಕೆಂದು ನಾವು ಒತ್ತಾಯಿಸಿ ಕೇಳಬೇಕು. ಇದರಿಂದ ಈ ಉದ್ಯಮಗಳು ತಮ್ಮ ವ್ಯವಹಾರದಲ್ಲಿ ಕನ್ನಡವನ್ನು ಬಳಸಲೇಬೇಕಾದ ಪರಿಸ್ಥಿತಿ ಒದಗಿ ಬರುತ್ತದೆ. ಕನ್ನಡಿಗರಿಗೆ ಉದ್ಯೋಗಾವಕಾಶಗಳು ಒದಗುತ್ತವೆ.

4) ನಿಮ್ಮ ಮನೆಗಳಿಗೆ ಕಡೆಯಪಕ್ಷ ಒಂದು ಕನ್ನಡ ವಾರ್ತಾಪತ್ರಿಕೆಯನ್ನೂ ಒಂದು ನಿಯತಕಾಲಿಕವನ್ನೂ ತರಿಸಿ-ಅವನ್ನು ಮನೆಯವರೆಲ್ಲಾ ಓದಿ.



5)ನೀವು ಎಲ್ಲೇ ಇದ್ದರೂ ನಿಮ್ಮ ಮಕ್ಕಳೊಂದಿಗೆ ಕನ್ನಡದಲ್ಲಿ ಮಾತನಾಡಿ, ಇತರ ಕನ್ನಡಿಗರೊಡನೆ ಕನ್ನಡದಲ್ಲೇ ಮಾತನಾಡಲು ಪ್ರೋತ್ಸಾಹಿಸಿ, ಅವರಲ್ಲಿ ಕನ್ನಡ ಪ್ರೇಮದ ಜೊತೆ ಮುಂದಾಳತ್ವದ ಗುಣಗಳು ಹೆಚ್ಚುವಂತೆ ಮಾಡಿ. ಕನ್ನಡ ತಾಯಿಯರು ಈ ಕೆಲಸವನ್ನು ಪ್ರೀತಿಯಿಂದ ಮಾಡಿರಿ.

6) ನಿಮ್ಮ ಪ್ರದೇಶದಲ್ಲಿ ನಡೆಯುವ ಕನ್ನೆಡದ ಕಾರಕ್ರಮಗಳಲ್ಲಿ ತಪ್ಪದೆ ಭಾಗವಹಿಸಿ.

7) ಕನ್ನಡ-ಕನ್ನಡನಾಡು-ಕನ್ನಡಿಗ ಸಾಧಕರು ಈ ಬಗ್ಗೆ ಬೇರೆ ಭಾಷೆಯವರಲ್ಲಿ ಅಭಿಮಾನದಿಂದ ಮಾತನಾಡಿ.

ಆದಷ್ಟೂ ಇತರ ಕನ್ನಡಿಗರಿಗೆ ಸಹಾಯಮಾಡಿ, ಅವರ ಕಾಲನ್ನು ಎಳೆಯಬೇಡಿ. ನೀವು ಕೆಲಸಮಾಡುವ ಸ್ಥಳದಲ್ಲಿ ಇತರರು ಕನ್ನಡ ಮಾತನಾಡುವವರ ಮಧ್ಯೆ ವಿರಸವನ್ನುಂಟುಮಾಡುವ ರೀತಿಯನ್ನು ಅನುಸರಿಸುವುದರ ಬಗ್ಗೆ ಬಹಳ ಎಚ್ಚರದಿಂದಿರಿ-ನಿಮ್ಮ ಒಗ್ಗಟ್ಟನ್ನು ಕಾಪಾಡಿಕೊಳ್ಳಿ.

9)ಬೇರೆ ರಾಜ್ಯಗಳಿಂದ ಬಂದು ನಿಮ್ಮೊಡನೆ ಕೆಲಸಮಾಡುವ ಮಂದಿಗೆ ಕನ್ನಡ ಕಲಿತು ಅದರಲ್ಲೇ ಮಾತನಾಡಲು ಪ್ರೋತ್ಸಾಹಿಸಿ.

10) ಕನ್ನಡವೆಂದರೆ ಬರಿಯ ಸಾಹಿತ್ಯವಲ್ಲ, ಸುಗಮ ಸಂಗೀತವಲ್ಲ, ಚಲನಚಿತ್ರವಲ್ಲ; ಈ ರೀತಿಯ ಇನ್ನು ಎಷ್ಟೋ ವಿಚಾರಗಳನ್ನು ಒಳಗೊಂಡ ಒಂದು ಸಂಸ್ಕೃತಿ ಎಂಬುದನ್ನು ಯಾವಾಗಲೂ ನೆನಪಿಡಿ. ಕನ್ನಡಿಗರಾಗಿರುವುದಕ್ಕೆ ಹೆಮ್ಮೆಪಡಿ.

### ನಿಯಮದ ಪ್ರಕಾರ ಈ ಶೌಚಾಲಯಗಳು ಉಚಿತವಾಗಿರಬೇಕು, ಆದರೆ ರೂ.2, ರೂ.5 ದರ ಇದ್ದರೂ ರೂ.10 ವಸೂಲಿ

# ಸ್ಮಾರ್ಟ್ ಸಿಟಿಯಲ್ಲಿ ಇನ್ನೂ ಶೌಚಾಲಯ ಸಮಸ್ಯೆ: ಸ್ವಚ್ಛತೆ ಮರೀಚಿಕೆ

• **ಉದಯವಾಹಿನಿ ಹುಬ್ಬಳ್ಳಿ**

ಸ್ಮಾರ್ಟ್ ಸಿಟಿ, ಚೋಟಾ ಮುಂಬೈ, ವಾಣಿಜ್ಯ ನಗರಿ ಎಂದು ಕರೆಸಿಕೊಳ್ಳುವ ಹುಬ್ಬಳ್ಳಿ-ಧಾರವಾಡ ಮಹಾನಗರ ವೇಗವಾಗಿ ಬೆಳೆಯುತ್ತಿರುವ ನಗರ ಎಂದೇ ಗುರುತಿಸಿಕೊಂಡಿದೆ. ಆದರೆ ಇಲ್ಲಿ ಇನ್ನೂ ಶೌಚಾಲಯ, ಸ್ವಚ್ಛತೆ ಸೇರಿದಂತೆ ಅನೇಕ ಸಮಸ್ಯೆ ಬೃಹದಾಕಾರವಾಗಿ ಕಾಡುತ್ತಿರುವುದು ವ್ಯವಸ್ಥೆಯ ವ್ಯಂಗ್ಯವಾಗಿದೆ. ಮಹಾನಗರದಲ್ಲಿ 40ಕ್ಕೂ ಹೆಚ್ಚು ಸಾರ್ವಜನಿಕ ಶೌಚಾಲಯಗಳು ಇವೆ. ಅದರಲ್ಲಿ ಮಾರುಕಟ್ಟೆ, ಬಡಾವಣೆ, ಕೇಂದ್ರ ಬಸ್ ನಿಲ್ದಾಣ, ಸಿಬಿಟಿ, ಹೊಸೂರು ಬಸ್ ನಿಲ್ದಾಣ ಸೇರಿದಂತೆ ಪ್ರಮುಖ ನಿಲ್ದಾಣಗಳಲ್ಲಿ ಇರುವ ಸಾರ್ವಜನಿಕ ಶೌಚಾಲಯಗಳಲ್ಲಿ ಸ್ವಚ್ಛತೆ ಇಲ್ಲದೇ ನಾರುತ್ತಿವೆ. ಕೆಲವು ಕಡೆ ಸಾರ್ವಜನಿಕರಿಗೆ ಉಚಿತ ಶೌಚಾಲಯಗಳು ಇದ್ದರೆ, ಕೆಲವು ಕಡೆ ಅಗತ್ಯ ಹಣ ಪಾವತಿಸಿ ಶೌಚಾಲಯವನ್ನು ಉಪಯೋಗ ಮಾಡಬೇಕಿದೆ.

ನಗರದ ಚಾರಾ ಕೊಟ್ರಿ, ಹಳೆಯ ನ್ಯಾಯಾಲಯದ ವೃತ್ತ, ಸಿಬಿಟಿ, ಜನತಾ ಬಜಾರ್ ಸೇರಿದಂತೆ ಅನೇಕ ಕಡೆ ಶೌಚಾಲಯಗಳಲ್ಲಿ ಸ್ವಚ್ಛತೆ ಎನ್ನುವುದು ಮರೀಚಿಕೆಯಾಗಿದೆ. ಅವುಗಳು ಗಬ್ಬೆದ್ದು ನಾರುತ್ತಿವೆ. ಸಾರಿಗೆ ಸಂಸ್ಥೆ ಅವರು ಶೌಚಾಲಯ ನಿರ್ವಹಣೆಯನ್ನು ಹೊರ ರಾಜ್ಯದವರಿಗೆ ಗುತ್ತಿಗೆ ನೀಡಿರುವುದರಿಂದ ಇದು ನಿತ್ಯ ಹಣ ವಸೂಲಿ ದಂಧೆಯಾಗಿ ಮಾರ್ಪಟ್ಟಿದೆ. ಅದರಲ್ಲಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂಬ ಶಂಕೆ ಸಾರ್ವಜನಿಕರದ್ದಾಗಿದೆ.


ಉದಯವಾಹಿನಿ ಚಿತ್ರ

**ಮಹಿಳೆಯರ ಘನತೆಯ ಪ್ರಶ್ನೆ**

ಸ್ಥಳೀಯ ಸಂಸ್ಥೆಯ ಕರ್ಮಚಾರಿಗಳಿಗೆ ಶೌಚಾಲಯಗಳ ನಿರ್ವಹಣೆಯನ್ನು ನೀಡದ ಸಂಸ್ಥೆಗಳು ಹೆಚ್ಚಿನ ಟೆಂಡರ್ ಹಣದ ಆಸೆಗಾಗಿ ಉತ್ತರ ಭಾರತದ ಕೆಲವು ಕಂಪನಿಗಳಿಗೆ ನೀಡುವ ಮೂಲಕ ಶೌಚಾಲಯ ಬಳಕೆಯ ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸಿವೆ.

ನಿಯಮದ ಪ್ರಕಾರ ಈ ಶೌಚಾಲಯಗಳು ಉಚಿತವಾಗಿರಬೇಕು. ಆದರೆ ರೂ.2, ರೂ.5 ದರ ಇದ್ದರೂ ರೂ.10 ಅನ್ನು ವಸೂಲಿ ಮಾಡುತ್ತಿದ್ದಾರೆ. ಮೂಲಸೌಕರ್ಯ, ಸ್ವಚ್ಛತೆ ಒದಗಿಸಬೇಕಾಗಿರುವುದು ಸ್ಥಳೀಯ ಆಡಳಿತದ ಕರ್ತವ್ಯ. ಆದರೆ ಮಹಾನಗರಗಳಲ್ಲಿರುವ ಶೌಚಾಲಯಗಳು ಬಹುತೇಕ ಕಳಪೆಯಾಗಿದ್ದು, ಹಣ ವಸೂಲಿ ಕೇಂದ್ರಗಳಾಗಿ ಪರಿಣಮಿಸಿವೆ. ನಿರ್ವಹಣೆ ಇಲ್ಲದೇ ಖಾಸಗಿ ಪ್ರದೇಶಗಳಲ್ಲಿರುವ ಶೌಚಾಲಯಗಳನ್ನು ಮಹಾನಗರ ಪಾಲಿಕೆ ನೋಡಿಕೊಳ್ಳಬೇಕು. ವಾರಕೊಮ್ಮೆ ಟ್ಯಾಂಕರ್ ಮೂಲಕ ನೀರು ಹಾಕಿ, ಸ್ವಚ್ಛಗೊಳಿಸಿ. ಕ್ರಿಮಿನಾಶಕವನ್ನು ಸಿಂಪಡಣೆ ಮಾಡಬೇಕು.

**ನಾಗರಿಕ ಪ್ರಜ್ಞೆಯ ಕೊರತೆ**

**ನಮ್ಮ ಮನೆಯ ಶೌಚಾಲಯದಂತೆಯೇ ಸಾರ್ವಜನಿಕ ಶೌಚಾಲಯವನ್ನೂ ಸ್ವಚ್ಛವಾಗಿ ಇಟ್ಟುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ. ಈ ಕುರಿತು ಸ್ಥಳೀಯ ಆಡಳಿತ ಜಾಗೃತಿ ಮೂಡಿಸುತ್ತಿದ್ದರೂ ನಾಗರಿಕರಲ್ಲಿ ಸ್ವಚ್ಛತೆಯ ಜಾಗೃತಿ ಬರುತ್ತಿಲ್ಲ. ಸಾರ್ವಜನಿಕ ಶೌಚಾಲಯಗಳ ದುಃಸ್ಥಿತಿಗೆ ಪೌರಾಡಳಿತ ಎಷ್ಟು ಕಾರಣವೋ ಜನರದ್ದು ಅದರಲ್ಲಿ ಪಾಲಿದೆ. ಶೌಚಾಲಯಗಳಲ್ಲಿ ಬಾಟಲಿ ಕಲ್ಲು ಇಟ್ಟಂಗಿ ಗುಟ್ಕಾ ಜಗಿದು ಅಲ್ಲದೇ ಉಗುಳುವ ಬಿಸಾಡುವ ಮನಸ್ಥಿತಿಯಿಂದ ಶೌಚಾಲಯಗಳು ಬಳಕೆಗೆ ಬಾರದಷ್ಟು ಗಲೀಜು ಆಗುತ್ತಿವೆ. ನಾಗರಿಕ ಪ್ರಜ್ಞೆ ಮೆರೆಯಬೇಕಿರುವ ಜನರು ಶೌಚಾಲಯಗಳನ್ನು ಕಸದ ತೊಟ್ಟಿಯ ರೀತಿಯಲ್ಲಿ ಬಳಸುತ್ತಿರುವುದರಿಂದ ಬಳಕೆಗೆ ಅಯೋಗ್ಯವಾಗಿವೆ.**

ಆದರೆ ನಿಯಮಿತವಾಗಿ ಅವುಗಳನ್ನು ಸ್ವಚ್ಛಗೊಳಿಸುವ ಗೋಜಿಗೆ ಹೋಗದಿರುವುದು ಪಾಲಿಕೆ ವೈಫಲ್ಯವಾಗಿದೆ ಎಂಬುವುದು ನಾಗರಿಕರ ಅಸಮಾದಾನವಾಗಿದೆ.

**ಮಹಿಳೆಯರ ಘನತೆಯ ಪ್ರಶ್ನೆ:** ಸಾರ್ವಜನಿಕ ಸ್ಥಳಗಳಲ್ಲಿ ಇರುವ ಶೌಚಾಲಯಗಳನ್ನು ಬಳಕೆ ಮಾಡಬೇಕು ಎಂದರೆ ಮಹಿಳೆಯರಿಗೆ ಇನ್ನೂ ಸವಾಲಾಗಿದೆ. ಸಂಜೆ ಹೊತ್ತಿನಲ್ಲಿ ಬಸ್ ನಿಲ್ದಾಣಗಳಲ್ಲಿ ಇರುವ ಶೌಚಾಲಯ ಬಳಸಬೇಕು ಎಂದರೆ ದುಪ್ಪಟ್ಟು ಹಣ ಪಾವತಿ ಮಾಡಬೇಕಿದೆ. ಇದರಿಂದ ಕೆಲವೊಮ್ಮೆ ವಾಗ್ವಾದ ಕೂಡಾ ನಡೆಯುತ್ತಿದೆ.

**ಖಾಸಗಿ ಏಜೆನ್ಸಿಗೆ ನಿರ್ವಹಣೆ ಯಾಕೆ?**

**ಪ್ರಯಾಣಿಕರು ಅಗತ್ಯ ಟಿಕೆಟ್ ದರವನ್ನು ನೀಡಿ ಬಸ್‌ನಲ್ಲಿ ಪ್ರಯಾಣಿಸುತ್ತಾರೆ. ಅದಕ್ಕೆ ಅಲ್ಲಿರುವ ಸೌಲಭ್ಯಗಳಾದ ಕುಡಿಯುವ ನೀರು ಶೌಚಾಲಯವನ್ನು ಏಕೆ ಉಚಿತವಾಗಿ ಬಳಕೆ ಮಾಡಲು ಕೊಡಬಾರದು ಎಂಬುವುದು ಬಹುತೇಕರ ಪ್ರಶ್ನೆಯಾಗಿದೆ. ಸಾರಿಗೆ ಸಂಸ್ಥೆಗಳು ಅಗತ್ಯ ಇರುವ ಸ್ವಚ್ಛತಾ ಕಾರ್ಮಿಕರನ್ನು ನೇಮಕ ಮಾಡಿ ಕೊಂಡಿರುತ್ತಾರೆ. ಅವರನ್ನೇ ಶೌಚಾಲಯಗಳ ಸ್ವಚ್ಛತೆಗೆ ಏಕೆ ನಿಯೋಜಿಸಬಾರದು ಎಂಬುವುದು ಪ್ರಯಾಣಿಕರ ಪ್ರಶ್ನೆಯಾಗಿದೆ. ಮೂತ್ರ ವಿಸರ್ಜನೆಗೆ ರೂ.2 ಶೌಚಕ್ಕೆ ರೂ5 ಎಂದು ನಿಗದಿ ಮಾಡಿರುತ್ತಾರೆ. ಆದರೆ ನಿರ್ವಹಣೆ ಮಾಡುವ ಸಿಬ್ಬಂದಿ ರೂ10 ಅನ್ನು ಬಲವಂತವಾಗಿ ವಸೂಲಿ ಮಾಡುತ್ತಾರೆ. ಇದರಿಂದ ಜನರ ಬಾರಿ ತೀವ್ರ ಗಲಾಟೆಗಳು ಆಗುತ್ತಿವೆ. ಇವುಗಳನ್ನೆಲ್ಲ ಕಂಡು ಕಾಣದಂತೆ ಬಸ್ ನಿಲ್ದಾಣ ವ್ಯವಸ್ಥಾಪಕರು ಪೊಲೀಸ್ ಸಿಬ್ಬಂದಿ ಇರುವುದು ಅಚ್ಚರಿಗೆ ಕಾರಣವಾಗಿದೆ.**

## ಡಿಸಿಸಿ ಬ್ಯಾಂಕ್‌ನಲ್ಲಿ ನಡೆದ ಒಂದು ದಿನದ ತರಬೇತಿ

• **ಉದಯವಾಹಿನಿ ಅರಸೀಕೆರೆ**

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು ಹಾಸನ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ ಹಾಸನ ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಹಾಸನ ಮತ್ತು ಸಹಕಾರ ಇಲಾಖೆ ಹಾಸನ ಇವರ ಸಂಯುಕ್ತ ಆಶ್ರಯದಲ್ಲಿ ಅರಸೀಕೆರೆ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು

ಈ ಸಮಾರಂಭದ ಅಧ್ಯಕ್ಷತೆಯನ್ನು ಹಾಸನ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತದ ಅಧ್ಯಕ್ಷರಾದ ಎಸ್‌ಎನ್ ಪ್ರಕಾಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಾಸನ ಜಿಲ್ಲಾ ಸಹಕಾರಿ ಬ್ಯಾಂಕಿನ ಉಪಾಧ್ಯಕ್ಷರಾದ ಆರ್ ಎನ್ ಶೇಖರಪ್ಪ ಮಾತನಾಡಿದರು ನಿರ್ದೇಶಕರಾದ ಹೆಚ್ ಎನ್ ಗಂಗಾಧರ್.( ಹೊಸೂರ್ ಗಂಗಣ್ಣ ) ಹಾಸನ ಜಿಲ್ಲಾ


ಉದಯವಾಹಿನಿ ಚಿತ್ರ

ಸಹಕಾರ ಒಕ್ಕೂಟ ನಿಯಮಿತದ ನಿರ್ದೇಶಕರಾದ ಪುಟ್ಟಸ್ವಾಮಿ ಗೌಡ ಹಾಸನ ಜಿಲ್ಲಾ ಸಹಕಾರಿ ಬ್ಯಾಂಕಿನ ಅರಸಿಕೆರೆಯ ಉಪ ಪ್ರಧಾನ ವ್ಯವಸ್ಥಾಪಕರಾದ ಜಯಕುಮಾರ್ ಕ್ಷೇತ್ರಧಿಕಾರಿಗಳಾದ ಕೆ ಸೋಮೇಶ್.ಮತ್ತು ಓಂಕಾರ ಮೂರ್ತಿ.. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹೊಣೆಗಾರಿಕೆಯ ವಿಚಾರದಲ್ಲಿ ಅತಿಥಿ ಉಪನ್ಯಾಸಕ ನೀಡಲು ಬಂದಿದ್ದ ಎಸ್ ವಿ ಬಸವರಾಜಪ್ಪ. ಲೆಕ್ಕಪರಿಶೋಧಕರಾದ ಪರಿಶೋಧಕರಾದ ಶಂಭುಲಿಂಗಪ್ಪ ಹಾಗೂ ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ಆಡಳಿತ ಮಂಡಳಿ ಸದಸ್ಯರಾದ ಕೆ ಆರ್ ಪ್ರವೀಣ್ ಉಪಸ್ಥಿತರಿದ್ದರು.

## ಬಾಳೂರು-ಹೊರನಾಡು ರಸ್ತೆ ಗುಂಡಿ: ನಿತ್ಯವೂ ಅಪಘಾತ

• **ಉದಯವಾಹಿನಿ ಮೂಡಿಗೆರೆ**

ತಾಲ್ಲೂಕಿನ ಬಾಳೂರಿನಿಂದ ಹೊರನಾಡಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿಯಲ್ಲಿ ಗುಂಡಿಯಾಗಿ ವಾಹನ ಸಂಚರಿಸಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗಿದೆ ಎಂದು ಕೆಳಗೂರಿನ ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ಪದಾಧಿಕಾರಿಗಳು ದೂರಿದ್ದಾರೆ.

ಸಂಸ್ಥೆಯ ಶಿವರಾಜ್ ಹೇಳಿಕೆ ನೀಡಿ, ಬಾಳೂರಿನಿಂದ ಹೊರನಾಡು ಗ್ರಾಮದವರೆಗೆ 50 ಕಿ.ಮೀ ರಸ್ತೆ ಸಂಪೂರ್ಣ ಗುಂಡಿಯಾಗಿದೆ. ವಾಹನಗಳು ಸಂಚರಿಸಲು ಹರಸಾಹಸ ಪಡಬೇಕಾಗಿದೆ. ಸಂಪ್ತ ಗ್ರಾಮದಲ್ಲಿ ಈ ರಸ್ತೆಯ ಮಧ್ಯಭಾಗದಲ್ಲಿ ಬೃಹತ್ ಗಾತ್ರದ ಹೊಂಡವಾಗಿ ಹಲವಾರು ವಾಹನಗಳು ಗುಂಡಿಯೊಳಗೆ ಬಿದ್ದು ವಾಹನಗಳು ಜಖಂಗೊಂಡಿವೆ. ಬೈಕ್ ಸವಾರರು ಗುಂಡಿಗೆ ಸಿಲುಕಿ ಬಿದ್ದು ಗಂಭೀರ ಗಾಯಗೊಂಡಿದ್ದಾರೆ. ರಸ್ತೆ ವಿಪರೀತ ಗುಂಡಿಯಾಗಿರುವ ಕಾರಣ ಕೆಎಸ್


ಉದಯವಾಹಿನಿ ಚಿತ್ರ

**ಸಂಚರಿಸಲು ಸಾಧ್ಯವಾಗದ ಪರಿಸ್ಥಿತಿ**

ಆರ್ ಟಿಸಿ ಹಾಗೂ ಖಾಸಗಿ ಬಸ್ ಗಳು ಸಮಯಕ್ಕೆ ಸರಿಯಾಗಿ ಸಂಚರಿಸುತ್ತಿಲ್ಲ. ಇದರಿಂದ ರೋಗಿಗಳು, ವಿದ್ಯಾರ್ಥಿಗಳು ಪರದಾಡಬೇಕಾಗಿದೆ. ಕಳಸ ಹಾಗೂ ಮೂಡಿಗೆರೆ ತಾಲ್ಲೂಕು ಕೇಂದ್ರಕ್ಕೆ ಈ ಭಾಗದ ಸಾರ್ವಜನಿಕರು ಇದೇ ರಸ್ತೆಯಲ್ಲಿ ಪ್ರತಿನಿತ್ಯ ಸಂಚರಿಸಬೇಕಾಗಿದೆ. ಖಾಸಗಿ ವಾಹನಗಳು ಜಖಂಗೊಳ್ಳುವ ಭಯದಲ್ಲಿ ಬಾಡಿಗೆ ವಾಹನಗಳ ಮಾಲೀಕರು ಸಂಚರಿಸಲು ಹಿಂದೇಟು ಹಾಕುತ್ತಿದ್ದು, ಸ್ಥಳೀಯರು ಸಮಸ್ಯೆ ಎದುರಿಸುವಂತಾಗಿದೆ' ಎಂದು ದೂರಿದ್ದಾರೆ.

'ಕಳಸ, ಹೊರನಾಡು, ಕುದುರೆಮುಖ, ಉಡುಪಿ ಸೇರಿದಂತೆ ಬಹುತೇಕ ಕಡೆ ತೆರಳುವ ಪ್ರವಾಸಿಗರು ಇದೆ ರಸ್ತೆಯಲ್ಲಿ ಸಂಚರಿಸಬೇಕಾಗಿದೆ. ರಾಜ್ಯದ ವಿವಿಧ ಜಿಲ್ಲೆ ಹಾಗೂ ಹೊರ ರಾಜ್ಯದ ಪ್ರವಾಸಿ ವಾಹನಗಳಿಗೆ ರಸ್ತೆ ಹದಗೆಟ್ಟಿರುವ ಬಗ್ಗೆ ಮಾಹಿತಿಯಿಲ್ಲದೆ ಏಕಾಏಕಿ ಮುನ್ನುಗ್ಗಿ ವಾಹನಗಳು ಗುಂಡಿಗೆ ಬಿದ್ದು ಜಖಂಗೊಳ್ಳುತ್ತಿದೆ. ಅಲ್ಲದೇ ಈ ರಸ್ತೆಯಲ್ಲಿ ನಿತ್ಯವೂ ಅಪಘಾತಗಳು ಸಂಭವಿಸುತ್ತಿವೆ. ಕೂಡಲೇ ಈ ರಸ್ತೆಯನ್ನು ಅಭಿವೃದ್ಧಿಗೊಳಿಸುವಂತೆ ಶಾಸಕಿ ನಯನಾ ಮೋಟಮ್ಮ ಅವರಿಗೆ ಮನವಿ ಸಲ್ಲಿಸಲಾಗಿದೆ. ಶಾಸಕರು ಮುತುವರ್ಜಿ ವಹಿಸಿ ಕೂಡಲೇ ರಸ್ತೆಯನ್ನು ಅಭಿವೃದ್ಧಿಗೊಳಿಸಬೇಕು' ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

## ಯೋಜನೆ ಪುನರ್ ಆರಂಭಿಸಲು ಒತ್ತಾಯ

• **ಉದಯವಾಹಿನಿ ಚಿಕ್ಕಮಗಳೂರು**

ಅಯ್ಯನಕೆರೆ ಕೋಡಿಯಿಂದ ಹರಿಯುವ ನೀರನ್ನು ನಾಗೇನಹಳ್ಳಿ ಮತ್ತು ಹುಲಿಕೆರೆ ಸಮೀಪದ ಬೆರಟಿಕೆರೆಗೆ ತುಂಬಿಸುವ ಯೋಜನೆ ಕಾಮಗಾರಿ ಸ್ಥಗಿತಗೊಂಡಿದ್ದು, ಕೂಡಲೇ ಆರಂಭಿಸುವಂತೆ ಒತ್ತಾಯಿಸಿ ಈ ಭಾಗದ ರೈತರು' ಪ್ರತಿಭಟನೆ ನಡೆಸಿದರು. ನಾಗೇನಹಳ್ಳಿ ಹಾಗೂ ಬೆರಟಿಕೆರೆ ನೀರು ತುಂಬಿಸುವ ಹೋರಾಟ ಸಮಿತಿ ನೇತೃತ್ವದಲ್ಲಿ ಆಜಾದ್ ಪಾರ್ಕ್ ವೃತ್ತದಲ್ಲಿ ಧರಣಿ ನಡೆಸಿದರು. ಸ್ಥಳಕ್ಕೆ ಬಂದ ಹೆಚ್ಚುವರಿ ಜಿಲ್ಲಾಧಿಕಾರಿ ನಾರಾಯಣ ಕನಕರಡ್ಡಿ ಅವರಿಗೆ ಮನವಿ ಸಲ್ಲಿಸಿದರು.

ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಕಾರ್ಯದರ್ಶಿ ಎಚ್.ಸಿ.ಕಲ್ಮರುಡಪ್ಪ ಮಾತನಾಡಿ, 'ಹಲವು ವರ್ಷಗಳಿಂದ ಹುಲಿಕೆರೆ, ಬೆರಟಿಕೆರೆ ಹಾಗೂ ನಾಗೇನಹಳ್ಳಿ ಗ್ರಾಮದ ಕೆರೆಗಳು ತುಂಬಿಲ್ಲ. ಸುತ್ತಮುತ್ತ ಬರಗಾಲದ ವಾತಾವರಣವಿದ್ದು, ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಜಿಲ್ಲಾಡಳಿತ ಒದಗಿಸುತ್ತಿದೆ' ಎಂದರು.

ಈ ಯೋಜನೆಯ ಉದ್ದೇಶ ಕೆರೆಗಳನ್ನು ತುಂಬಿಸುವ ಮೂಲಕ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಪೂರೈಸುವುದಾಗಿದೆಯೇ ಹೊರತು ಕೃಷಿಗೆ ನೀರಾವರಿ ಕಲ್ಪಿಸುವ ಉದ್ದೇಶವಿಲ್ಲ. ಅಯ್ಯನಕೆರೆ ಕೋಡಿ


ಉದಯವಾಹಿನಿ ಚಿತ್ರ

ಬಿದ್ದು ಹರಿಯುವ ನೀರಿನಲ್ಲಿ ಅಲ್ಪ ಪ್ರಮಾಣವನ್ನಷ್ಟೇ ಬಳಸಲಾಗುತ್ತಿದೆ. ಕೆರೆಗಳು ತುಂಬಿದ ನಂತರ ಮತ್ತೆ ವೇದಾ ಹಳ್ಳಕ್ಕೇ ನೀರು ಹರಿಯುವುದರಿಂದ ಯಾರಿಗೂ ಸಮಸ್ಯೆ ಉದ್ಭವಿಸುವುದಿಲ್ಲ ಎಂದರು.

ಅಂದಾಜು ರೂ. 9.90 ಕೋಟಿ ಮೊತ್ತದ ಯೋಜನೆ ಇದಾಗಿದ್ದು, ಕಾಮಗಾರಿಯೂ ಆರಂಭಗೊಂಡಿತ್ತು. ತಪ್ಪು ಮಾಹಿತಿಯಿಂದ ಕೆಲವರು ವಿರೋಧಿಸಿದ್ದರಿಂದ ಕಾಮಗಾರಿ ಸ್ಥಗಿತಗೊಂಡಿದೆ. ಯೋಜನೆಯ ಉದ್ದೇಶವನ್ನು ಕೆಳಭಾಗದ ಹಳ್ಳಿಗಳ ರೈತರಿಗೆ ಜಿಲ್ಲಾಡಳಿತ ಮನವರಿಕೆ ಮಾಡಿಕೊಡಬೇಕು ಎಂದು ಹೇಳಿದರು. ಕೆಪಿಸಿಸಿ ವಕ್ತಾರ ರವೀಶ್ ಕ್ಯಾತನಬೀಡು ಮಾತನಾಡಿ, 'ರೈತರು ಸಂಘಟಿತರಾಗಿ ಹೋರಾಟ ರೂಪಿಸಿದಾಗ ಮಾತ್ರ

**ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ತಾತ್ಕಾಲಿಕವಾಗಿ ಲಭ್ಯವಾದರೆ, ಜಾನುವಾರು, ಪ್ರಾಣಿ, ಪಕ್ಷಿಗಳಿಗೆ ಕುಡಿಯಲು ನೀರಿಲ್ಲದಾಗಿದೆ. ಅಯ್ಯನಕೆರೆ ಕೋಡಿ ನೀರು ಎರಡೂವರೆ ತಿಂಗಳಿನಿಂದ ಹರಿದು ಹೋಗುತ್ತಿದೆ. ಸ್ಥಳೀಯ ರೈತರ ಕೃಷಿ ಚಟುವಟಿಕೆಗೆ ನೀಡದೆ ಸರ್ಕಾರ ವಂಚಿಸುತ್ತಿದೆ. ಇದರಿಂದಾಗಿ ನಾಗೇನಹಳ್ಳಿ, ಹುಲಿಕೆರೆ ಸುತ್ತಮುತ್ತಲ ಗ್ರಾಮಗಳು ಬರಗಾಲಕ್ಕೆ ತುತ್ತಾಗಿವೆ. - ಜಿಲ್ಲಾಧಿಕಾರಿ**

ನೀರಾವರಿ ಯೋಜನೆ ಪೂರ್ಣಗೊಳ್ಳಲು ಸಾಧ್ಯ. ಗ್ರಾಮದ ಕೆರೆಗಳು ನೀರು ತುಂಬಿಸಿ ಜನ-ಜಾನುವಾರು, ಪ್ರಾಣಿ-ಪಕ್ಷಿಗಳಿಗೆ ತಲುಪುವುದು ಗುರಿಯಾಗಬೇಕು' ಎಂದರು.

ರೈತ ಮುಖಂಡ ವಿಜಯಕುಮಾರ್, ರುದ್ರಮೂರ್ತಿ, ಮೋಹನಕುಮಾರ್, ಅಣ್ಣಾನಾಯ್ಕ, ಉಮೇಶ್, ಸಚಿನ್ ಎತ್ತಿನಮನೆ, ಚಂದ್ರು ಹುಲಿಕೆರೆ, ಮುಳ್ಳಪ್ಪ, ಪುಷ್ಪರಾಜ್ ಭಾಗವಹಿಸಿದ್ದರು.


## ಸಾರಿಗೆ ಸೌಲಭ್ಯ ಕಲ್ಪಿಸುವಂತೆ ಒತ್ತಾಯ

• **ಉದಯವಾಹಿನಿ ಶಿರಹಟ್ಟಿ**

ಸಾರಿಗೆ ಬಸ್‌ಗಳು ಸಮಯಕ್ಕೆ ಸರಿಯಾಗಿ ಬಾರದಿರುವ ಕಾರಣ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಈ ಕುರಿತು ಹಲವು ಬಾರಿ ಮನವಿ ಸಲ್ಲಿಸಿದರೂ ಸ್ಪಂದಿಸದ ಅಧಿಕಾರಿಗಳ ವಿರುದ್ಧ ಬಸ್ ನಿಲ್ದಾಣ ಬಂದ್ ಹಾಗೂ ನಿಯಂತ್ರಕರ ಕೊಠಡಿಗೆ ಬೀಗ ಹಾಕುವ ಮೂಲಕ ಎಬಿವಿಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಸಂಘಟನೆಯ ತಾಲ್ಲೂಕು ಅಧ್ಯಕ್ಷ ಪರಶುರಾಮ ಕಳ್ಳಿಮನಿ ಮಾತನಾಡಿ, 'ಸಮಯಕ್ಕೆ ಸರಿಯಾಗಿ ಬಸ್ ಸಂಚಾರ ಕಲ್ಪಿಸಬೇಕು ಎಂದು ಒತ್ತಾಯಿಸಿ ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಸಲ್ಲಿಸಲಾಗಿದೆ. ಶಾಲಾ-ಕಾಲೇಜು ಪ್ರಾರಂಭವಾಗಿ ಹಲವು ತಿಂಗಳು ಕಳೆದರೂ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುತ್ತಿಲ್ಲ' ಎಂದು ಆರೋಪಿಸಿದರು. ಗ್ರಾಮೀಣ ಪ್ರದೇಶಗಳಿಗೆ ದಿನಕ್ಕೊಂದು ಬಸ್ ಬಿಡುತ್ತಿದ್ದು, ಶಕ್ತಿ ಯೋಜನೆಯ ಕಾರಣ ಜನದಟ್ಟನೆ ಅಧಿಕವಾಗಿರುತ್ತದೆ.

ಕೆಲವೊಮ್ಮೆ ಬಸ್ ಕೆಟ್ಟು ನಿಂತು ವಿದ್ಯಾರ್ಥಿಗಳು


ಉದಯವಾಹಿನಿ ಚಿತ್ರ

ತರಗತಿಗೆ ಹಾಜರಾಗಲು ತೊಂದರೆಯಾಗುತ್ತಿದೆ. ಈ ಸಮಸ್ಯೆಗೆ ಜಿಲ್ಲಾಧಿಕಾರಿಗಳು ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಸಾರಿಗೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, 'ನ.1ರೊಳಗೆ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ಪ್ರತಿಕ್ರಿಯಿಸಿದ ಸಂಘಟನಾಕಾರರು ಈ ಕುರಿತು ಕ್ರಮ ತೆಗೆದುಕೊಳ್ಳದಿದ್ದಲ್ಲಿ ಸಾರಿಗೆ ಇಲಾಖೆಯ ಎಲ್ಲಾ ಕಚೇರಿ ಬಂದ್ ಮಾಡಿ ಪ್ರತಿಭಟನೆ ನಡೆಸಲಾಗುದು ಎಂದು ಎಚ್ಚರಿಸಿದರು.

ಅಭಿಷೇಕ ಉಮಚಗಿ, ಶಶಾಂಕ ಪಲ್ಲೇದ, ಸೊಮಶೇಖರ, ಸಂಜನಾ ಪಾಟೀಲ, ಅನು ನಾಗಾವಿ, ವಿನಯ ತಪ್ಪಲದ ಸೇರಿದಂತೆ ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳು ಇದ್ದರು.

## ಭತ್ತದ ಬೆಳೆ ಹಾನಿ: ಶಾಸಕ ಜನಾರ್ದನರೆಡ್ಡಿ ಸಪರಿಶೀಲನೆ

• **ಉದಯವಾಹಿನಿ ಗಂಗಾವತಿ**

ತಾಲ್ಲೂಕಿನ ಹಿರೇಜಂತಕಲ್ ಮತ್ತು ಮಲ್ಲಾಪುರ ಭಾಗದಲ್ಲಿ ಮಳೆಯಿಂದಾಗಿ ಹಾಳಾದ ಭತ್ತದ ಹೊಲಗಳಿಗೆ ಶಾಸಕ ಜಿ.ಜನಾರ್ದನರೆಡ್ಡಿ ಭೇಟಿ ನೀಡಿ, ಪರಿಶೀಲಿಸಿದರು. ನಷ್ಟದ ಕುರಿತು ರೈತರಿಂದ ಮಾಹಿತಿ ಪಡೆದರು.

ನಂತರ ಮಾತನಾಡಿ, 'ಹವಾಮಾನ ವೈಪರಿತ್ಯದಿಂದ ಭತ್ತದ ಬೆಳೆಗಳು ಹಾಳಾಗಿದ್ದು, ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಹೀಗಾಗಿ ಸೂಕ್ತ ಪರಿಹಾರ ನೀಡಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ತಾಲ್ಲೂಕು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಹಾನೀಯ ವರದಿ ಬಗ್ಗೆ ಸರ್ಕಾರದ ಗಮನ ಸೆಳೆಯಲು ಪ್ರಾಮಾಣಿಕವಾಗಿ ಯತ್ನಿಸುತ್ತೇನೆ' ಎಂದು ಹೇಳಿದರು. ಇನ್ನೂ ತಾಲ್ಲೂಕು ಆಡಳಿತದ ಸಂಬಂಧಪಟ್ಟ ಅಧಿಕಾರಿಗಳು


ಉದಯವಾಹಿನಿ ಚಿತ್ರ

ಭತ್ತದ ಗದ್ದೆಗಳಿಗೆ, ಬೆಳೆ ನಷ್ಟದ ಬಗ್ಗೆ ವರದಿ ಮಾಡಿಕೊಳ್ಳಬೇಕು. ಬೆಳೆ ನಷ್ಟ ವರದಿ ರಚನೆಯಲ್ಲಿ ಯಾವೊಬ್ಬ ರೈತನು ತಪ್ಪಿಹೋಗಿರಬಾರದು. ಈ ಬಗ್ಗೆ ಕಂದಾಯ ಮತ್ತು ಕೃಷಿ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಸಮೀಕ್ಷೆ ನಡೆಸಿ, ವರದಿ ಸಲ್ಲಿಸಬೇಕು' ಎಂದು ಹೇಳಿದರು.

## ಜಿಲ್ಲಾಧಿಕಾರಿ ಪ್ರವಾಸ ಮಾಡಿ ಜನರ ಕಷ್ಟ ಆಲಿಸಲಿ

• **ಉದಯವಾಹಿನಿ ಚನ್ನರಾಯಪಟ್ಟಣ**

ಧಾರಾಕಾರ ಮಳೆಯಿಂದಾಗಿ ದಂಡಿಗನಹಳ್ಳಿ ಹೋಬಳಿಯ ಮನೆಗಳಿಗೆ ಮತ್ತು ಬೆಳೆಗಳಿಗೆ ಹಾನಿಯಾಗಿದ್ದರೂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಜನರ ಕಷ್ಟ ಆಲಿಸುತ್ತಿಲ್ಲ ಎಂದು ಶಾಸಕ ಎಚ್.ಡಿ. ರೇವಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕು ಕಚೇರಿಯಲ್ಲಿ ಏರ್ಪಡಿಸಿದ್ದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ರೈತರ ತೋಟ, ಹೊಲ, ಗದ್ದೆಗಳಲ್ಲಿ ಮಳೆನೀರು ನಿಂತು ಪರಿಪಾಟಲು ಪಡುತ್ತಿದ್ದಾರೆ. ದಂಡಿಗನಹಳ್ಳಿ ಹೋಬಳಿಯ ಆನೆಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 14 ಮನೆಗಳಿಗೆ ಹಾನಿಯಾಗಿದೆಯಾದರು ಅಧಿಕಾರಿಗಳು ಭೇಟಿ ನೀಡಿಲ್ಲ ಎಂದು ರೈತರು ದೂರುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಕೇಂದ್ರದಲ್ಲಿ ಸ್ಥಾನದಲ್ಲಿ ಕುಳಿತು ಕೆಲಸ ಮಾಡದೇ ತಾಲ್ಲೂಕಿನಲ್ಲಿ ಪ್ರವಾಸ ಮಾಡಿ ರೈತರ ಕಷ್ಟ ಆಲಿಸಬೇಕು. ಅಧೀನ ಅಧಿಕಾರಿಗಳ ಮೂಲಕ ಕೆಲಸ ಮಾಡಿಸಬೇಕು.


ಉದಯವಾಹಿನಿ ಚಿತ್ರ

ಬೇಜಾಬ್ದಾರಿಯಿಂದ ವರ್ತಿಸಬಾರದು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬಾಕಿ ಇರುವ ಕಡತಗಳನ್ನು ಶೀಘ್ರ ವಿಲೇವಾರಿ ಮಾಡಬೇಕು ಎಂದು ಹೇಳಿದರು.

ಹಳ್ಳಿಗಳಿಗೆ ತೆರಳಿ ರೈತರ ಕಷ್ಟಕ್ಕೆ ಸ್ಪಂಧಿಸುವಂತೆ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಜಿಲ್ಲಾಧಿಕಾರಿಗೆ ತಿಳಿಹೇಳಬೇಕು. ಎಷ್ಟು ಬೆಳೆಗಳಿಗೆ ನಷ್ಟ ಸಂಭವಿಸಿದೆ ಎಂದು ಅಂದಾಜು ಮಾಡಿ ಪರಿಹಾರ ನೀಡುವಂತಾಗಬೇಕು. ಮುಸುಕಿನ ಜೋಳ ಖರೀದಿಸುತ್ತಿಲ್ಲ. ಹೆಚ್ಚು ಬೆಲೆ

**ಕಂದಾಯ ಸಚಿವರು ಹಾಸನಾಂಬ ಜಾತ್ರೆಯಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸಿರುವುದಕ್ಕೆ ಧನ್ಯವಾದ ಅರ್ಪಿಸುತ್ತೇನೆ ಎಂದ ಅವರು, ಉದಯಪುರ, ಶಾಂತಿಗ್ರಾಮ ಮತ್ತು ಮೊಸಳೆಹೊಸಹಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆಯ ನೂತನ ಕಟ್ಟಡ ನಿರ್ಮಿಸಲು 5.75 ಕೋಟಿ ಮಂಜೂರಾಗಿದೆ.-ಎಚ್.ಡಿ. ರೇವಣ್ಣ**

ನೀಡಿ ಖರೀದಿ ಮಾಡುವ ಮೂಲಕ ರೈತರ ನೆರವಿಗೆ ಧಾವಿಸಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ತಹಶೀಲ್ದಾರ್ ಜಿ.ಎಸ್. ಶಂಕರಪ್ಪ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಜಿ.ಆರ್. ಹರೀಶ್, ಅಧಿಕಾರಿಗಳು ಭಾಗವಹಿಸಿದ್ದರು.

# ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

### ಸರ್ಕಾರದ ಗ್ಯಾರಂಟಿ ಯೋಜನೆಗಳ ಗೃಹಲಕ್ಷ್ಮಿ ಯೋಜನೆ ಶೇ.92ಪ್ರತಿಶತಃ ದಷ್ಟು ಜನರು ಸದುಪಯೋಗ: ಬಸವರಾಜ ಮಾಲಿ

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನಾದ್ಯಂತ ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಐದು ಗ್ಯಾರಂಟಿಗಳಲ್ಲಿ ಗೃಹಲಕ್ಷ್ಮಿ ಯೋಜನೆ ಶೇ.92ಪ್ರತಿಶತಃ, ಗೃಹಜ್ಯೋತಿ ಯೋಜನೆ ಶೇ.98ರಷ್ಟು,ಶಕ್ತಿ ಯೋಜನೆ ಶೇ.100ರಷ್ಟು, ಅನ್ನಭಾಗ್ಯ ಶೇ.100ರಷ್ಟು,ಯುವನಿಧಿ ಯೋಜನೆ 100ರಷ್ಟು ಜನರು ಸದುಪಯೋಗ ಪಡೆದುಕೊಂಡು ಸಬಲರಾಗುತ್ತಿದ್ದಾರೆ ಎಂದು ತಾಲ್ಲೂಕಾ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಬಸವರಾಜ ಮಾಲಿ ಹೇಳಿದರು.

ಪಟ್ಟಣದ ತಾಲ್ಲೂಕಾ ಪಂಚಾಯತ್ ಸಭಾಂಗಣದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,ಅಧಿಕಾರಿಗಳು ತಾಲ್ಲೂಕಿನ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಪಂಚ ಗ್ಯಾರಂಟಿ ಯೋಜನೆಗಳ ಯಾವುದೇ ಲೋಪದೋಷಗಳನ್ನು ಇದ್ದರೆ ತಕ್ಷಣ ಸರಿಪಡಿಸಿ ಜನರಿಗೆ ಸರ್ಕಾರ ಸೌಲಭ್ಯ ದೊರಕುವಂತೆ ಮಾಡಬೇಕು ಎಂದರು.

ಗೃಹಲಕ್ಷ್ಮಿ ಯೋಜನೆಯು ತಾಲ್ಲೂಕಿನಲ್ಲಿ 62,400 ಜನರು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ,



ಉದಯವಾಹಿನಿ ಚಿತ್ರ

ಅನ್ನಭಾಗ್ಯ ಯೋಜನೆಯು ತಾಲ್ಲೂಕಿನಲ್ಲಿ 57,531ಕುಟುಂಬಗಳು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ,ಯುವನಿಧಿ ಯೋಜನೆಯು ತಾಲ್ಲೂಕಿನ ಪದವಿದಾರರು 1334 ಫಲಾನುಭವಿಗಳು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ,ಶಕ್ತಿ ಯೋಜನೆಯಲ್ಲಿ ಮೂರು ತಿಂಗಳಲ್ಲಿ 99.34ಲಕ್ಷ ಮಹಿಳೆಯರು ಉಚಿತ ಪ್ರಯಾಣದ ಸದುಪಯೋಗ ಪಡೆದಿದ್ದು 3324.95ಲಕ್ಷ ರೂ. ಸರ್ಕಾರ ಹಣ ಪಾವತಿ ಮಾಡಲಾಗಿದೆ, ಪ್ರತಿಯೊಂದು ಕುಟುಂಬದ ಮೀಟರ್ ಪಡೆದವರು ಸರ್ಕಾರದ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ ಎಂದರು. ತಾಪಂ.ಇಓ ಸಂತೋಷ ಚವ್ಹಾಣ ಮಾತನಾಡಿ ಪಂಚ ಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಮರ್ಪಕವಾಗಿ ವರದಿ ತರದೆ ಇದ್ದಕಾರಣ ಕಾರಣ ಕೇಳಿ ಆಹಾರ ನಿರೀಕ್ಷಕರು ಉಷಾ ಹಾಗೂ ಸಿಡಿಪಿಓ ಅಧಿಕಾರಿ ಸವಿತಾ ಮಡಿವಾಳ ಅವರು ಕರ್ತವ್ಯ ಲೋಪ ಹಾಗೂ ಸತತವಾಗಿ ಸಭೆಗಳಲ್ಲಿ ಗೈರು ಕಾರಣಕೇಳಿ ನೋಟಿಸ್ ಜಾರಿ ಮಾಡಲಾಗುವುದು ಮೂರು ದಿನದಲ್ಲಿ ಉತ್ತರ ನೀಡುವಂತೆ ಸೂಚಿಸಿದರು. ಪಂಚ ಗ್ಯಾರಂಟಿ ಯೋಜನೆಯ ಸಂಬಂಧ ಪಟ್ಟ ಅಧಿಕಾರಿಗಳು ವರದಿ ಓದಿ ಹೇಳಿದರು ಅದಕ್ಕೆ ತಕ್ಕಂತೆ ಪಂಚಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರು ಪ್ರಶ್ನೆಗಳ ಸುರಿಮಳೆಗೈದರು.

**ಅಸಂಬದ್ಧ ನೀತಿ ನಿಯಮಗಳ ಬಗ್ಗೆ ರೈತರ ಬೇಸರ**

**ಸಿಡಿಪಿಓ ಸಭೆಗೆ ಗೈರು**

**ಸಿಡಿಪಿಓ ಸವಿತಾ ಮಡಿವಾಳ ಪ್ರತಿಯೊಂದು ಪಂಚ ಗ್ಯಾರಂಟಿ ಪ್ರಗತಿ ಪರಿಶೀಲನಾ ಸಭೆಗೆ ಗೈರು ಹಾಜರಾಗಿ ಸಭೆಗೆ ಅಗೌರವ ತೋರುತ್ತಿದ್ದಾರೆ ಅವರಿಗೆ ಸಭೆಗೆ ಕರೆಸಿ ಇಲ್ಲಾದಿದ್ದರೆ ಕರೆ ಮೂಲಕ ಸ್ಪಷ್ಟನೆ ಹೇಳಿ ಸಭೆ ಪ್ರಾರಂಭಿಸಿ ಎಂದು ಗ್ಯಾರಂಟಿ ಯೋಜನೆಯ ಸದಸ್ಯರು ಪಟ್ಟುಹಿಡಿದಾಗ ಗದ್ದಲ ಉಂಟಾಗ ತಾಪಂ. ಇಓ ಸಂತೋಷ ಚವ್ಹಾಣ ಕರೆಮಾಡಿ ವಿವರಣೆ ಪಡೆದು ನೋಟಿಸ್ ಜಾರಿ ಮಾಡುತ್ತೇನೆ ಎಂದಾಗ ಸದಸ್ಯರು ಸಭೆ ಮುಂದುವರಿಸಿದರು.**

ಸದಸ್ಯ ಲಕ್ಷ್ಮಣ ಆವುಂಟಿ ಮಾತನಾಡಿ ಗ್ಯಾರಂಟಿ ಪರಿಶೀಲನಾ ಸಭೆಗೆ ಸತತವಾಗಿ ಸಿಡಿಪಿಓ ಅಧಿಕಾರಿ ಗೈರು ಹಾಜರಾಗಿ ಸಭೆಗೆ ಅಗೌರವ ತೋರುತ್ತಿದ್ದಾರೆ ಹಾಗೂ ರಾಜ್ಯ ಸರ್ಕಾರದಿಂದ ಪ್ರತಿಯೊಂದು ತಾಲ್ಲೂಕಾದಿಂದ ಗೃಹಜ್ಯೋತಿ ಸಹಕಾರ ಸಂಘ ಸ್ಥಾಪನೆಗೆ ತಾಲ್ಲೂಕಿನಿಂದ 07ಜನ ಮಹಿಳಾ ಸದಸ್ಯರ ಪಟ್ಟಿಸಿದ್ದಪಡಿಸಿ ರವಾನಿಸುವಂತೆ ಜಿಲ್ಲೆಯ ಅಧಿಕಾರಿಗಳು ಸೂಚಿಸಿದರು ಸಿಡಿಪಿಓ ಅಧಿಕಾರಿ ಅವಧಿ ಮುಕ್ತಾಯವಾದರೂ ಅಂತಿಮ ಪಟ್ಟಿ ರವಾನೆ ಮಾಡದೆ ಕರ್ತವ್ಯ ಲೋಪ ಎಸೇಗಿದ್ದಾರೆ ಇಂಥಹ ಅಧಿಕಾರಿ ಕೆಲಸ ಮಾಡಲು ಅರ್ಹರಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಸದಸ್ಯ ವಿಜಯಕುಮಾರ ಗಂಗನಪಳ್ಳಿ,ಶಾಂತಕುಮಾರ, ಗೋವಿಂದಪ್ಪ,ಅರವೀಂದರೆಡ್ಡಿ,ಜನಾರ್ಧನ ಪಾಟೀಲ, ತಾಪಂ.ಮಾಜಿ ಅಧ್ಯಕ್ಷ ವೀರಮ್ಮ ಸಂಗಯ್ಯಸ್ವಾಮಿ ಅಣವಾರ,ಮಾತನಾಡಿದರು.

ಈ ಸಂದರ್ಭದಲ್ಲಿ ಜೇಸ್ಕಾಂ ಎಇಇ ಕಾಮಣ್ಣ ಇಂಜೇಳ್ಳಿ,ಆಹಾರ ನಿರೀಕ್ಷಕರು ಉಷಾ,ಯುವನಿಧಿ ಅಧಿಕಾರಿ ಭಾರತಿ,ಸಿಡಿಪಿಓ ಕಛೇರಿ ಮೇಲ್ವಿಚಾರಕಿ ಮೀನಾಕ್ಷಿ,ಆರ್ಟಿಸಿ ಅಧಿಕಾರಿ ಇದ್ದರು.

## ಮಿನಿ ನ್ಯೂಸ್

### ಗೋವಿನಜೋಳ ಖರೀದಿ ಕೇಂದ್ರ ಪ್ರಾರಂಭಿಸಲು ರೈತರ ಆಗ್ರಹ

• **ಉದಯವಾಹಿನಿ ಮುಂಡರಗಿ**

ಪಟ್ಟಣದಲ್ಲಿ ಗೋವಿನಜೋಳ ಬೆಳೆ ಖರೀದಿ ಕೇಂದ್ರ ಪ್ರಾರಂಭ ಸೇರಿದಂತೆ ರೈತರ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿ ವಿವಿಧ ರೈತ ಸಂಘಟನೆ ಕಾರ್ಯಕರ್ತರು ಗ್ರೇಡ್-2 ತಹಶೀಲ್ದಾರ್ ಕೆ.ರಾಧಾ ಅವರಿಗೆ ಮನವಿ ಸಲ್ಲಿಸಿದರು. ಕೇಂದ್ರ ಸರ್ಕಾರ ಕ್ವಿಂಟಲ್ ಗೋವಿನಜೋಳಕ್ಕೆ ರೂ. 2,400 ಬೆಂಬಲ ಬೆಲೆ ಘೋಷಿಸಿದೆ. ಆದರೆ, ಇಲ್ಲಿಯ ಮಾರುಕಟ್ಟೆಯಲ್ಲಿ ಕೇವಲ ರೂ.1,2000ರಿಂದ ರೂ.1,500 ಬೆಲೆಗೆ ಮಾರಾಟವಾಗುತ್ತಿದ್ದು, ರೈತರಿಗೆ ನಷ್ಟ ಉಂಟಾಗುತ್ತಿದೆ. ಸರ್ಕಾರ ತಕ್ಷಣ ಖರೀದಿ ಕೇಂದ್ರ ಆರಂಭಿಸಬೇಕು ಎಂದು ಆಗ್ರಹಿಸಿದರು.

ತಾಲ್ಲೂಕಿನ ಗಂಗಾಪುರ ಗ್ರಾಮದ ವಿಜಯ ನಗರ ಶುಗರ್ಸ್ ಸಕ್ಕರೆ ಕಾರ್ಖಾನೆಯು ಕಳೆದ ವರ್ಷ ಕ್ವಿಂಟಲ್ ಗೋವಿನಜೋಳಕ್ಕೆ ರೂ.2,800 ಬೆಲೆ ನಿಗದಿದ್ದರು. ಈ ವರ್ಷ ಮಧ್ಯವರ್ತಿಗಳ ಮೂಲಕ ರೈತರ ಬೆಳೆ ಖರೀದಿಸುತ್ತಿದ್ದು, ರೈತರಿಗೆ ಕಡಿಮೆ ಬೆಲೆ ನಿಗದಿಪಡಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬೆಂಬಲ ಬೆಲೆ ಖರೀದಿ ಕೇಂದ್ರ ಆರಂಭಿಸದಿದ್ದಲ್ಲಿ ನ.27ರಂದು ಸಕ್ಕರೆ ಕಾರ್ಖಾನೆ, ತಹಶೀಲ್ದಾರ್ ಕಚೇರಿ ಹಾಗೂ ಎಪಿಎಂಸಿ ಬಂದ್ ಮಾಡಿ ಪ್ರತಿಭಟನೆ ಮಾಡಲಾಗುವುದು ಎಂದು ರೈತರು ಎಚ್ಚರಿಸಿದರು. ಜಿಲ್ಲಾ ಹಸಿರು ಸೇನೆ ಅಧ್ಯಕ್ಷ ಶಂಕರಗೌಡ ಜಾಯನಗೌಡರ, ಕೆ.ಎ. ದೇಸಾಯಿ, ಚಂದ್ರಕಾಂತ ಉಳ್ಳಾಗಡ್ಡಿ, ಮುದಿಯಪ್ಪ ತಿಪ್ಪಣ್ಣವರ, ದ್ರುವಕುಮಾರ ಹೂಗಾರ ಇದ್ದರು.

### ಎಳನೀರು ವ್ಯಾಪಾರಿಗಳಿಗೆ ಧಮ್ಕಿ; 'ಕೊಕಾ' ಜಾರಿಗೆ ಕ್ರಮ: ಸಚಿವ ಸಂತೋಷ ಲಾಡ್

• **ಉದಯವಾಹಿನಿ ಧಾರವಾಡ**

ಹಫ್ತಾ ನೀಡುವಂತೆ ಎಳನೀರು ವ್ಯಾಪಾರಿಗಳಿಗೆ ಧಮ್ಕಿ ಹಾಕಿದ್ದರೆ, ಆ ವ್ಯಕ್ತಿಯ ವಿರುದ್ಧ ಪೊಲೀಸರು ಕ್ರಮ ಜರುಗಿಸುತ್ತಾರೆ' ಎಂದು ಸಚಿವ ಸಂತೋಷ ಲಾಡ್ ತಿಳಿಸಿದರು. ಈಚೆಗೆ ಬಿಡುಗಡೆಯಾದ ರೌಡಿ ಶೀಟರ್‌ವೊಬ್ಬ 'ಹಫ್ತಾ' ನೀಡುವಂತೆ ಎಳನೀರು ವ್ಯಾಪಾರಿಗಳಿಗೆ ಪೀಡಿಸುತ್ತಿದ್ದಾನೆಂದು ಮಾಧ್ಯಮದವರು ಕೇಳಿದ್ದಕ್ಕೆ ಪ್ರತಿಕ್ರಿಯಿಸಿದ ಅವರು, ಈಗಾಗಲೇ ಇಬ್ಬರನ್ನು ಬಂಧಿಸಿರುವುದಾಗಿ ಪೊಲೀಸ್ ಕಮಿಷನರ್ ತಿಳಿಸಿದ್ದಾರೆ. ಧಮ್ಕಿ ಹಾಕಿದವರ ವಿರುದ್ಧ 'ಕೊಕಾ' (ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ) ಜಾರಿ ಮಾಡುತ್ತಾರೆ' ಎಂದರು. ಅರಣ್ಯ ಇಲಾಖೆ ಜಾಗದಲ್ಲಿ ಇಸ್ಪೀಟ್ ಆಡಿದವರ ವಿರುದ್ಧ ಪ್ರಕರಣ ದಾಖಲಾಗಿದೆ. ನೌಕರರು ಇದ್ದರೆ ಪ್ರಕರಣದಲ್ಲಿ ಅವರ ಹೆಸರುಗಳನ್ನು ದಾಖಲಿಸುವಂತೆ ಪೊಲೀಸರಿಗೆ ತಿಳಿಸುತ್ತೇನೆ' ಎಂದು ಉತ್ತರಿಸಿದರು. ಎಂಎಸ್‌ಪಿ ನೋಂದಣಿ ಕೇಂದ್ರದಲ್ಲಿ ಹೆಸರು ಕಾಳು ಗುಣಮಟ್ಟ ಇಲ್ಲ ಎಂದು ಉಪ್ಪಿನಬೆಟಗೇರಿ ಮತ್ತು ಧಾರವಾಡದಲ್ಲಿ ನೋಂದಣಿ ಮಾಡುತ್ತಿಲ್ಲ ಎಂಬ ಕುರಿತು ವಿಚಾರಣೆ ಮಾಡುತ್ತೇನೆ' ಎಂದರು.

ಹೈಕಮಾಂಡ್ ಸೂಚನೆ ನೀಡಿದರೆ ಸಂಪುಟ ಪುನರ್‌ರಚನೆ ಮಾಡುತ್ತಾರೆ. ಕೋನರೆಡ್ಡಿ ಮಾತ್ರವಲ್ಲ ಎಲ್ಲರೂ ಆಕಾಂಕ್ಷಿಗಳು ಇದ್ದಾರೆ. ಈ ಬಗ್ಗೆ ಏನೂ ಬಹಿರಂಗವಾಗಿ ಮಾತನಾಡಬಾರದು ಎಂದು ಪಕ್ಷ ಸೂಚನೆ ನೀಡಿದೆ' ಎಂದರು.

### ಹಂಪಿ ಶೌಚಾಲಯಗಳಲ್ಲಿ ನೀರಿಲ್ಲ: ಪ್ರವಾಸಿಗರ ಅಳಲು

• **ಉದಯವಾಹಿನಿ ಹೊಸಪೇಟೆ**

ಹಂಪಿಗೆ ಪ್ರವಾಸಿಗರು ದೊಡ್ಡ ಸಂಖ್ಯೆಯಲ್ಲಿ ಬರತೊಡಗಿದ್ದು, ಕಮಲಮಹಲ್ ಸಮೀಪದ ಶೌಚಾಲಯದಲ್ಲಿ ವಾರದಿಂದೀಚೆಗೆ, ರಾಣಿ ಸ್ನಾನಗೃಹ ಸಮೀಪದ ಶೌಚಾಲಯದಲ್ಲಿ ಎರಡು ತಿಂಗಳಿಂದ ನೀರೇ ಇಲ್ಲ, ಕೆಲವೇ ದಿನಗಳ ಹಿಂದೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಹಂಪಿ ವೃತ್ತದ ಅಧೀಕ್ಷಕ ರಾಮಕೃಷ್ಣ ರೆಡ್ಡಿ ಅವರ ಜತೆಗೆ ವಾಹನ ಪಾರ್ಕಿಂಗ್ ಶುಲ್ಕದ ಕುರಿತಂತೆ ಮಾತನಾಡಿದ್ದಾಗ, ಪ್ರಮುಖ ಪ್ರವಾಸಿ ತಾಣಗಳ ಬಳಿ ಶೌಚಾಲಯಗಳಿವೆ, ಅಗತ್ಯದ ಸೌಲಭ್ಯಗಳಲ್ಲಿ ಅದೂ ಒಂದು, ಅದನ್ನು ಪೂರೈಸಿದ್ದೇವೆಯಲ್ಲ ಎಂದು ಹೇಳಿದ್ದರು. ಆದರೆ ನೀರೇ ಇಲ್ಲದ ಶೌಚಾಲಯ ಇಂದು ಪ್ರವಾಸಿಗರನ್ನು ಅಣಕಿಸುತ್ತಿದ್ದು, ಮಹಿಳೆಯರಂತೂ ತೀರಾ ಕಷ್ಟಪಡುತ್ತಿದ್ದಾರೆ. ಹಂಪಿ ನಿಜಕ್ಕೂ ಅದ್ಭುತ ಪ್ರವಾಸಿ ತಾಣ, ಆದರೆ ಅಗತ್ಯದ ಸೌಲಭ್ಯ ಕಲ್ಪಿಸುವಲ್ಲಿ ಇಲಾಖೆಗಳು ಇಲ್ಲಿ ವಿಫಲವಾಗಿದೆ. ನೀರಿಲ್ಲದ ಶೌಚಾಲಯಗಳಿಗೆ ಹೋಗಲು ಸಾಧ್ಯವೇ ಇಲ್ಲದ ಸ್ಥಿತಿ ಇದೆ' ಎಂದು ಮಹಾರಾಷ್ಟ್ರದ ಪುಣೆಯಿಂದ ಬಂದಿದ್ದ ಸಮೂವರು ಮಹಿಳೆಯರು ದೂರಿದರು.

### ಸಮಾಜಕ್ಕಾಗಿ ಗುರಿ ಅಚಲವಾಗಿರಲಿ

• **ಉದಯವಾಹಿನಿ ಪುತ್ತೂರು**

ಧರ್ಮಕಾರ್ಯ ನಡೆಯುವಲ್ಲಿ ಭಕ್ತರು ಸಮರ್ಪಣೆ ಭಾವದಿಂದ ಜವಾಬ್ದಾರಿ ನಿರ್ವಹಿಸಬೇಕು. ಅದರಿಂದ ಯಶಸ್ಸು ಪ್ರಾಪ್ತಿಯಾಗುತ್ತದೆ. ಇಂಥ ಉದ್ದೇಶವಿರಿಸಿಕೊಂಡು ಹನುಮಗಿರಿಯ ಬ್ರಹ್ಮಕಲಶೋತ್ಸವದಲ್ಲಿ ಸಂಘಟಿತರಾಗಿ ಜವಾಬ್ದಾರಿ ನಿರ್ವಹಿಸಬೇಕು. ಹಿಂದೂ ಸಮಾಜದ ಒಳಿತಿಗಾಗಿ ಗುರಿ ಅಚಲವಾಗಿರಬೇಕು' ಎಂದು ಕುಂಟಾರು ರವೀಶ ತಂತ್ರಿ ಹೇಳಿದರು.

ಪುತ್ತೂರು ತಾಲ್ಲೂಕಿನ ಈಶ್ವರಮಂಗಲದ ಹನುಮಗಿರಿ ಕ್ಷೇತ್ರದಲ್ಲಿ ಮುಂದಿನ ವರ್ಷ ನಡೆಯಲಿರುವ ಕೋಡಂಡರಾಮ-ಪಂಚಮುಖಿ ಆಂಜನೇಯ ದೇವರ ಬ್ರಹ್ಮಕಲಶೋತ್ಸವದ ಅಂಗವಾಗಿ ಈಚೆಗೆ ನಡೆದ ಸಮಾಲೋಚನೆ ಮತ್ತು ಸಮಿತಿ ರಚನೆ ಸಭೆಯಲ್ಲಿ ಮಾತನಾಡಿದರು.

ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿ, ಬ್ರಹ್ಮಕಲಶೋತ್ಸವದಲ್ಲಿ ಹಿಂದೂ ಸಮಾಜಕ್ಕೆ ಹೊಸ ಚೈತನ್ಯ, ಶಕ್ತಿ ನೀಡುವ ಕಾರ್ಯಕ್ರಮಗಳು ನಡೆಯಲಿವೆ. ಕೋಡಂಡರಾಮನ ಬ್ರಹ್ಮಕಲಶೋತ್ಸವ ಸಾಮರಸ್ಯ, ಸಮಾನತೆಯ ಕಾರ್ಯಕ್ರಮವಾಗಲಿದೆ ಎಂದರು. ಹನುಮಗಿರಿ ಕ್ಷೇತ್ರದ ಆಡಳಿತ ಧರ್ಮದರ್ಶಿ ನನ್ನ ಅಚ್ಚುತ ಮೂಡೆತ್ತಾಯ, ಮುಖಂಡರಾದ ಅರುಣ್ ಕುಮಾರ್ ಪುತ್ತಿಲ, ಕಾವು ಹೇಮನಾಥ ಶೆಟ್ಟಿ, ಮುರಳಿಕೃಷ್ಣ ಹಸಂತಡ್ಕ, ಶ್ರೀಕಾಂತ್ ಕಾಸರಗೋಡು, ಪ್ರವೀಣ್ ಸರಳಾಯ, ಆರ್.ಸಿ ನಾರಾಯಣ ರೆಂಜ, ಶ್ರೀರಾಮ ಪಕ್ಕಳ ಕರ್ನೂರುಗುತ್ತು, ಗಿರಿಶಂಕರ ಸುಲಾಯ ಪಾಲ್ಗೊಂಡಿದ್ದರು.


ಉದಯವಾಹಿನಿ ಚಿತ್ರ



# ಬಾಬು ಸರ್ ಕಪಾಳಕ್ಕೆ ಹೊಡೆದಿದ್ರು

ನನ್ನ ಮೊದಲ ಸಿನಿಮಾದ ಮೊದಲ ಶೂಟಿಂಗ್

ಎಸ್‌ವಿಆರ್ 50 ಕಾರ್ಯಕ್ರಮಕ್ಕೆ ಆಗಮಿಸಿದ ನಟ ಅರ್ಜುನ್ ಸರ್ಜಾ ತಮ್ಮ ಬಾಲ್ಯದ ನೆನಪು, ಸಿನಿಮಾ ಇಂಡಸ್ಟ್ರಿಗೆ ಪಾದಾರ್ಪಣೆ, ರಾಜೇಂದ್ರಸಿಂಗ್ ಬಾಬು ಅವರು ಕೊಟ್ಟ ಅವಕಾಶದ ಬಗ್ಗೆ ಮಾತಾಡಿ ಹಾಡಿ ಹೊಗಳಿದ್ದಾರೆ.

ನಿಮ್ಮ ನೆರಳಲ್ಲಿ ಬೆಳೆಯುವ ಎಲ್ಲರಿಗೂ ಇವತ್ತು ಗ್ರೇಟ್ ಡೇ. ನಿಮ್ಮ ನೆರಳಲ್ಲಿ ಬೆಳೆಯುತ್ತಿರುವ ನಮಗೂ 50 ವರ್ಷದ ಸಂಭ್ರಮಾಚರಣೆ. ಶಂಕರ್ ನಾಗ್ ಅಭಿನಯದ ಕಾಳಿಂಗ ಸರ್ಪ ಸಿನಿಮಾದ ಶೂಟಿಂಗ್ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ನನ್ನ ತಂದೆ ಮನೆಯಲ್ಲಿ ಇರಲಿಲ್ಲ. ನಮಗೆ ಸಿನಿಮಾದ ಬಗ್ಗೆ ಗೊತ್ತಿರಲಿಲ್ಲ. ಆಗ ನನ್ನ ಹತ್ತಿರ ಸಿನಿಮಾ ಮಾಡುತ್ತೀಯಾ ಅಂತ ಕೇಳಿದರು. ತಲೆ ಅಲ್ಲಾಡಿಸಿದ ಕೂಡಲೇ ಶರ್ಟ್ ಬಿಚ್ಚು ಎಂದು ಹೇಳಿ ತಂದೆ ಬಳಿ ನಾನು ಮಾತನಾಡುತ್ತೇನೆ ಎಂದಿದ್ದರು. ಹಾಗಾಗಿ ನಾನು ಸಿನಿಮಾ ಒಪ್ಪಿಕೊಂಡೆ. ಅದೇ ಸಿಂಹದ ಮರಿ ಸೈನ್ಯ ಎಂದು ವಿವರಿಸಿದರು.

ರಾಜೇಂದ್ರ ಸಿಂಗ್ ಬಾಬು ಸರ್ ನಿರ್ದೇಶನದ ಅಂತ ಸಿನಿಮಾ ಶೂಟಿಂಗ್‌ಗೆ ಹೋಗಿದ್ದೆ. ಅಲ್ಲಿ ಅಂಬರೀಶ್ ಸರ್ ಇದ್ದರು. ಸಿನಿಮಾ ಶೂಟಿಂಗ್ ಮೊದಲು ನೋಡಿದ್ದು ಅದೇ ಮೊದಲು. ಬಳಿಕ ನನ್ನ ಸಿಂಹದ ಮರಿ ಸಿನಿಮಾದ ಶವದ ಮುಂದೆ ಅಳೋ ಮೊದಲ ಸೀನ್ ಇತ್ತು. ನಾನು ಎಷ್ಟೇ ಅಳಬೇಕು ಅಂದರೂ ಅಳು ಬರುತ್ತಿರಲಿಲ್ಲ. ಸಿಟ್ಟಾದ ಬಾಬು ಸರ್ ಅಲ್ಲೇ ಕಪಾಳಕ್ಕೆ ಹೊಡೆದರು. ಆಗ ಕಣ್ಣೀರು ಬಂತು. ಕಣ್ಣೀರು ಬರುವುದನ್ನು ನೋಡಿ ತಗೋಳಿ ಈ ಶಾಟ್ ಎಂದು ಸೂಚಿಸಿದರು. ರಾಜೇಂದ್ರ ಸಿಂಗ್ ಬಾಬು ಅವರು 22 ವಯಸ್ಸಿನಲ್ಲೇ ಒಳ್ಳೆಯ ಸಿನಿಮಾ ಮಾಡಿದ್ದಾರೆ. ಮೊದಲ ಸಿನಿಮಾಗೂ ಈಗಿನ ಸಿನಿಮಾಗೂ ತುಂಬಾ ವ್ಯತ್ಯಾಸ ಇದೆ. ಹಿಂದೆ ಮಾಡಿದ ಸಿನಿಮಾದ ಥರ ಈಗ ಸಿನಿಮಾ ಬಂದೇ ಇಲ್ಲ. ಅವತ್ತು ಬಾಬು ಸರ್ ಅವಕಾಶ ಕೊಟ್ಟಿದ್ದಕ್ಕೆ ನಾನು ಇಲ್ಲಿ ನಿಂತಿದ್ದೀನಿ.



# 45 ಚಿತ್ರದ ಪ್ರಮೋಷನಲ್ ಸಾಂಗ್

ಲುಕ್ ಹೆಂಗಿದೆ ನೋಡಿ

ರಿಯಲ್ ಸ್ಟಾರ್ ಉಪೇಂದ್ರ, ಅಭಿನಯದ 45 ಚಿತ್ರದ ಆಫ್ರೋ ಟಪಾಂಗ್ ಹಾಡಿನ ಝಲಕ್ ರಿವೀಲ್ ಆಗಿದೆ. ಈ ಹಾಡಿನಲ್ಲಿ ಉಪ್ಪಿ ಸಖತ್ ಕಲರ್‌ಫುಲ್ ಆಗಿಯೇ ಕಾಣಿಸುತ್ತಿದ್ದಾರೆ. ಆಫ್ರಿಕಾದ ಘೆಟ್ಟೋ ಕಿಡ್ಸ್ ಕೂಡ ಇದರಲ್ಲಿದ್ದಾರೆ. ಈ ರಿಯಲ್ ಸ್ಟಾರ್ ಉಪೇಂದ್ರ, ಅಭಿನಯದ 45 ಚಿತ್ರದ ಪ್ರಮೋಷನಲ್ ಸಾಂಗ್ ರಿಲೀಸ್ ಆಗುತ್ತಿದೆ. ನವೆಂಬರ್1 ರಂದು ಈ ಹಾಡು ರಿಲೀಸ್ ಆಗುತ್ತಿದೆ. ಈ ಒಂದು ಹಾಡಿನ ಝಲಕ್ ಇರೋ ಮೇಕಿಂಗ್ ವಿಡಿಯೋ ಕೂಡ ಈಗ ಹೊರ ಬಂದಿದೆ. ಇನ್ನು ನಾಲ್ಕು ದಿನ ಕಳೆದರೆ ಆಯಿತು. ಈ ಹಾಡು ನಿಮ್ಮ ಮುಂದೆ ಅನ್ನುವ ಅರ್ಥದ ಪೋಸ್ಟರ್ ಮತ್ತು ಮೇಕಿಂಗ್ ವಿಡಿಯೋ ಹೊರ ಬಂದಿದೆ. ಎಂದಿನಂತೆ ಉಪ್ಪಿ ಇಲ್ಲೂ ಬೇರೆ ರೀತಿಯ ಕಾಸ್ಟ್ಯೂಮ್ ಅಲ್ಲಿಯೇ ಮಿಂಚುತ್ತಿದ್ದಾರೆ.

ಉಪೇಂದ್ರ, ಅಭಿನಯದ 45 ಚಿತ್ರ ಆಫ್ರೋ ಟಪಾಂಗ್ ಹಾಡು ರಿಲೀಸ್ ಆಗುತ್ತಿದೆ. ಈ ಹಾಡಿನಲ್ಲಿ ಆಫ್ರಿಕಾದ ಘೆಟ್ಟೋ ಕಿಡ್ಸ್ ಕೂಡ ಇದ್ದಾರೆ. ಆಫ್ರಿಕಾದ ಹೆಸರಾಂತ ಡ್ಯಾನ್ಸ್ ಟ್ರೂಪ್‌ನ ಹುಡುಗರು ಇವರು. ಇವರನ್ನ ಕನ್ನಡಕ್ಕೆ ತರುವ ಕೆಲಸವನ್ನ ಚಿತ್ರದ ಡೈರೆಕ್ಟರ್ ಅರ್ಜುನ್ ಜನ್ಯ ಮಾಡಿದ್ದಾರೆ. ಬೆಂಗಳೂರಿನಲ್ಲಿಯೇ ಈ ಒಂದು ಹಾಡಿನ ನಾಲ್ಕು ದಿನ ಶೂಟಿಂಗ್ ಮಾಡಿದ್ದಾರೆ. ಈ ಹಾಡಿನಲ್ಲಿ ಶಿವರಾಜ್ ಕುಮಾರ್, ರಾಜ್ ಬಿ ಶೆಟ್ಟಿ ಇದ್ದಾರೆ. ಈಗಾಗಲೇ ರಾಜ್ ಬಿ ಶೆಟ್ಟಿ ಈ ಹಾಡಿನಲ್ಲಿ ಹೇಗೆ ಕಾಣಿಸುತ್ತಾರೆ ಅನ್ನೋದು ತಿಳಿದಿದೆ. ಆದರೆ, ಈಗ ರಿಯಲ್ ಸ್ಟಾರ್ ಉಪೇಂದ್ರ ಅವರ ಲುಕ್ ರಿವೀಲ್ ಆಗಿದೆ. ಆಫ್ರೋ ಟಪಾಂಗ್ ಅನ್ನೋದು ಈ ಚಿತ್ರದ ಪ್ರಮೋಷನಲ್ ಸಾಂಗ್ ಆಗಿದೆ. ಈ ಹಾಡಿನಲ್ಲಿ ಈಗಾಗಲೇ ಹೇಳಿದಂತೆ ಉಪ್ಪಿ ಕೂಡ ಇದ್ದಾರೆ. ಇವರ ಡ್ಯಾನ್ಸ್ ಸ್ಟೆಪ್ ಹೇಗಿದೆ ಅನ್ನೋದರ ಝಲಕ್ ಈಗ ಸಾಂಗ್ ಮೇಕಿಂಗ್ ವಿಡಿಯೋದಲ್ಲಿಯೇ ರಿವೀಲ್ ಆಗಿದೆ.



# ನಾವೇ ಒಂದು ಬ್ರ್ಯಾಂಡ್

ನಾವ್ಯಾಕೆ ಬ್ರ್ಯಾಂಡ್ ಹಿಂದೆ ಹೋಗ್ಬೇಕು

ಶಿವಣ್ಣ ಖಡಕ್ ನುಡಿ

ಶಿವರಾಜ್‌ಕುಮಾರ್ ಇತ್ತೀಚೆಗೆ 'ಗತವೈಭವ' ಸಿನಿಮಾದ ಹಾಡು ರಿಲೀಸ್ ಇವೆಂಟ್‌ಗೆ ಆಗಮಿಸಿದ್ದರು. ಈ ವೇಳೆ ಸಾಕಷ್ಟು ವಿಚಾರಗಳ ಬಗ್ಗೆ ಮಾತಾಡಿದ್ದಾರೆ. ಸಿಂಪಲ್ ಸುನಿ ಹಾಗೂ ಅವರ ಕಾಂಬಿನೇಷನ್‌ನ ಸಿನಿಮಾ ನಿಲ್ಲಲು ಕಾರಣವೇನು ಎಂದು ಹೇಳಿದ್ದಾರೆ. ಇದೇ ವೇಳೆ ಮಾತನಾಡಿದ ಅವರು ನಾವು ಯಾವಾಗಲೂ ಬ್ರ್ಯಾಂಡ್ ಹಿಂದೆ ಹೋಗ್ಬಾರ್ದು, ನಾವೇ ಒಂದು ಬ್ರ್ಯಾಂಡ್ ಎಂದಿದ್ದಾರೆ.

ನನಗೆ ಬಂದಿರೋ ಭಾಗ್ಯ ಅಂದ್ರೆ ಹೊಸ ಹೊಸ ಡೈರೆಕ್ಟರ್ ಬರ್ತಾರೆ. ಹೊಸ ಹೊಸ ಕಥೆಗಳನ್ನ ಹೇಳ್ತಾರೆ. ಹೊಸಬರು ಬಂದು ಸಿನಿಮಾ ಮಾಡ್ಬೇಕು ಅಂತಾರೆ ಅದೇನು ಆಗುತ್ತೋ, ಬಿಡುತ್ತೋ ಗೊತ್ತಿಲ್ಲ. ಹೊಸಬರ ಮೇಲೆ ನಂಬಿಕೆ ಇಡ್ಬೇಕು. ನಾವು ಬ್ರ್ಯಾಂಡ್ ಹಿಂದೆ ಹೋಗೋದು ಬಿಡ್ಬೇಕು. ನಾವೇ ಒಂದು ಬ್ರ್ಯಾಂಡ್. ನಾವ್ಯಾಕೆ ಬ್ರ್ಯಾಂಡ್ ಹಿಂದೆ ಹೋಗ್ಬೇಕು ಬ್ರ್ಯಾಂಡ್ ಅದಾಗೇ ಆಗುತ್ತೆ. ನಂಬಿಕೆ ಇಡಬೇಕು ಎಂದಿದ್ದಾರೆ ಶಿವಣ್ಣ. ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾದ ಸಾಂಗ್ ಲಾಂಚ್ ಇವೆಂಟ್‌ಗೆ ಅತಿಥಿಯಾಗಿ ಶಿವಣ್ಣ ಬಂದಿದ್ದರು. ಸಿಂಪಲ್ ಸುನಿ ಹಾಗೂ ಶಿವರಾಜ್ ಕುಮಾರ್ ಕಾಂಬಿನೇಷನ್‌ನ ಮನಮೋಹಕ ಸಿನಿಮಾ ಸೆಟ್ಟೇರದಿರಲು ಕಾರಣವನ್ನ ಬಿಚ್ಚಿಟ್ಟಿದ್ದಾರೆ.



# ಗ್ಲಾಮರಸ್ ಪಾತ್ರಗಳಲ್ಲಿ ನಟಿ ಸಮಂತಾ

ಬಹುಕೋಟಿ ಚಿತ್ರಗಳಲ್ಲಿ ಮುಖ್ಯ ನಾಯಕಿ

ನಟಿ ಸಮಂತಾ ಋತ್ ಪ್ರಭು ಚಿತ್ರರಂಗಕ್ಕೆ ಕಾಲಿರಿಸಿ 15 ವರ್ಷಗಳಾಗಿವೆ. ಈ ಬಗ್ಗೆ ಸಂದರ್ಶನವೊಂದರಲ್ಲಿ ಮಾತನಾಡಿರುವ ನಟಿ, ತಮ್ಮ ಹಳೆಯ ಸಿನಿಮಾಗಳಲ್ಲಿ ಗ್ಲಾಮರಸ್ ಪಾತ್ರಗಳಲ್ಲಿ ನಟಿಸಿದ್ದರ ಬಗ್ಗೆಯೂ ಮಾತನಾಡಿದ್ದಾರೆ. ತಾವು ಕೆಲ ಸಿನಿಮಾಗಳಲ್ಲಿ ಬಹಳ ಕೆಟ್ಟದಾಗಿ ನಟಿಸಿದ್ದಾಗಿ ಸಹ ಸಮಂತಾ ಋತ್ ಪ್ರಭು ಹೇಳಿಕೊಂಡಿದ್ದಾರೆ. ಸಮಂತಾ ಋತ್ ಪ್ರಭು ದಕ್ಷಿಣ ಭಾರತದ ಬಲು ಜನಪ್ರಿಯ ನಟಿ. ತಮಿಳು, ತೆಲುಗಿನ ಹಲವಾರು ಸಿನಿಮಾಗಳಲ್ಲಿ ಸಮಂತಾ ನಟಿಸಿದ್ದಾರೆ. ಜೂ ಎನ್‌ಟಿಆರ್, ಅಲ್ಲು ಅರ್ಜುನ್, ವಿಜಯ್ ಇನ್ನೂ ಹಲವಾರು ಮಂದಿ ಸ್ಟಾರ್ ನಟರುಗಳೊಡನೆ ಸಮಂತಾ ನಟಿಸಿದ್ದು, ಹಲವಾರು ಹಿಟ್ ಸಿನಿಮಾಗಳನ್ನು ನೀಡಿದ್ದಾರೆ. ಕೆಲವು ನೆನಪುಳಿವ ಪಾತ್ರಗಳಲ್ಲಿ ಸಮಂತಾ ಕಾಣಿಸಿಕೊಂಡಿದ್ದಾರೆ. ಸಮಂತಾ ಚಿತ್ರರಂಗಕ್ಕೆ ಕಾಲಿರಿಸಿ 15 ವರ್ಷಗಳಾಗಿವೆ. ಇತ್ತೀಚೆಗೆ ಸಮಂತಾ ತಮ್ಮ ಹಳೆಯ ಸಿನಿಮಾಗಳ ಬಗ್ಗೆ ಮಾತನಾಡಿದ್ದು, ಅವುಗಳನ್ನು ನೋಡಿದರೆ 'ನನ್ನ ಬಗ್ಗೆ ನನಗೆ ಬೇಸರ ಆಗುತ್ತದೆ, ಮುಜುಗರ ಉಂಟಾಗುತ್ತದೆ' ಎಂದಿದ್ದಾರೆ. ಚಿತ್ರರಂಗಕ್ಕೆ ಕಾಲಿಟ್ಟಾಗ ಕೆಲವು ಗ್ಲಾಮರಸ್ ಪಾತ್ರಗಳಲ್ಲಿ ನಾನು ನಟಿಸಿದೆ. ಅದು ನನಗೆ ಆಗಲೇ ಮುಜುಗರ ತಂದಿದ್ದವು. ಆ ಗ್ಲಾಮರಸ್ ಪಾತ್ರಗಳನ್ನು ಅವಕಾಶಕ್ಕಾಗಿ ಒಪ್ಪಿಕೊಂಡಿದ್ದೆ ಅಷ್ಟೆ, ಅವುಗಳಲ್ಲಿ ನಟಿಸಲು ಸಹ ನಾನು ಕಷ್ಟಪಟ್ಟಿದ್ದೆ.



# ರಶ್ಮಿಕಾಗೆ ಮತ್ತೊಂದು ಭರ್ಜರಿ ಗೆಲುವು

ಯಶಸ್ಸಿನ ಅಲೆಯಲ್ಲಿರುವ ಥಾಮಾ ಗಳಿಸಿದ್ದೆಷ್ಟು

ರಶ್ಮಿಕಾ ಮಂದಣ್ಣ ಹಾಗೂ ಆಯುಷ್ಮಾನ್ ಖುರಾನಾ ಅಭಿನಯದ 'ಥಾಮಾ' ಚಿತ್ರಮಂದಿರಗಳಲ್ಲಿ ಉತ್ತಮ ಪ್ರದರ್ಶನ ಕಾಣುತ್ತಿದೆ. ಕನ್ನಡದಿಂದ ವೃತ್ತಿಜೀವನ ಆರಂಭಿಸಿ ಸದ್ಯ ಭಾರತೀಯ ಚಿತ್ರರಂಗದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಟಾರ್‌ಡಮ್ ಹೊಂದಿರುವ ನಟಿ ರಶ್ಮಿಕಾ ಮಂದಣ್ಣ ಅಭಿನಯದ ಬಹುನಿರೀಕ್ಷಿತ ಬಾಲಿವುಡ್ ಚಿತ್ರ 'ಥಾಮಾ' ಚಿತ್ರಮಂದಿರಗಳಲ್ಲಿ ಉತ್ತಮ ಪ್ರದರ್ಶನ ಕಾಣುತ್ತಿದೆ. ಬಾಲಿವುಡ್ ಸ್ಟಾರ್ ಆಯುಷ್ಮಾನ್ ಖುರಾನಾ ಪ್ರಮುಖ ಪಾತ್ರದಲ್ಲಿರುವ ಸಿನಿಮಾ ದೀಪಾವಳಿ ಸಂದರ್ಭ ಅಕ್ಟೋಬರ್ 21ರಂದು ಚಿತ್ರಮಂದಿರಗಳಿಗೆ ಎಂಟ್ರಿಕೊಟ್ಟಿತ್ತು.

ಮ್ಯಾಡಾಕ್ ಹಾರರ್ ಕಾಮಿಡಿ ಯೂನಿವರ್ಸ್‌ನ ಐದನೇ ಸಿನಿಮಾ 'ಥಾಮಾ' ತನ್ನ ಮೊದಲ ವಾರವನ್ನು ಭರ್ಜರಿಯಾಗಿ ಪೂರ್ಣಗೊಳಿಸಿದೆ. ಆದಿತ್ಯ ಸರ್ಪೋತ್‌ದಾರ್ ನಿರ್ದೇಶನದ ಈ ಚಿತ್ರ ಸಕಾರಾತ್ಮಕ ವಿಮರ್ಶೆ ಸ್ವೀಕರಿಸಿದ್ದು, ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಬಿಡುಗಡೆಯಾದ 7 ದಿನಗಳಲ್ಲಿ ಭಾರತದಲ್ಲಿ 95.55 ಕೋಟಿ ರೂ. ನಿವ್ವಳ ಮತ್ತು ವಿಶ್ವದಾದ್ಯಂತ 124.5 ಕೋಟಿ ರೂ.ಗೂ ಹೆಚ್ಚು ಕಲೆಕ್ಷನ್ ಮಾಡಿದೆ.

ಗುಡ್ ಬೈ ಮೂಲಕ 2022ರಲ್ಲಿ ಬಾಲಿವುಡ್ ಪ್ರವೇಶಿಸಿದ ಸೌತ್ ಸ್ಟಾರ್ ನಟಿ ರಶ್ಮಿಕಾ ಮಂದಣ್ಣ, ಮಿಷನ್ ಮಜ್ನು, ಅನಿಮಲ್, ಛಾವಾ, ಸಿಕಂದರ್ ನಲ್ಲಿ ಕಾಣಿಸಿಕೊಂಡಿದ್ದಾರೆ. ಇದೀಗ ಮತ್ತೊಂದು ಬಾಲಿವುಡ್ ಚಿತ್ರದ ಯಶಸ್ಸಿನಲೆಯಲ್ಲಿ ತೇಲುತ್ತಿದ್ದಾರೆ. ಟ್ರೇಡ್ ಟ್ರ್ಯಾಕರ್ ಸ್ಯಾಕ್ನಿಲ್ಕ್ ವರದಿ ಪ್ರಕಾರ, ಈ ಚಿತ್ರ ಸೋಮವಾರ ಸುಮಾರು 4.25 ಕೋಟಿ ರೂ. ಗಳಿಸಿದೆ.

24 ಕೋಟಿ ರೂಪಾಯಿಯೊಂದಿಗೆ ಕಳೆದ ಮಂಗಳವಾರದಂದು ಬಾಕ್ಸ್ ಆಫೀಸ್ ಪ್ರಯಾಣ ಪ್ರಾರಂಭಿಸಿದ ಚಿತ್ರ, ನಂತರ ಬುಧವಾರದಂದು 18.6 ಕೋಟಿ ರೂ., ಗುರುವಾರ 13 ಕೋಟಿ ರೂ. ಮತ್ತು ಶುಕ್ರವಾರ 10 ಕೋಟಿ ರೂ. ಗಳಿಸಿತು. ವಾರಾಂತ್ಯದಲ್ಲಿ ಗಳಿಕೆಯಲ್ಲಿ ಏರಿಕೆ ಕಂಡುಬಂತು. ಶನಿವಾರ 13.1 ಕೋಟಿ ರೂ. ಮತ್ತು ಭಾನುವಾರ 12.6 ಕೋಟಿ ರೂ. ಕಲೆಕ್ಷನ್ ಮಾಡಿದ ಸಿನಿಮಾ ತನ್ನ ಮೊದಲ ಸೋಮವಾರ 4.25 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ಸ್ತ್ರೀ, ಭೇಡಿಯಾ ಮತ್ತು ಮುಂಜ್ಯಾ ದಂತಹ ಹಿಟ್ ಸಿನಿಮಾಗಳನ್ನು ಒಳಗೊಂಡಿರುವ ಮ್ಯಾಡಾಕ್ ಹಾರರ್ ಕಾಮಿಡಿ ಯೂನಿವರ್ಸ್‌ನ ಭಾಗವಾಗಿರುವ ಥಾಮಾ, ಜಾನಪದ, ಫ್ಯಾಂಟಸಿ ಮತ್ತು ಹಾಸ್ಯವನ್ನು ಒಳಗೊಂಡ ರಕ್ತಸಿಕ್ತ ಪ್ರೇಮಕಥೆ.

# 4ನೇ ಸ್ಥಾನಕ್ಕೆ ಯಾರ ಪೈಪೋಟಿ

ಆಸ್ಟ್ರೇಲಿಯಾ ವಿರುದ್ಧದ ಮೂರನೇ ಏಕದಿನ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುವಾಗ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್ ಗಾಯಗೊಂಡರು. ಅವರನ್ನು ಸಿಡ್ನಿ ಆಸ್ಪತ್ರೆಯ ಐಸಿಯುಗೆ ದಾಖಲಿಸಲಾಗಿದೆ. ಅವರು ವೈದ್ಯಕೀಯವಾಗಿ ಸ್ಥಿರವಾಗಿದ್ದರೂ, ಬಿಸಿಸಿಐ ವೈದ್ಯಕೀಯ ತಂಡದ ಸದಸ್ಯರು ಸಿಡ್ನಿಯಲ್ಲಿ ಅವರೊಂದಿಗೆ ಇದ್ದಾರೆ. ಅಯ್ಯರ್ ಚೇತರಿಕೆ ನಿರೀಕ್ಷೆಗಿಂತ ಹೆಚ್ಚು ಸಮಯ ತೆಗೆದುಕೊಳ್ಳಬಹುದು. ಇದರ ಮಧ್ಯೆ, ದಕ್ಷಿಣ ಆಫ್ರಿಕಾ ವಿರುದ್ಧದ ಭಾರತದ ಮುಂದಿನ ಏಕದಿನ ಸರಣಿ ನವೆಂಬರ್ 30 ರಂದು ತವರಿನಲ್ಲಿ ಆರಂಭವಾಗಲಿದೆ.

ಅಯ್ಯರ್ ಈ ಸರಣಿಗೆ ಅಲಭ್ಯರಾದರೆ ಇವರ ಸ್ಥಾನಕ್ಕೆ ಯಾವ ಆಟಗಾರ ಎಂಬ ಕುರಿತು ಚರ್ಚೆಗಳು ಪ್ರಾರಂಭವಾಗಿವೆ.ಸಂಜು ಸ್ಯಾಮ್ಸನ್ ಮೊದಲ ಆಯ್ಕೆ

ಮೊದಲ ಮತ್ತು ಪ್ರಮುಖ ಆಯ್ಕೆ ಸಂಜು ಸ್ಯಾಮ್ಸನ್. ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿಗೆ ಸಂಜು ಸ್ಯಾಮ್ಸನ್ ಅವರು ಆಯ್ಕೆ ಆಗಲಿದ್ದಾರೆ, ಅವರು ಮೇಲಿನ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಾರೆ ಎಂದು ಹೇಳಲಾಗಿತ್ತು. ಆದರೆ,



ಅವರನ್ನು ತಂಡದಿಂದ ಹೊರಗಿಡಲಾಯಿತು. ಈಗ ನಾಲ್ಕನೇ ಸ್ಥಾನ ಖಾಲಿಯಾಗಿರುವುದರಿಂದ ಸ್ಯಾಮ್ಸನ್‌ಗೆ ಅವಕಾಶ ಸಿಗುವ ಸಂಭವವಿದೆ. ವಿಶೇಷವಾಗಿ ಕಳೆದ ಏಕದಿನ ಸರಣಿಯಲ್ಲಿ ಅವರು ಪ್ರದರ್ಶಿಸಿದ ಫಾರ್ಮ್ ಅನ್ನು ಪರಿಗಣಿಸಿದರೆ, ಉತ್ತಮ ಆಯ್ಕೆ ಎನ್ನಬಹುದು. ಸ್ಯಾಮ್ಸನ್ ಇಲ್ಲಿಯವರೆಗೆ 16 ಏಕದಿನ ಪಂದ್ಯಗಳನ್ನು ಆಡಿದ್ದಾರೆ ಮತ್ತು 56.66 ರ ಪ್ರಭಾವಶಾಲಿ ಸರಾಸರಿಯಲ್ಲಿ 510 ರನ್ ಗಳಿಸಿದ್ದಾರೆ. ಅವರ ಹೆಸರಿಗೆ ಒಂದು ಶತಕ ಮತ್ತು ಮೂರು ಅರ್ಧಶತಕಗಳಿವೆ. ಅವರು ಅಯ್ಯರ್ ಬದಲಿಗೆ ನಾಲ್ಕನೇ ಸ್ಥಾನದಲ್ಲಿ ಸುಲಭವಾಗಿ ಹೊಂದಿಕೊಳ್ಳಬಹುದು ಮತ್ತು ಸಾಕಷ್ಟು ರನ್ ಗಳಿಸಬಹುದು.

ಇನ್ನೊಂದು ಹೆಸರು ತಿಲಕ್ ವರ್ಮಾ. ಕಳೆದ ತಿಂಗಳು ಏಷ್ಯಾಕಪ್ ಫೈನಲ್‌ನಲ್ಲಿ ಪಾಕಿಸ್ತಾನ ವಿರುದ್ಧ ಮ್ಯಾಚ್ ವಿನ್ನಿಂಗ್ ಇನ್ನಿಂಗ್ಸ್‌ನೊಂದಿಗೆ ತಿಲಕ್ ವರ್ಮಾ ಸ್ಟಾರ್ ಆದರು. ಅವರು 2023 ರಲ್ಲಿ ಬಾಂಗ್ಲಾದೇಶ ವಿರುದ್ಧ ಏಕದಿನ ಪಂದ್ಯಕ್ಕೆ ಪಾದಾರ್ಪಣೆ ಮಾಡಿದರು. ಇಲ್ಲಿಯವರೆಗೆ, ಅವರು ನಾಲ್ಕು ಪಂದ್ಯಗಳಲ್ಲಿ ಕೇವಲ 68 ರನ್ ಗಳಿಸಿದ್ದಾರೆ. ಏಷ್ಯಾ ಕಪ್‌ನಲ್ಲಿ ಅವರ ಅದ್ಭುತ ಪ್ರದರ್ಶನದ ನಂತರ, ಅವರು ಉತ್ತಮ ಫಾಮ್‌ನಲ್ಲಿದ್ದಾರೆ ಮತ್ತು ಆತ್ಮವಿಶ್ವಾಸದಿಂದ ತುಂಬಿದ್ದಾರೆ.



# ಗ್ರೀನ್ ಹೋಗಿ ಪಿಂಕಾದ ಪಾಕ್ ಜೆರ್ಸಿ

ಬಣ್ಣ ಬದಲಿಸಲು ಮುಖ್ಯ ಕಾರಣ

ಪಾಕಿಸ್ತಾನ್ ಮತ್ತು ಸೌತ್ ಆಫ್ರಿಕಾ ನಡುವಣ ಟಿ20 ಸರಣಿಯು ಇಂದಿನಿಂದ (ಅ.28) ಶುರುವಾಗಲಿದೆ. ಮೂರು ಪಂದ್ಯಗಳ ಈ ಸರಣಿಯ ಮೊದಲ ಮ್ಯಾಚ್‌ನಲ್ಲಿ ಪಾಕಿಸ್ತಾನ್ ತಂಡವು ಪಿಂಕ್ ಜೆರ್ಸಿಯಲ್ಲಿ ಕಣಕ್ಕಿಳಿಯಲಿದೆ. ಸಾಮಾನ್ಯವಾಗಿ ಗ್ರೀನ್ ಜೆರ್ಸಿ ಧರಿಸುವ ಪಾಕ್ ಪಡೆ ಈ ಬಾರಿ ಗುಲಾಬಿ ಬಣ್ಣದೊಂದಿಗೆ ಕಾಣಿಸಿಕೊಳ್ಳಲಿದ್ದಾರೆ.

ಇನ್ನು ಪಾಕಿಸ್ತಾನ್ ತಂಡವು ತನ್ನ ಜೆರ್ಸಿ ಬಣ್ಣ ಬದಲಿಸಲು ಮುಖ್ಯ ಕಾರಣ #PINKtober ಅಭಿಯಾನ. ಅಂದರೆ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಪಾಕಿಸ್ತಾನ್ ಆಟಗಾರರು ಪಿಂಕ್ ಜೆರ್ಸಿಯಲ್ಲಿ ಕಣಕ್ಕಿಳಿಯಲಿದ್ದಾರೆ. ಅಭಿಯಾನದ ಭಾಗವಾಗಿ, ಆತಿಥೇಯ ತಂಡವು ವಿಶೇಷವಾಗಿ ವಿನ್ಯಾಸಗೊಳಿಸಲಾದ ಗುಲಾಬಿ ಬಣ್ಣದ ಜೆರ್ಸಿಗಳನ್ನು ಧರಿಸಲಿದ್ದು, ಸೌತ್ ಆಫ್ರಿಕಾದ ಆಟಗಾರರು ಮತ್ತು ಪಂದ್ಯದ ಅಧಿಕಾರಿಗಳು ಗುಲಾಬಿ ಬಣ್ಣದ ರಿಬ್ಬನ್‌ಗಳನ್ನು ಧರಿಸಲಿದ್ದಾರೆ ಎಂದು ಪಾಕಿಸ್ತಾನ್ ಕ್ರಿಕೆಟ್ ಮಂಡಳಿ ತಿಳಿಸಿದೆ.

ಪಾಕಿಸ್ತಾನ್ ಟಿ20 ತಂಡ: ಸೈಮ್ ಅಯ್ಯೂಬ್, ಸಾಹಿಬ್‌ಝಾದ ಫರ್ಹಾನ್ (ವಿಕೆಟ್ ಕೀಪರ್), ಬಾಬರ್ ಆಝಂ, ಹಸನ್ ನವಾಝ್, ಸಲ್ಮಾನ್ ಅಲಿ ಅಘಾ (ನಾಯಕ), ಮೊಹಮ್ಮದ್ ನವಾಝ್, ಫಹೀಮ್ ಅಶ್ರಫ್, ಶಾಹೀನ್ ಅಫ್ರಿದಿ, ನಸೀಮ್ ಶಾ, ಮೊಹಮ್ಮದ್ ವಾಸಿಂ ಜೂನಿಯರ್, ಅಬ್ರಾರ್ ಅಹ್ಮದ್, ಸಲ್ಮಾನ್ ಮಿರ್ಝಾ, ಉಸ್ಮಾನ್ ಖಾನ್, ಉಸ್ಮಾನ್ ತಾರಿಖ್, ಅಬ್ದುಲ್ ಸಮದ್.

**ಸೌತ್ ಆಫ್ರಿಕಾ ಟಿ20 ತಂಡ:** ಕ್ವಿಂಟನ್ ಡಿ ಕಾಕ್ (ವಿಕೆಟ್ ಕೀಪರ್), ರೀಝ ಹೆಂಡ್ರಿಕ್ಸ್, ಲುವಾನ್-ಡ್ರೆ ಪ್ರಿಟೋರಿಯಸ್, ಡೆವಾಲ್ಡ್ ಬ್ರೆವಿಸ್, ಡೊನೊವನ್ ಫೆರೀರಾ (ನಾಯಕ), ಜಾರ್ಜ್ ಲಿಂಡೆ, ಕಾರ್ಬಿನ್ ಬಾಷ್, ನ್ಕಾಬಯೋಮ್ಜಿ ಪೀಟರ್, ಲುಂಗಿ ಎನ್‌ಗಿಡಿ, ನಾಂಡ್ರೆ ಬರ್ಗರ್, ಲಿಝಾಡ್ ವಿಲಿಯಮ್ಸ್, ಟೋನಿ ಡಿ ಝೋರ್ಝಿ, ಮ್ಯಾಥ್ಯೂ ಬ್ರೀಟ್ಝ್ಕೆ, ಒಟ್ನಿಲ್ ಬಾರ್ಟ್‌ಮನ್, ಆಯಂಡಿಲೆ ಸಿಮಿಲೇನ್.



# ಆರ್‌ಸಿಬಿ ಉಳಿಸಿಕೊಳ್ಳುವ 5 ಆಟಗಾರ್ತಿಯರು

ಒಂದು ಫ್ರಾಂಚೈಸಿ ಒಟ್ಟು ಐವರನ್ನು ರಿಟೈನ್ ಮಾಡಿಕೊಳ್ಳಬಹುದು. ಹೀಗೆ ರಿಟೈನ್ ಮಾಡಿಕೊಳ್ಳುವ ಮೊದಲ ಆಟಗಾರ್ತಿಗೆ 3.50 ಕೋಟಿ ರೂ, ಎರಡನೇ ಆಟಗಾರ್ತಿಗೆ 2.50 ಕೋಟಿ ರೂ, ಮೂರನೇ ಆಟಗಾರ್ತಿಗೆ 1.75 ಕೋಟಿ ರೂ, ನಾಲ್ಕನೇ ಆಟಗಾರ್ತಿಗೆ 1 ಕೋಟಿ ರೂ. ಹಾಗೂ ಐದನೇ ಆಟಗಾರ್ತಿಗೆ 50 ಲಕ್ಷ ರೂ. ನಿಗದಿ ಮಾಡಲಾಗಿದೆ. ಅಂದರೆ ಒಟ್ಟು 9.25 ಕೋಟಿ ರೂ. ವ್ಯಯಿಸಿ ಗರಿಷ್ಠ 5 ಆಟಗಾರ್ತಿಯರನ್ನು ತಂಡದಲ್ಲೇ ಉಳಿಸಿಕೊಳ್ಳಬಹುದು.

**ಸ್ಮೃತಿ ಮಂಧಾನ:** ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿ ಸ್ಮೃತಿ ಮಂಧಾನ ಅವರನ್ನು ಆರ್‌ಸಿಬಿ ಫ್ರಾಂಚೈಸಿ ರಿಟೈನ್ ಮಾಡಿಕೊಳ್ಳುವುದು ಖಚಿತ. ಏಕೆಂದರೆ ಆರ್‌ಸಿಬಿ ಪರ ಈವರೆಗೆ 26 ಪಂದ್ಯಗಳನ್ನಾಡಿರುವ ಅವರು ಒಟ್ಟು 646 ರನ್ ಕಲೆಹಾಕಿದ್ದಾರೆ. ಅಲ್ಲದೆ 2024 ರಲ್ಲಿ ಸ್ಮೃತಿ ನಾಯಕತ್ವದಲ್ಲಿ ಆರ್‌ಸಿಬಿ ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ಹೀಗಾಗಿ 3.50 ಕೋಟಿ ರೂ. ನೀಡಿ ಆರ್‌ಸಿಬಿ ಸ್ಮೃತಿ ಮಂಧಾನ ಅವರನ್ನು ರಿಟೈನ್ ಮಾಡಿಕೊಳ್ಳುವುದು ಖಚಿತ ಎಂದೇ ಹೇಳಬಹುದು.

**ಎಲ್ಲಿಸ್ ಪೆರ್ರಿ:** ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ತನ್ನ ದ್ವಿತೀಯ ರಿಟೆನ್ಷನ್ ಆಗಿ ಆಸ್ಟ್ರೇಲಿಯನ್ ಆಲ್‌ರೌಂಡರ್ ಎಲ್ಲಿಸ್ ಪೆರ್ರಿ ಅವರನ್ನು ಆಯ್ಕೆ ಮಾಡಲಿದೆ. 2024 ರಲ್ಲಿ ಆರ್‌ಸಿಬಿ ತಂಡವು ಚಾಂಪಿಯನ್ ಪಟ್ಟ ಅಲಂಕರಿಸುವಲ್ಲಿ ಪೆರ್ರಿ ಪ್ರಮುಖ ಪಾತ್ರವಹಿಸಿದ್ದರು. ಅಲ್ಲದೆ ಆರ್‌ಸಿಬಿ ಪರ 25 ಪಂದ್ಯಗಳನ್ನಾಡಿರುವ ಎಲ್ಲಿಸ್ 972 ರನ್ ಕಲೆಹಾಕಿದ್ದಲ್ಲದೇ, 14 ವಿಕೆಟ್ ಕಬಳಿಸಿ ಮಿಂಚಿದ್ದಾರೆ. ಹೀಗಾಗಿ ಆರ್‌ಸಿಬಿ ತಂಡದ ದ್ವಿತೀಯ ರಿಟೈನ್ ಎಲ್ಲಿಸ್ ಪೆರ್ರಿ ಆಗಿರಲಿದ್ದಾರೆ.

**ರಿಚಾ ಘೋಷ್:** ಆರ್‌ಸಿಬಿ ತಂಡವು ಮೂರನೇ ರಿಟೈನ್ ಆಗಿ ವಿಕೆಟ್ ಕೀಪರ್ ಬ್ಯಾಟರ್ ರಿಚಾ ಘೋಷ್ ಅವರನ್ನು ಆಯ್ಕೆ ಮಾಡಲಿದೆ. ಕಳೆದ ಮೂರು ಸೀಸನ್‌ಗಳಿಂದ ಆರ್‌ಸಿಬಿ ಪರ ಕಣಕ್ಕಿಳಿಯುತ್ತಿರುವ ರಿಚಾ ಘೋಷ್ ಈವರೆಗೆ 26 ಪಂದ್ಯಗಳನ್ನಾಡಿದ್ದು, ಈ ವೇಳೆ 625 ರನ್ ಕಲೆಹಾಕಿದ್ದಾರೆ. ಹೀಗಾಗಿ ಯುವ ವಿಕೆಟ್ ಕೀಪರ್‌ನನ್ನು ಆರ್‌ಸಿಬಿ ಕೈ ಬಿಡುವ ಸಾಧ್ಯತೆಯಿಲ್ಲ.

**ರೇಣುಕಾ ಸಿಂಗ್ ಠಾಕೂರ್:** ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಮುಖ ವೇಗಿ ರೇಣುಕಾ ಠಾಕೂರ್ ಅವರನ್ನು ಸಹ ಈ ಬಾರಿ ಬಿಡುಗಡೆ ಮಾಡುವ ಸಾಧ್ಯತೆಯಿಲ್ಲ. ತಂಡದ ಪ್ರಮುಖ ಬೌಲರ್ ಆಗಿರುವ ಕಾರಣ ಅವರನ್ನು ಮುಂದಿನ ಸೀಸನ್‌ಗೂ ರಿಟೈನ್ ಮಾಡಿಕೊಳ್ಳಬಹುದು.

**ಶ್ರೇಯಾಂಕಾ ಪಾಟೀಲ್:** ಕರುನಾಡ ಕುವರಿ ಶ್ರೇಯಾಂಕಾ ಪಾಟೀಲ್ ಅವರನ್ನು ಸಹ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ರಿಟೈನ್ ಮಾಡಿಕೊಳ್ಳುವ ಸಾಧ್ಯತೆಯಿದೆ. ಏಕೆಂದರೆ 2024ರಲ್ಲಿ ಆರ್‌ಸಿಬಿ ಕಪ್ ಎತ್ತಿ ಹಿಡಿಯುವಲ್ಲಿ ಶ್ರೇಯಾಂಕಾ ಅವರ ಕೊಡುಗೆ ಕೂಡ ಇದೆ.



# ಟೀಮ್ ಇಂಡಿಯಾದಲ್ಲಿ ಒಂದು ಬದಲಾವಣೆ ಖಚಿತ: ಯಾರಿಗೆ ಚಾನ್ಸ್

ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಟಿ20 ಸರಣಿಯು ಬುಧವಾರದಿಂದ ಅ.29 ಶುರುವಾಗಲಿದೆ. ಕ್ಯಾನ್‌ಬೆರಾದಲ್ಲಿ ನಡೆಯಲಿರುವ ಈ ಸರಣಿಯ ಮೊದಲ ಪಂದ್ಯಕ್ಕಾಗಿ ಟೀಮ್ ಇಂಡಿಯಾ ತನ್ನ ಪ್ಲೇಯಿಂಗ್ ಇಲೆವೆನ್‌ನಲ್ಲಿ ಒಂದು ಬದಲಾವಣೆ ಮಾಡುವುದು ಖಚಿತ.

ಏಕೆಂದರೆ ಏಷ್ಯಾಕಪ್‌ನಲ್ಲಿ ಕಣಕ್ಕಿಳಿದಿದ್ದ ಹಾರ್ದಿಕ್ ಪಾಂಡ್ಯ ಈ ಸರಣಿಗೆ ಆಯ್ಕೆಯಾಗಿಲ್ಲ. ಏಷ್ಯಾಕಪ್ ವೇಳೆ ಸ್ನಾಯು ಸೆಳೆತದ ಸಮಸ್ಯೆಗೆ ಒಳಗಾಗಿದ್ದ ಪಾಂಡ್ಯ ಇನ್ನೂ ಸಹ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಹೀಗಾಗಿ ಆಸ್ಟ್ರೇಲಿಯಾ ವಿರುದ್ಧದ ಸರಣಿಯಲ್ಲಿ ಪಾಂಡ್ಯ ಕಾಣಿಸಿಕೊಳ್ಳುವುದಿಲ್ಲ. ಅವರ ಬದಲಿಗೆ ಆಡುವ ಬಳಗದಲ್ಲಿ ವೇಗದ ಬೌಲಿಂಗ್ ಆಲ್‌ರೌಂಡರ್ ಆಗಿ ಶಿವಂ ದುಬೆ ಕಣಕ್ಕಿಳಿಯಲಿದ್ದಾರೆ. ಅಲ್ಲದೆ ವೇಗಿಗಳಾಗಿ ಜಸ್‌ಪ್ರೀತ್ ಬುಮ್ರಾ, ಹರ್ಷಿತ್ ರಾಣಾ ಹಾಗೂ ಅರ್ಷದೀಪ್ ಸಿಂಗ್ ಕೂಡ ಕಣಕ್ಕಿಳಿಯುವ ಸಾಧ್ಯತೆಯಿದೆ. ಇನ್ನು ಸ್ಪಿನ್ನರ್ ಆಗಿ ವರುಣ್ ಚಕ್ರವರ್ತಿಗೆ ಅವಕಾಶ ಸಿಗಬಹುದು. ಅದರಂತೆ ಟೀಮ್ ಇಂಡಿಯಾದ ಸಂಭಾವ್ಯ ಪ್ಲೇಯಿಂಗ್ ಇಲೆವೆನ್ ಈ ಕೆಳಗಿನಂತಿರಲಿದೆ...

**ಭಾರತ ಟಿ20 ತಂಡ:** ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಶುಭಮನ್ ಗಿಲ್ (ಉಪನಾಯಕ), ತಿಲಕ್ ವರ್ಮಾ, ನಿತೀಶ್ ಕುಮಾರ್ ರೆಡ್ಡಿ, ಶಿವಂ ದುಬೆ, ಅಕ್ಷರ್ ಪಟೇಲ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬುಮ್ರಾ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ವಾಷಿಂಗ್ಟನ್ ಸುಂದರ್, ರಿಂಕು ಸಿಂಗ್, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಹರ್ಷಿತ್ ರಾಣಾ.





# ತಂಡದಲ್ಲಿ ಇರದ ಕೊಹ್ಲಿಯೇ ನಂಬರ್1

ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್

ಭಾರತ ಮತ್ತು ಆಸ್ಟ್ರೇಲಿಯಾ ನಡುವಣ 12ನೇ ಟಿ20 ಸರಣಿಗೆ ವೇದಿಕೆ ಸಿದ್ಧವಾಗಿದೆ. ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಈ ಬಾರಿಯ ಟಿ20 ಸರಣಿಯಲ್ಲಿ ಒಟ್ಟು 5 ಪಂದ್ಯಗಳನ್ನಾಡಲಾಗುತ್ತದೆ. ಈ ಪಂದ್ಯಗಳ ಮೂಲಕ ಅತ್ಯಧಿಕ ರನ್ ಗಳಿಸಿದರೆ ಗ್ಲೆನ್ ಮ್ಯಾಕ್ಸ್‌ವೆಲ್ ವಿರಾಟ್ ಕೊಹ್ಲಿಯ ದಾಖಲೆ ಮುರಿಯಬಹುದು. ಅಂದರೆ ಭಾರತ ಮತ್ತು ಆಸ್ಟ್ರೇಲಿಯಾ ನಟುವಣ ಟಿ20 ಸರಣಿಯಲ್ಲಿ ಅತ್ಯಧಿಕ ರನ್ ಕಲೆಹಾಕಿದ ದಾಖಲೆ ವಿರಾಟ್ ಕೊಹ್ಲಿಯ ಹೆಸರಿನಲ್ಲಿದೆ. ಕಿಂಗ್ ಕೊಹ್ಲಿ ಆಸ್ಟ್ರೇಲಿಯಾ ವಿರುದ್ಧ 23 ಟಿ20 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 22 ಇನಿಂಗ್ಸ್‌ಗಳಲ್ಲಿ ಬ್ಯಾಟ್ ಬೀಸಿರುವ ಅವರು ಒಟ್ಟು 794 ರನ್ ಕಲೆಹಾಕಿದ್ದಾರೆ. ಆದರೆ ಈ ಬಾರಿಯ ಸರಣಿಯಲ್ಲಿ ವಿರಾಟ್ ಕೊಹ್ಲಿ ಕಣಕ್ಕಿಳಿಯುವುದಿಲ್ಲ.

ಏಕೆಂದರೆ 2024ರ ಟಿ20 ವಿಶ್ವಕಪ್ ಬೆನ್ನಲ್ಲೇ ಕೊಹ್ಲಿ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಹೀಗಾಗಿ ಆಸ್ಟ್ರೇಲಿಯಾ ವಿರುದ್ಧದ 5 ಪಂದ್ಯಗಳ ಟಿ20 ಸರಣಿಯಲ್ಲಿ ಕಿಂಗ್ ಕೊಹ್ಲಿ ಕಾಣಿಸಿಕೊಳ್ಳುವುದಿಲ್ಲ. ಇತ್ತ ವಿರಾಟ್ ಕೊಹ್ಲಿ ನಿವೃತ್ತಿಯಾಗಿರುವ ಕಾರಣ ಮುಂಬರುವ ಪಂದ್ಯಗಳ ಮೂಲಕ ಭಾರತ-ಆಸ್ಟ್ರೇಲಿಯಾ ಟಿ20 ಸರಣಿಯ ರನ್ ಸರದಾರ ಪಟ್ಟಿಯಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್‌ಗೆ ಅಗ್ರಸ್ಥಾನಕ್ಕೇರಬಹುದು. ಅದಕ್ಕಾಗಿ ಅವರು ಬರೋಬ್ಬರಿ 221 ರನ್‌ಗಳನ್ನು ಕಲೆಹಾಕಬೇಕಿದೆ. ಭಾರತದ ವಿರುದ್ಧ ಈವರೆಗೆ 22 ಟಿ20 ಪಂದ್ಯಗಳನ್ನಾಡಿರುವ ಗ್ಲೆನ್ ಮ್ಯಾಕ್ಸ್‌ವೆಲ್ ಒಟ್ಟು 574 ರನ್ ಕಲೆಹಾಕಿದ್ದಾರೆ. ಈ ವೇಳೆ 2 ಭರ್ಜರಿ ಶತಕ ಹಾಗೂ 2 ಅರ್ಧಶತಕಗಳನ್ನು ಸಹ ಸಿಡಿಸಿದ್ದಾರೆ. ಅದರಂತೆ ಮುಂಬರುವ ಪಂದ್ಯಗಳಲ್ಲಿ ಮ್ಯಾಕ್ಸ್‌ವೆಲ್ ಭರ್ಜರಿ ಪ್ರದರ್ಶನ ನೀಡಿ 221 ರನ್ ಗಳಿಸಿದರೆ ಇಂಡೊ-ಆಸೀಸ್ ಟಿ20 ಸರಣಿಯಲ್ಲಿ ಅತ್ಯಧಿಕ ರನ್ ಕಲೆಹಾಕಿದ ಬ್ಯಾಟರ್ ಎನಿಸಿಕೊಳ್ಳಲಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA,
No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966